# ಕಾರ್ಮಿಕ ದೃಷ್ಟಿಕೋನ

ಮಾರ್ಚ್ 2026 ಬೆಲೆ: ರೂ. 7/-

ಸಂಪುಟ: 39 ಸಂಚಿಕೆ: 1

SUCI(C) ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್

ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ


**ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ವಿರುದ್ಧ ಜನಾಕ್ರೋಶ**



ಒಳ-ಪುಟಗಳಲ್ಲಿ


ಕೇಂದ್ರ ಬಜೆಟ್ 2026: ....................02

ಪಶ್ಚಿಮ ಬಂಗಾಲದ ಮಂದಿರ–ಮಸೀದಿ ರಾಜಕೀಯ....................03


ವಿಬಿ ಜಿ ರಾಮ್ ಜಿ ಕಾಯ್ದೆ – ಗ್ರಾಮೀಣ ಜನರಿಗೆ ಉದ್ಯೋಗ ಖಾತರಿ ಖೋತಾ....................06

ಬೀಜ ಮಸೂದೆ 2025 – ಕೃಷಿಕರ ಗಾಯದ ಮೇಲೊಂದು ಬರೆ!....................07

'ಶಾಂತಿ' ಕಾಯ್ದೆ 2025–ಯಾರ ಹಿತಕ್ಕಾಗಿ?....................08


'ನಮ್ಮೂರ ಶಾಲೆ ಉಳಿಸಲು' ರಾಜ್ಯಮಟ್ಟದ ಪೋಷಕರು–ವಿದ್ಯಾರ್ಥಿಗಳ ಸಮಾವೇಶ....................10


### 14-3-2026- ಕಾರ್ಲ್ ಮಾರ್ಕ್ಸ್ ಸ್ಮರಣ ದಿನ



".....ಇನ್ನು ನನ್ನ ವಿಷಯಕ್ಕೆ ಬಂದರೆ, ಆಧುನಿಕ ಮಾನವ ಸಮಾಜದಲ್ಲಿ, ವರ್ಗಗಳ ಅಸ್ತಿತ್ವವನ್ನಾಗಲಿ ಅಥವಾ ಅವುಗಳ ನಡುವಿನ ಸಂಘರ್ಷವನ್ನಾಗಲಿ ಕಂಡು ಹಿಡಿದ ಕೀರ್ತಿಯು ನನಗೆ ಸೇರಬೇಕಾದದ್ದಲ್ಲ. ನನಗಿಂತಲೂ ಬಹಳ ಹಿಂದೆಯೇ, ಬೂರ್ಜ್ವಾ ಚರಿತ್ರಕಾರರು, ವರ್ಗಗಳ ಸಂಘರ್ಷದ ಐತಿಹಾಸಿಕ ಬೆಳವಣಿಗೆಯನ್ನು ಮತ್ತು ಬೂರ್ಜ್ವಾ ಅರ್ಥಶಾಸ್ತ್ರಜ್ಞರು, ವರ್ಗಗಳ ಆರ್ಥಿಕ ರಚನೆಯನ್ನು ವಿವರಿಸಿದ್ದರು. ನಾನು, 1) ಉತ್ಪಾದನೆಯ ಬೆಳವಣಿಗೆಯಲ್ಲಿ ನಿರ್ದಿಷ್ಟ ಐತಿಹಾಸಿಕ ಹಂತಗಳೊಂದಿಗೆ ಮಾತ್ರ ವರ್ಗಗಳ ಅಸ್ತಿತ್ವವು ಸಂಬಂಧಿಸಿದೆ ಎಂದು; 2) ವರ್ಗ ಸಂಘರ್ಷವು ಅವಶ್ಯಕವಾಗಿ ಕಾರ್ಮಿಕವರ್ಗದ ಸರ್ವಾಧಿಕಾರಕ್ಕೆ ಕಾರಣವಾಗುತ್ತದೆ ಎಂದು; 3) ಆ ಸರ್ವಾಧಿಕಾರ ಮಾತ್ರವೇ ಎಲ್ಲ ವರ್ಗಗಳ ವಿನಾಶಕ್ಕೆ ಮತ್ತು ವರ್ಗರಹಿತ ಸಮಾಜಕ್ಕೆ ಪರಿವರ್ತನೆಯನ್ನು ತರುತ್ತದೆ ಎಂದು ಸಾಬೀತು ಮಾಡಿದ್ದೇ ಅಲ್ಲಿ ನವೀನವಾದದ್ದು....."

– ಕಾರ್ಲ್ ಮಾರ್ಕ್ಸ್ (ಜೆ.ವಿಡ್ಮೇಯರ್‌ಗೆ ಬರೆದ ಪತ್ರದಲ್ಲಿ....)



5-3-2026 ಜೆ.ವಿ.ಸ್ಟಾಲಿನ್ ಸ್ಮರಣ ದಿನ

ಮಾರ್ಕ್ಸ್‌ವಾದವು ಕೇವಲ ಸಮಾಜವಾದದ ಸಿದ್ಧಾಂತವಲ್ಲ; ಅದು ಒಂದು ಸಮನ್ವಯ ವಿಶ್ವ ದೃಷ್ಟಿಕೋನ, ಒಂದು ದಾರ್ಶನಿಕ ವ್ಯವಸ್ಥೆಯಾಗಿದೆ. ಅದರಿಂದ, ಮಾರ್ಕ್ಸ್‌ರವರ ಕಾರ್ಮಿಕವರ್ಗದ ಸಮಾಜವಾದವು ಹೊರಹೊಮ್ಮುತ್ತದೆ. ಅದನ್ನೇ ದ್ವಂದ್ವಾತ್ಮಕ ವಸ್ತುವಾದವೆಂದು ಕರೆಯಲಾಗುತ್ತದೆ.

– ಜೆ.ವಿ.ಸ್ಟಾಲಿನ್

(1906ರ ಅರಾಜಕತಾವಾದ ಮತ್ತು ಸಮಾಜವಾದ ಎಂಬ ತಮ್ಮ ಕೃತಿಯಲ್ಲಿ)

# ರಾಜ್ಯ ಬಜೆಟ್: ಹುಸಿ ನಿರೀಕ್ಷೆಗಳ ಭ್ರಮೆ ಸೃಷ್ಟಿ

ಮುಖ್ಯವಾಹಿನಿ ಮಾಧ್ಯಮಗಳು ಬಣ್ಣಿಸಿರುವಂತೆ ದಾಖಲೆಯ ಸತತ 17ನೇ ರಾಜ್ಯ ಬಜೆಟ್ಟನ್ನು ರಾಜ್ಯದ ವಿತ್ತ ಮಂತ್ರಿಗಳೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದೇ ಮಾರ್ಚ್ ಆರರಂದು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿದ್ದಾರೆ. ಇದು ಸಿದ್ದರಾಮಯ್ಯನವರ ಪಾಲಿಗೆ ದಾಖಲೆ ಆಗಿದ್ದರೂ, ರಾಜ್ಯದ ಜನಗಳ ಪಾಲಿಗೆ ಯಾವ ಮೈಲಿಗಲ್ಲನ್ನೂ ನಿರ್ಮಿಸದ, ಜನಗಳ ಜೀವನದಲ್ಲಿ ಯಾವ ಸಣ್ಣ ಬದಲಾವಣೆಯನ್ನು ತರಲೂ ಶಕ್ಯವಿಲ್ಲದ ಒಂದು ವಾಡಿಕೆಯ ವಾರ್ಷಿಕ ಕಸರತ್ತಾಗಿ ಉಳಿಯಿತಷ್ಟೇ! ಈ ಬಜೆಟ್ಟನ್ನು ಯಥಾರೀತಿ ಆಡಳಿತ ಪಕ್ಷದವರು 'ಅಭಿವೃದ್ಧಿಪರ', 'ದೂರದೃಷ್ಟಿ', 'ಜನ ಕಲ್ಯಾಣ' ಇತ್ಯಾದಿ ಪದಪುಂಜಗಳಿಂದ ಬಣ್ಣಿಸಿದರೆ, ವಿರೋಧ ಪಕ್ಷದವರು, 'ಅಭಿವೃದ್ಧಿ ವಿರೋಧಿ', 'ಆದಾಯದ ಕೊರತೆ ಇರುವ', 'ಅಂಕಿ ಅಂಶಗಳ ಕಸರತ್ತು' ಇತ್ಯಾದಿಯಾಗಿ ಮೂದಲಿಸಿ ವಿರೋಧಿಸಿದ್ದಾರೆ. ಹತ್ತಾರು ವರ್ಷಗಳಿಂದ ಬಜೆಟ್ ಅಧಿವೇಶನದಲ್ಲಿ ಮಂಡಿಸುತ್ತಾ ಬಂದಿರುವ ಬಜೆಟ್‌ಗಳನ್ನು ಸಾಮಾನ್ಯ ಜನ ಮೆಲುಕು ಹಾಕಿದರೆ, ಮೇಲೆ ಹೇಳಿರುವ ಆಡಳಿತ – ವಿರೋಧ ಪಕ್ಷಗಳ ಹೇಳಿಕೆಗಳು ಅದಲು– ಬದಲಾಗಿರುವುದು ಬಿಟ್ಟರೆ, ಈ ಎಲ್ಲಾ ಪಕ್ಷಗಳು ರಾಜ್ಯದ ಜನತೆಯ ಮೇಲೆ ಹೊರಿಸಿರುವ ಸಾಲದ ಪ್ರಮಾಣ ಹೆಚ್ಚಿಸುತ್ತಲೇ ಬಂದಿವೆ, ಜನ ವಿರೋಧಿ ಬಜೆಟ್ ಗಳನ್ನು ಮಂಡಿಸುತ್ತಲೇ ಬಂದಿವೆ, ಜನಗಳ ಜೀವನವನ್ನು ನರಕಸದೃಶ ಮಾಡಿವೆ!! 'ಆಡಳಿತ– ವಿರೋಧ' ಪಕ್ಷಗಳ ಹಣೆಪಟ್ಟಿ ತೆಗೆದು ನೋಡಿದಾಗ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಈ ಎಲ್ಲಾ ಪಕ್ಷಗಳು ಜನ ವಿರೋಧಿ ಬಜೆಟ್‌ಗಳನ್ನು ಮಂಡಿಸಿ, ರಾಜ್ಯದ ಸಂಪತ್ತನ್ನು ಲೂಟಿ ಮಾಡಿ ಬಂಡವಾಳಶಾಹಿಗಳ ಆದಾಯವನ್ನು ಹಿಗ್ಗಿಸುತ್ತಾ ಬಂದಿರುವುದು ಸೂರ್ಯನ ಬೆಳಕಿನಷ್ಟೇ ಸ್ಪಷ್ಟವಾಗಿ ಗೋಚರಿಸುತ್ತದೆ.

ಸಿದ್ದರಾಮಯ್ಯನವರ ದಾಖಲೆಯ ಬಜೆಟ್ ರಾಜ್ಯದ ದುಡಿಯುವ ಜನಗಳಿಗೆ ದ್ರೋಹ ಬಗೆಯುವಲ್ಲಿಯೂ ದಾಖಲೆ ನಿರ್ಮಿಸಿದೆ!

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್ ಮಂಡಿಸುವ ಮುನ್ನ ವಿಧಾನಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸಭಾಧ್ಯಕ್ಷರನ್ನು ಉದ್ದೇಶಿಸಿ, "ಪ್ರಗತಿಶೀಲ ರಾಜ್ಯದ ಜನರ ತೆರಿಗೆ ಹಣಕ್ಕೆ ಪ್ರಮುಖ ಟ್ರಸ್ಟಿಯಾದ ನಾನು ಸರ್ವರ ಏಳಿಗೆಯನ್ನು ಬಯಸಿ 17ನೇ ಆಯವ್ಯಯವನ್ನು ಮಂಡಿಸುತ್ತಿದ್ದೇನೆ. ನಾಡಿನ ಏಳು ಕೋಟಿ ಕನ್ನಡಿಗರ ನಿರೀಕ್ಷೆಗಳನ್ನು ಅರಿತಿದ್ದೇವೆ, ಅವರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಬದ್ಧತೆಯಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಆಯವ್ಯಯವು ನಾಡಿನ ರೈತರ, ದಮನಿತರ, ಕಾರ್ಮಿಕರ, ಮಹಿಳೆಯರ, ಅಶಕ್ತರ, ಅಲ್ಪಸಂಖ್ಯಾತರ

2ನೇ ಪುಟಕ್ಕೆ....

## ಅಡುಗೆ ಅನಿಲ ಸಿಲಿಂಡರ್ ದರ ಏರಿಕೆಗೆ ಖಂಡನೆ

**ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾ ಅವರು ನೀಡಿರುವ ಹೇಳಿಕೆ**

ಕೇಂದ್ರ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಗೃಹಬಳಕೆಯ ಅನಿಲ ಸಿಲಿಂಡರ್‌ಗೆ ರೂ. 60 ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್‌ಗೆ ರೂ. 114 ಹೆಚ್ಚಳ ಮಾಡಿರುವ ಕ್ರಮವನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ.



ಅಮೆರಿಕಾ ಮತ್ತು ಇಸ್ರೇಲ್, ಇರಾನ್ ಮೇಲೆ ದಾಳಿ ನಡೆಸಿದ ಪರಿಣಾಮವಾಗಿ, ಭಾರತಕ್ಕೆ ಕಚ್ಚಾತೈಲ ಹಾಗೂ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವುದೇ ಈ ಬೆಲೆ ಏರಿಕೆಗೆ ಕಾರಣ ಎಂದು ಹೇಳಲಾಗಿದೆ.

ಆದರೆ ಈ ಕುರಿತು ಕೇಂದ್ರ ಬಿಜೆಪಿ ಸರ್ಕಾರವು ಕೆಲವು ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ. ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾತೈಲ ಖರೀದಿಸುತ್ತಿದ್ದಾಗ, ಅದರ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಲಿಲ್ಲ ಏಕೆ? ರಷ್ಯಾದಿಂದ ತೈಲ ಖರೀದಿ ನಿಲ್ಲಿಸುವಂತೆ ಅಮೆರಿಕಾ ಹಾಕಿದ ಒತ್ತಡಕ್ಕೆ ಮಣಿದಿರುವುದು ಯಾರ ಹಿತಾಸಕ್ತಿಗಾಗಿ? ಇನ್ನು 50 ದಿನಗಳಿಗೆ ಬೇಕಾದಷ್ಟು ಕಚ್ಚಾತೈಲ ಇದೆ ಎಂಬ ವರದಿ ಇರುವಾಗ ಹಳೆಯ ದರದಲ್ಲಿ ಖರೀದಿಸಿದ ಇದರ ಬೆಲೆ ಈಗಲೇ ಏರಿಕೆ ಮಾಡಿರುವುದು ಯಾಕಾಗಿ?

ಈಗಾಗಲೇ ಜನರ ಜೀವನ ವೆಚ್ಚ ದುಬಾರಿಯಾಗಿದೆ. ಅದೇ ಪ್ರಮಾಣದಲ್ಲಿ ವೇತನ ಹೆಚ್ಚಳ ಅಥವಾ ಉದ್ಯೋಗ ಸೃಷ್ಟಿ ಆಗಿಲ್ಲ. ದುಡಿಯುವ ಜನ ಸಾಲ ಮಾಡಿಯೇ ಬದುಕಬೇಕಾದ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಇಂಧನ ದರ ಹೆಚ್ಚಳ ಮಾಡಿದಲ್ಲಿ ಅದು ಇನ್ನಷ್ಟು ಹಣದುಬ್ಬರಕ್ಕೆ ಕಾರಣವಾಗಲಿದೆ ಎಂಬ ಕನಿಷ್ಠ ತಿಳಿವಳಿಕೆ ಈ ಸರ್ಕಾರಕ್ಕೆ ಇರಬೇಕು.

ಯುದ್ಧದ ಸಂಕಷ್ಟದಲ್ಲೂ ಜನರನ್ನು ದೋಚಬೇಕೆಂಬ ಕೇಂದ್ರ ಸರ್ಕಾರದ ಈ ಅಮಾನವೀಯ ಧೋರಣೆಯನ್ನು ಎಸ್‌ಯುಸಿಐ(ಸಿ) ಕಟುವಾಗಿ ವಿರೋಧಿಸುತ್ತದೆ. ತಕ್ಷಣವೇ ಈ ದರ ಏರಿಕೆಯನ್ನು ವಾಪಸ್ ಪಡೆಯಬೇಕು, ಕಚ್ಚಾತೈಲ ಖರೀದಿಗೆ ಪರ್ಯಾಯ ಮೂಲಗಳನ್ನು ತೀರ್ಮಾನಿಸುವ ಸಾರ್ವಭೌಮತ್ವವನ್ನು ಸರ್ಕಾರ ಉಳಿಸಿಕೊಳ್ಳಬೇಕು ಎಂದು ಒತ್ತಾಯಿಸುತ್ತದೆ.

## ಇರಾನ್ ಮೇಲೆ ಅಪ್ರಚೋದಿತ ದಾಳಿಗೆ ಎಸ್‌ಯುಸಿಐ(ಸಿ) ಖಂಡನೆ

ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಅವರು ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆ



"ಇರಾನ್ ಮೇಲೆ ಅಮೆರಿಕ–ಇಸ್ರೇಲ್ ನಡೆಸಿದ ಅಪ್ರಚೋದಿತ ಸೇನಾ ದಾಳಿಯನ್ನು ಎಸ್‌ಯುಸಿಐ (ಕಮ್ಯುನಿಸ್ಟ್) ತೀವ್ರವಾಗಿ ಖಂಡಿಸುತ್ತದೆ ಮತ್ತು ನರಹಂತಕ ಇಸ್ರೇಲ್ ಪ್ರಧಾನಿಯನ್ನು 'ಸಹೋದರ' ಎಂದು ಕರೆದ ಪ್ರಧಾನಿ ಮೋದಿಯವರ ನಡೆಯನ್ನು ತಿರಸ್ಕರಿಸುತ್ತದೆ.

ಝಿಯೋನಿಸ್ಟ್ ಇಸ್ರೇಲ್, ಅಮೆರಿಕದ ಸಾಮ್ರಾಜ್ಯಶಾಹಿಗಳ ಸಂಪೂರ್ಣ ಬೆಂಬಲದೊಂದಿಗೆ 'ಮುನ್ನೆಚ್ಚರಿಕೆ ದಾಳಿ' ಎಂಬ ಆಧಾರರಹಿತ ಕಾರಣ ನೀಡಿ ಇರಾನ್ ಮೇಲೆ ನಡೆಸಿದ ಅತೀವ ಕ್ರೂರ ಸೇನಾ ದಾಳಿಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ವಾಸ್ತವವಾಗಿ ಇದು ಅಮೆರಿಕದ ಸಾಮ್ರಾಜ್ಯಶಾಹಿಗಳು ಇರಾನ್ ಮೇಲೆ ನಡೆಸುತ್ತಿರುವ ಬಹಿರಂಗ ಸೇನಾ ಹಸ್ತಕ್ಷೇಪವಾಗಿದೆ. ಇರಾನ್ ಮೇಲಿನ ಈ ನೇರ ಆಕ್ರಮಣವನ್ನು ತಕ್ಷಣವೇ ನಿಲ್ಲಿಸಬೇಕೆಂದು ನಾವು ಒತ್ತಾಯಿಸುತ್ತೇವೆ.

ಭಾರತದ ಪ್ರಧಾನಮಂತ್ರಿಯವರು ಇಸ್ರೇಲ್‌ಗೆ ಭೇಟಿ ನೀಡಿ, ಅಲ್ಲಿನ ಪ್ರಧಾನಿಯನ್ನು ಭಯೋತ್ಪಾದನೆ ವಿರುದ್ಧದ ಹೋರಾಟಗಾರ ಎಂದು ಶ್ಲಾಘಿಸಿದ ಬೆನ್ನಲ್ಲೇ ಈ ದಾಳಿ ನಡೆದಿರುವುದು ಅತ್ಯಂತ ತಿರಸ್ಕಾರಾರ್ಹವಾಗಿದೆ.

ಸಾರ್ವಭೌಮ ಇರಾನ್ ವಿರುದ್ಧದ ಈ ನೇರ ಆಕ್ರಮಣವನ್ನು ನಿಲ್ಲಿಸುವಂತೆ ಅಮೆರಿಕ ಸಾಮ್ರಾಜ್ಯಶಾಹಿಗಳು ಮತ್ತು ಝಿಯೋನಿಸ್ಟ್ ಇಸ್ರೇಲ್ ಮೇಲೆ ಒತ್ತಡ ಹೇರಲು, ವಿಶ್ವದ ಜನತೆ ಒಗ್ಗೂಡಿ ಪ್ರಬಲ ಜನ ಚಳವಳಿಯನ್ನು ರೂಪಿಸಬೇಕೆಂದು ನಾವು ಕರೆ ನೀಡುತ್ತೇವೆ. ಭಾರತ ಸರ್ಕಾರವು ತಕ್ಷಣವೇ ಝಿಯೋನಿಸ್ಟ್ ಇಸ್ರೇಲ್‌ನೊಂದಿಗೆ ಎಲ್ಲಾ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆ." ■

# ಕೇಂದ್ರ ಬಜೆಟ್ 2026: ಕಾರ್ಪೋರೇಟ್ ಕುಳಗಳಿಗಾಗಿ ಸಂಕಲ್ಪ - ಜನಸಾಮಾನ್ಯರಿಗೆ ಸಂಕಷ್ಟ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಮಂಡಿಸಿರುವ 2026–27ನೇ ಸಾಲಿನ ಕೇಂದ್ರ ಬಜೆಟ್, 'ವಿಕಸಿತ ಭಾರತ' ಮತ್ತು 'ಕರ್ತವ್ಯ ಕಾಲ' ಎಂಬ ಆಕರ್ಷಕ ಘೋಷಣೆಗಳ ನಡುವೆ ಜನಸಾಮಾನ್ಯರ ನೈಜ ಸಮಸ್ಯೆಗಳನ್ನು ಮರೆಮಾಚುವ ಪ್ರಯತ್ನವಾಗಿದೆ. ಹಣಕಾಸು ಸಚಿವರು ತಮ್ಮ ಭಾಷಣದಲ್ಲಿ ಕಳೆದ 12 ವರ್ಷಗಳ ಆಡಳಿತವು ಆರ್ಥಿಕ ಸ್ಥಿರತೆ ಮತ್ತು ಶಿಸ್ತನ್ನು ತಂದಿದೆ ಎಂದು ಪ್ರತಿಪಾದಿಸಿದ್ದಾರೆ. ಆದರೆ, ಬಜೆಟ್‌ನ ಆಳವಾದ ವಿಶ್ಲೇಷಣೆಯು ಇದು ಕೇವಲ ಅಂಕಿಅಂಶಗಳ ಜಾಲವಾಗಿದ್ದು, ಶ್ರೀಮಂತ ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಯುವ ಮತ್ತು ಬಡವರನ್ನು ಮತ್ತಷ್ಟು ಕಷ್ಟಕ್ಕೆ ದೂಡುವ ದಸ್ತಾವೇಜಾಗಿದೆ ಎಂದು ಸ್ಪಷ್ಟಪಡಿಸುತ್ತದೆ.

**ಆದಾಯದ ಮೂಲಗಳು ಮತ್ತು ತೆರಿಗೆ ಅನ್ಯಾಯ:**

ಸರ್ಕಾರದ ಆದಾಯದ ಮೂಲಗಳನ್ನು ಗಮನಿಸಿದರೆ, ದೇಶವು ಸಾಲದ ಸುಳಿಯಲ್ಲಿ ಸಿಲುಕುತ್ತಿರುವುದು ಸ್ಪಷ್ಟವಾಗುತ್ತದೆ. ಸರ್ಕಾರದ ಒಟ್ಟು 53.47 ಲಕ್ಷ ಕೋಟಿ ರೂಪಾಯಿಗಳ ಆದಾಯದಲ್ಲಿ ಶೇ. 24ರಷ್ಟು ಭಾಗ ಸಾಲದಿಂದಲೇ ಬರುತ್ತದೆ. ದೇಶದ ಒಟ್ಟು ಸಾಲವು 214 ಲಕ್ಷ ಕೋಟಿ ರೂಪಾಯಿಗಳಿಗೆ ತಲುಪುವ ಅಂದಾಜಿದೆ, ಇದು ಪ್ರತಿ ಭಾರತೀಯನ ಮೇಲೆ ಭಾರಿ ಹೊರೆಯಾಗಿದೆ. ತೆರಿಗೆ ವ್ಯವಸ್ಥೆಯಲ್ಲಿನ ಅಸಮಾನತೆಯು ಎದ್ದು ಕಾಣುತ್ತಿದೆ. ಒಟ್ಟು ಆದಾಯದಲ್ಲಿ ವೈಯಕ್ತಿಕ ಆದಾಯ ತೆರಿಗೆಯ ಪಾಲು ಶೇ. 21 ಆಗಿದ್ದರೆ, ಬೃಹತ್ ಕಂಪನಿಗಳು ಪಾವತಿಸುವ ಕಾರ್ಪೋರೇಟ್ ತೆರಿಗೆ ಕೇವಲ ಶೇ. 18ರಷ್ಟಿದೆ. ತಿಂಗಳಿಗೆ 20 ಲಕ್ಷ ರೂಪಾಯಿಗಿಂತ ಹೆಚ್ಚು ಆದಾಯ ಹೊಂದಿರುವವರ ಮೇಲೆ ಕೇವಲ ಶೇ. 1ರಷ್ಟು ಹೆಚ್ಚುವರಿ 'ಸಂಪತ್ತು ತೆರಿಗೆ' (Wealth Tax) ವಿಧಿಸಿದರೆ, ಸರ್ಕಾರಕ್ಕೆ ವಾರ್ಷಿಕ 15,000 ಕೋಟಿ ರೂಪಾಯಿ ಹೆಚ್ಚುವರಿ ಆದಾಯ ಬರಬಹುದು. ಅದೇ ರೀತಿ, ಕಾರ್ಪೋರೇಟ್ ತೆರಿಗೆಯನ್ನು ಶೇ. 22ರಿಂದ ಶೇ. 25ಕ್ಕೆ ಏರಿಸಿದರೆ 1.2 ಲಕ್ಷ ಕೋಟಿ ರೂಪಾಯಿ ಆದಾಯ ಲಭಿಸುತ್ತದೆ. ಆದರೆ ಸರ್ಕಾರವು ಶ್ರೀಮಂತರಿಗೆ ಈ ತೆರಿಗೆ ವಿಧಿಸುವ ಬದಲು, ಸಾಮಾನ್ಯ ಜನರಿಂದ ಜಿಎಸ್‌ಟಿ ಮೂಲಕ ಹಣ ವಸೂಲಿ ಮಾಡುತ್ತಿದೆ. ದೇಶದ ಕೆಳಮಟ್ಟದ ಶೇ. 50ರಷ್ಟು ಜನ ಶೇ. 64ರಷ್ಟು ಜಿಎಸ್‌ಟಿ ಪಾವತಿಸುತ್ತಿದ್ದರೆ, ಮೇಲ್‌ಸ್ತರದ ಶೇ. 10ರಷ್ಟು ಶ್ರೀಮಂತರು ಕೇವಲ ಶೇ. 4ರಷ್ಟು ಮಾತ್ರ ನೀಡುತ್ತಿದ್ದಾರೆ.ಅಂದರೆ, ದಿನಬಳಕೆಯ ವಸ್ತುಗಳನ್ನು ಕೊಳ್ಳುವ ಬಡವನು ಶ್ರೀಮಂತನಿಗಿಂತ ಹೆಚ್ಚಿನ ತೆರಿಗೆ ಹೊರೆಯನ್ನು ಅನುಭವಿಸುತ್ತಿದ್ದಾನೆ.

**ಬಡತನ ಮತ್ತು ಹಸಿವಿನ ವಾಸ್ತವ:**

ಕಳೆದ ಹತ್ತು ವರ್ಷಗಳಲ್ಲಿ 25 ಕೋಟಿ ಜನರನ್ನು ಬಹು ಆಯಾಮದ ಬಡತನದಿಂದ ಮುಕ್ತಗೊಳಿಸಿದ್ದೇವೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ, ಇದೇ ಸರ್ಕಾರ 80 ಕೋಟಿ ಜನರಿಗೆ ಉಚಿತ ಪಡಿತರ ನೀಡುತ್ತಿರುವುದು ದೇಶದ ಶೇ. 60ಕ್ಕೂ ಹೆಚ್ಚು ಜನರಿಗೆ ಸ್ವಂತವಾಗಿ ಆಹಾರ ಕೊಳ್ಳುವ ಶಕ್ತಿಯಿಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಆಹಾರ ಹಣದುಬ್ಬರವು ಶೇ.8ರಷ್ಟಿದ್ದು, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಸಾಮಾನ್ಯ ಜನರ ತಟ್ಟೆಯಿಂದ ಪೌಷ್ಟಿಕ ಆಹಾರ ಮಾಯವಾಗುತ್ತಿದೆ. ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತವು 127 ದೇಶಗಳಲ್ಲಿ 105ನೇ ಸ್ಥಾನಕ್ಕೆ ಕುಸಿದಿರುವುದು ದೇಶದ ಪೌಷ್ಟಿಕತೆಯ ದುಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಗ್ರಾಮೀಣ ಭಾಗದ ಶೇ. 66ರಷ್ಟು ಜನರಿಗೆ ಇಂದಿಗೂ ಮೂಲಭೂತ ಆರೋಗ್ಯ ಸೌಲಭ್ಯಗಳು ಲಭ್ಯವಿಲ್ಲದಿರುವುದು ಸರ್ಕಾರದ ವಿಫಲತೆಗೆ ಸಾಕ್ಷಿಯಾಗಿದೆ.

**ಕೃಷಿ ಕ್ಷೇತ್ರದ ಕಡೆಗಣನೆ:**

ರೈತರ ಆದಾಯವನ್ನು ದುಪ್ಪಟ್ಟು ಮಾಡುವ ಭರವಸೆಗಳು ಕೇವಲ ಚುನಾವಣಾ ಗಿಮಿಕ್ ಆಗಿ ಉಳಿದಿವೆ. ರೈತರ ದೀರ್ಘಕಾಲದ ಬೇಡಿಕೆಯಾದ ಕನಿಷ್ಠ ಬೆಂಬಲ ಬೆಲೆಗೆ (MSP)ಕಾನೂನುಬದ್ಧ ಖಾತರಿ ನೀಡಲು ಸರ್ಕಾರ ಈ ಬಾರಿಯೂ ನಿರಾಕರಿಸಿದೆ. ಕೃಷಿ ಕ್ಷೇತ್ರಕ್ಕೆ ನೀಡಲಾದ ಅನುದಾನದಲ್ಲಿನ ಶೇ. 2ರಷ್ಟು ಹೆಚ್ಚಳವು ಹಣದುಬ್ಬರಕ್ಕಿಂತಲೂ ಕಡಿಮೆಯಿದೆ. ಗ್ರಾಮೀಣ ಬಡವರ ಜೀವನಾಡಿಯಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು (MGNREGA) ಈಗ 'ವಿಬಿ–ಜಿ ರಾಮ್ ಜಿ' ಎಂದು ಮರುನಾಮಕರಣ ಮಾಡಲಾಗಿದೆ. ಆದರೆ ಇಲ್ಲಿ ಅನುದಾನದ ಹಂಚಿಕೆಯಲ್ಲಿ ಭಾರಿ ಅಸಮಾನತೆ ಕಂಡುಬರುತ್ತಿದೆ. 2020–21ರಲ್ಲಿ ಉದ್ಯೋಗ ಖಾತರಿ ಯೋಜನೆಗೆ 1.1 ಲಕ್ಷ ಕೋಟಿ ರೂಪಾಯಿ ಹಂಚಿಕೆಯಾಗಿತ್ತು. ಆದರೆ ಈಗಿನ ವಿಬಿ–ಜಿ ರಾಮ್ ಜಿ ಯೋಜನೆಗೆ ಕೇವಲ 95,692 ಕೋಟಿ ರೂಪಾಯಿ ನೀಡಲಾಗಿದ್ದು, ಇದು ಗ್ರಾಮೀಣ ನಿರುದ್ಯೋಗ ನಿವಾರಣೆಗೆ ತೀರಾ ಅಲ್ಪವಾಗಿದೆ. ಅಲ್ಲದೆ, ಕೇಂದ್ರ ಮತ್ತು ರಾಜ್ಯಗಳ ನಡುವಿನ ಅನುದಾನದ ಹಂಚಿಕೆಯನ್ನು 60:40 ಅನುಪಾತಕ್ಕೆ ಬದಲಾಯಿಸಿರುವುದು ಆರ್ಥಿಕ ಮುಗ್ಗಟ್ಟಿನಲ್ಲಿರುವ ರಾಜ್ಯಗಳಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಹಿಂದೆ ಕೃಷಿ ಚಟುವಟಿಕೆಗಳನ್ನು ಉದ್ಯೋಗ ಖಾತ್ರಿ ಯೋಜನೆಯ ವ್ಯಾಪ್ತಿಗೆ ತರಲಾಗಿತ್ತು. ಆದರೆ ಈಗ ಕೇಂದ್ರ ಸರ್ಕಾರ ಗುರುತಿಸಿದ ಜಿಲ್ಲೆಗಳಲ್ಲಿ, ಮಂಜೂರು ಮಾಡಿರುವ ಅವಧಿಯಲ್ಲಿ ಮಾತ್ರ ಈ ಯೋಜನೆ ಅನ್ವಯವಾಗಲಿದೆ. ಇದರಿಂದ ಉದ್ಯೋಗದ ಕಾನೂನುಬದ್ಧ ಹಕ್ಕನ್ನು ದುರ್ಬಲಗೊಳಿಸಿದಂತಾಗಿದೆ. ಇದು ಹಳ್ಳಿಗಾಡಿನ ಜನರ ಬದುಕಿನ ಮೇಲೆ ನೇರವಾದ ಏಟಾಗಿದೆ.

**ನಿರುದ್ಯೋಗ ಮತ್ತು ಕಾರ್ಮಿಕರ ಶೋಷಣೆ:**

ದೇಶದ ಯುವಜನತೆ ನಿರುದ್ಯೋಗದ ಭೀಕರತೆಯನ್ನು ಎದುರಿಸುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಯುವಕರ ನಿರುದ್ಯೋಗ ದರವು ಶೇ. 18ಕ್ಕೂ ಹೆಚ್ಚಿದೆ. ಕಳೆದ ಕೆಲವು ವರ್ಷಗಳಲ್ಲಿ ಸುಮಾರು 2.04 ಲಕ್ಷ ಖಾಸಗಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚಲ್ಪಟ್ಟಿದ್ದು, ಲಕ್ಷಾಂತರ ಜನರು ಬೀದಿಗೆ ಬಂದಿದ್ದಾರೆ. ಸರ್ಕಾರವು ಹೊಸ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರುವ ಮೂಲಕ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ. ಖಾಯಂ ಉದ್ಯೋಗಗಳ ಬದಲಿಗೆ ಗುತ್ತಿಗೆ ಮತ್ತು ತಾತ್ಕಾಲಿಕ ಉದ್ಯೋಗಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿಯ ಬಗ್ಗೆ ದೊಡ್ಡ ಮಾತುಗಳಿದ್ದರೂ, ವಾಸ್ತವದಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ 'ವ್ಯವಹಾರದಲ್ಲಿ ನೆಮ್ಮದಿ' (Ease of Doing Business) ಒದಗಿಸುವುದೇ ಸರ್ಕಾರದ ಆದ್ಯತೆಯಾಗಿದೆ.

**ಸಮಾಜ ಕಲ್ಯಾಣ ಮತ್ತು ಸಬ್ಸಿಡಿ ಕಡಿತ:**

ಜನಸಾಮಾನ್ಯರಿಗೆ ಸಿಗುತ್ತಿದ್ದ ಆಹಾರ, ರಸಗೊಬ್ಬರ ಮತ್ತು ಇಂಧನ ಸಬ್ಸಿಡಿಗಳನ್ನು 3ನೇ ಪುಟಕ್ಕೆ....

---

...1ನೇ ಪುಟದಿಂದ

## ರಾಜ್ಯ ಬಜೆಟ್:....

ವಿದ್ಯಾರ್ಥಿ–ಯುವಜನರ, ವ್ಯಾಪಾರ ಮತ್ತು ಕೈಗಾರಿಕೋದ್ಯಮಗಳಲ್ಲಿ ತೊಡಗಿಸಿಕೊಂಡವರ ಕನಸುಗಳು ಮತ್ತು ಆತ್ಮವಿಶ್ವಾಸವನ್ನು ಪ್ರತಿಧ್ವನಿಸುವ ಜೀವಂತ ದಾಖಲೆಯಾಗಿದೆ" ಎಂದು ಬಣ್ಣಿಸಿಕೊಂಡಿದ್ದಾರೆ. ಅವರ ಈ ಮಾತುಗಳನ್ನು ಪರಾಮರ್ಶಿಸಿ ನೋಡಿದಾಗ ಸ್ವತಃ ಮುಖ್ಯಮಂತ್ರಿಗಳಾಗಿ ತಮ್ಮ ನುಡಿ–ನಡೆಗಳಲ್ಲಿ ತದ್ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಮತ್ತು ಅವರ ನೇತೃತ್ವದ ಸರ್ಕಾರ ಜನ ವಿರೋಧಿಯಾಗಿ ಹಲವು ನೀತಿಗಳನ್ನು ಜಾರಿಗೊಳಿಸಿರುವುದು ಕಣ್ಣಿಗೆ ರಾಚುವಷ್ಟು ಸ್ಪಷ್ಟವಾಗಿದೆ.

ರಾಜ್ಯದ ಜನಗಳ ಆರೋಗ್ಯ ರಕ್ಷಿಸಲು ಆರೋಗ್ಯ ಇಲಾಖೆಗೆ ಬೆನ್ನೆಲುಬಾಗಿ ನಿಂತಿರುವ 'ಆಶಾ' ಸಹೋದರಿಯರು ಜೀವನ ನಡೆಸಲು ಸಂಕಷ್ಟದ ದಿನಗಳನ್ನು ದೂಡುತ್ತಿರುವ ಹಿನ್ನೆಲೆಯಲ್ಲಿ ಸತತ ಹೋರಾಟ ಮಾಡುತ್ತಾ ಬಂದಿರುವುದನ್ನು ಗಮನಿಸಿದ್ದೇವೆ. ಅಂತಿಮವಾಗಿ ಕಳೆದ ವರ್ಷ ನಡೆದ 'ಆಶಾ'ಗಳ ಅನಿರ್ದಿಷ್ಟ ಹೋರಾಟದ ಸಂದರ್ಭದಲ್ಲಿ ಸ್ವತಃ ಮುಖ್ಯಮಂತ್ರಿಗಳು ಮಧ್ಯಸ್ಥಿಕೆ ವಹಿಸಿ ಆಶಾಗಳಿಗೆ ಪ್ರತಿ ತಿಂಗಳು 10 ಸಾವಿರ ಕನಿಷ್ಠ ವೇತನ ನೀಡುವುದಾಗಿ ಆಶಾಗಳಿಗೆ ವಾಗ್ದಾನ ಮಾಡಿದ ಘಟನೆಗೆ ಇಡೀ ರಾಜ್ಯದ ಜನತೆ ಸಾಕ್ಷಿಯಾಗಿದ್ದಾರೆ! ವರ್ಷ ಕಳೆದರೂ, ಬೇಡಿಕೆ ಕಾರ್ಯಗತಗೊಳ್ಳದಿದ್ದಾಗ, ಕೊಟ್ಟ ಮಾತು ಉಳಿಸಿಕೊಳ್ಳುವಂತೆ ಮತ್ತೆ ಆಶಾಗಳು ಬೀದಿಗಿಳಿದರೂ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಿವ್ಯ ಮೌನ ವಹಿಸಿದ್ದಷ್ಟೇ ಅಲ್ಲದೆ ಈಗ ಮಂಡಿಸಿರುವ ಬಜೆಟ್‌ನಲ್ಲಿ ಪುಡಿಗಾಸು ಒದಗಿಸದೇ ಇರುವುದು ಮುಖ್ಯಮಂತ್ರಿಗಳ ಬದ್ಧತೆಯನ್ನು ಸೂಚಿಸುತ್ತದೆಯೇ!? ಇದು ಚಾತಕ ಪಕ್ಷಿಗಳಂತೆ ಕಾಯುತ್ತಿರುವ 'ಆಶಾ' ಗಳಿಗೆ ಮಾಡಿದ ದ್ರೋಹವಾಗುವುದಿಲ್ಲವೇ?

ರಾಜ್ಯದ ವಿದ್ಯಾರ್ಥಿ ಸಮುದಾಯ, ಪಾಲಕರು, ಜನಪರ ಸಂಘಟನೆಗಳು, ಬುದ್ಧಿಜೀವಿಗಳು ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳನ್ನು ತೆರೆಯುವ ನೆಪದಲ್ಲಿ ಬಡವರ ಮಕ್ಕಳ ಶಿಕ್ಷಣಕ್ಕೆ ಆಧಾರಸ್ತಂಭಗಳಾದ ಸರ್ಕಾರಿ ಶಾಲೆಗಳನ್ನು ಮುಚ್ಚಬಾರದೆಂದು ಬೀದಿಗಿಳಿದು ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿಯೇ ಆ ಹೋರಾಟಕ್ಕೆ ಕವಡೆ ಕಾಸಿನ ಕಿಮ್ಮತ್ತು ಕೊಡದ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಸರ್ಕಾರಿ ಶಾಲೆಗಳ ಮರಣ ಶಾಸನ ಬರೆಯುವ 800 ಕೆಪಿಎಸ್ ಶಾಲೆಗಳ ನಿರ್ಮಾಣಕ್ಕೆ ರೂ.3900 ಕೋಟಿ ಹೂಡಿಕೆ ಮಾಡಿ, ಉಳಿದೆಲ್ಲ ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಜೂನಿಯರ್ ಕಾಲೇಜುಗಳ ಭೌತಿಕ ಅಭಿವೃದ್ಧಿಗೆ ಕೇವಲ ರೂ.800 ಕೋಟಿಯನ್ನು ದಯಪಾಲಿಸಿರುವುದು ರಾಜ್ಯದ ಏಳು ಕೋಟಿ ಕನ್ನಡಿಗರ ನಿರೀಕ್ಷೆಗಳನ್ನು ಅರಿತ ಲಕ್ಷಣವೇ?

ಕಳೆದ ಹಲವು ವರ್ಷಗಳಿಂದ ರಾಜ್ಯದಲ್ಲಿ ಉದ್ಯೋಗದ ಭಾಗ್ಯ ಕಾಣದೆ ಕಂಗಾಲಾಗಿರುವ ಉದ್ಯೋಗಾಕಾಂಕ್ಷಿಗಳು ಉದ್ಯೋಗಕ್ಕಾಗಿ ಸತತ ಹೋರಾಟ ನಡೆಸುತ್ತಾ ಬಂದಿರುವುದನ್ನು ರಾಜ್ಯದ ಜನ ಗಮನಿಸಿ ಬೆಂಬಲಿಸಿದ್ದಾರೆ. ಹೋರಾಟನಿರತರ ಮೇಲೆ ಪೊಲೀಸರು ಕೇಸ್‌ಗಳನ್ನು ದಾಖಲಿಸಿದರೂ, ಜೈಲಿಗೆ ತಳ್ಳುವ ಬೆದರಿಕೆಗಳನ್ನು ಒಡ್ಡಿದರೂ, ಛಲಬಿಡದೆ ಹೋರಾಟ ಮುಂದುವರೆಸಿದಾಗ ಅಂತಿಮವಾಗಿ ಬೆಳಗಾವಿ ಅಧಿವೇಶನದಲ್ಲಿ 56,832 ಹುದ್ದೆಗಳನ್ನು ಸರ್ಕಾರಿ ಇಲಾಖೆಗಳಲ್ಲಿ ಭರ್ತಿ ಮಾಡಿಕೊಳ್ಳುತ್ತೇವೆ ಎಂದು ಘೋಷಣೆ ಮಾಡಿದ್ದಕ್ಕೆ ಇಡೀ ರಾಜ್ಯ ಸಾಕ್ಷಿಯಾಗಿದೆ. ಆದರೆ ಈಗ ಬಜೆಟ್‌ನಲ್ಲಿ ಕೇವಲ 30,000 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಘೋಷಣೆಗಳನ್ನು ಮಾಡಿರುವುದು ಬಿಟ್ಟರೆ, ನಿಗದಿತ ಕಾಲಮಿತಿಯೊಳಗೆ ಭರ್ತಿ ಮಾಡಿಕೊಳ್ಳುವ ನಿರ್ದಿಷ್ಟ ಯೋಜನೆಯನ್ನೇ ಪ್ರಕಟಿಸದೇ, ನೇಮಕಾತಿ ಅಧಿಸೂಚನೆ ಹೊರಡಿಸದೇ ಮತ್ತೆ ಕಾಲಹರಣ ಮಾಡುವ ಸರ್ಕಾರದ ಈ ನಡೆ ರಾಜ್ಯದ 'ವಿದ್ಯಾರ್ಥಿ–ಯುವಜನರ' ಕನಸುಗಳನ್ನು ನನಸು ಮಾಡುವ ದಿಕ್ಕಿನಲ್ಲಿ ಇದೆಯೇ?

ರಾಜ್ಯದಲ್ಲಿ ಶೇ. 98 ರಷ್ಟಿರುವ ಅಸಂಘಟಿತ ಕಾರ್ಮಿಕರಿಗೆ, ಅವರ ಜೀವನ ಹಸನು ಮಾಡಲು ಯಾವ ನಿರ್ದಿಷ್ಟ ಕ್ರಮಗಳನ್ನು ಜರುಗಿಸದೇ, ಹತ್ತಾರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕನಿಷ್ಠ ಕೂಲಿ ಪರಿಷ್ಕರಣೆಯನ್ನು ಗಾಳಿಗೆ ತೂರಿರುವ ಸರ್ಕಾರದ ದಿವ್ಯ ನಿರ್ಲಕ್ಷ್ಯ ಬಜೆಟ್‌ನಲ್ಲಿ ಗೋಚರಿಸುತ್ತದೆ.

ನರೇಗಾ ಯೋಜನೆಗೆ ತಿದ್ದುಪಡಿ ತಂದು ಹಣ ಕಡಿತಗೊಳಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿರುವ ಮುಖ್ಯಮಂತ್ರಿಗಳ ನಡೆ ಸರಿಯಾಗಿದೆ ಎಂದು ಭಾವಿಸುತ್ತಿರುವಾಗಲೇ, ಈ ಯೋಜನೆಗೆ ಈವರೆಗೆ ರಾಜ್ಯ ಸರ್ಕಾರ ಕೊಡುತ್ತಿದ್ದ ಕನಿಷ್ಠ ಅನುದಾನವನ್ನು ಈಗ ಮಂಡಿಸಿರುವ ಬಜೆಟ್ಟಿನಲ್ಲಿ ನಿಲ್ಲಿಸಿ ಕೇವಲ ಕಾನೂನು ಹೋರಾಟದ ಮಾತನಾಡಿರುವುದು ಕೇಂದ್ರ ಸರ್ಕಾರದ ಜೊತೆ ರಾಜ್ಯ ಸರ್ಕಾರ ವಾಸ್ತವವಾಗಿ ಶಾಮೀಲಾದಂತಾಗುವುದಿಲ್ಲವೇ? ಅಂತಿಮವಾಗಿ ಗ್ರಾಮೀಣ ಕೂಲಿಕಾರರ ಕನಿಷ್ಠ ಕೆಲಸದ ದಿನಗಳ ಖಾತ್ರಿಗೆ ಕೊಡಲಿ ಪೆಟ್ಟು ಬೀಳಲು ಕಾರಣವಾಗುವುದಿಲ್ಲವೇ? ಅದೇ ರೀತಿ ಬಹು ದಿನಗಳಿಂದ ರೈತರು ಹೋರಾಟದ ಮೂಲಕ ಒತ್ತಾಯಿಸುತ್ತಿರುವ ಮಾರಕ ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ಸೊಲ್ಲೇ ಎತ್ತದಿರುವುದು ರಾಜ್ಯದ ಕಾರ್ಮಿಕ–ಕೃಷಿ ಕಾರ್ಮಿಕ, ರೈತರ ಆತ್ಮವಿಶ್ವಾಸ ಹೆಚ್ಚಿಸುವ ಕ್ರಮಗಳಾಗುತ್ತವೆಯೇ?

2025 – 26ರಲ್ಲಿ ರೂ.1.16 ಲಕ್ಷ ಕೋಟಿ ಸಾಲ ಮಾಡಿದ್ದ ರಾಜ್ಯ ಸರ್ಕಾರ 2026– 27ರಲ್ಲಿ ರೂ.1.32 ಲಕ್ಷ ಕೋಟಿ ಸಾಲ ಮಾಡುವ 97,449 ಕೋಟಿ ರೂಪಾಯಿಗಳ ವಿತ್ತೀಯ ಕೊರತೆಯ ಬಜೆಟ್ಟನ್ನು ಮಂಡಿಸಿದೆ. ಇದುವರೆಗೂ ಮಾಡಿದ ರಾಜ್ಯ ಸರ್ಕಾರದ ಸಾಲ 2026 ಮಾರ್ಚ್ ಅಂತ್ಯಕ್ಕೆ ರೂ.7.64 ಲಕ್ಷ ಕೋಟಿಗಳು ಇದ್ದದ್ದು 2027 ಮಾರ್ಚ್ ಅಂತ್ಯಕ್ಕೆ ರೂ.8.24 ಲಕ್ಷ ಕೋಟಿಗಳಾಗಲಿದೆ. ಬಜೆಟ್ಟಿನ ಬಹುದೊಡ್ಡ ವೆಚ್ಚ ಈ ಸಾಲದ ಮೇಲಿನ ಬಡ್ಡಿ ತೀರಿಸುವ ಬಾಬತ್ತಾಗಿದೆ. 2026–27ರಲ್ಲಿ ರಾಜ್ಯ ಸರ್ಕಾರ ಮಂಡಿಸಿರುವ ರೂ.4.48 ಲಕ್ಷ ಕೋಟಿಗಳಲ್ಲಿ ರಾಜಸ್ವ ಆದಾಯ ಸುಮಾರು ರೂ.3.15 ಲಕ್ಷ ಕೋಟಿಗಳಲ್ಲಿ ರಾಜ್ಯ ಸರ್ಕಾರ ಮಾಡಲೇಬೇಕಾದ ಬದ್ಧ ವೆಚ್ಚಗಳಾದ ಸಂಬಳ, ಪಿಂಚಣಿ, ಘೋಷಿತ ಯೋಜನೆಗಳಿಗೆ ರೂ.2.77 ಲಕ್ಷ ಕೋಟಿಗಳು ಅಂದರೆ ಶೇಕಡ 88 ರಷ್ಟು ಖರ್ಚಾದರೆ ಉಳಿಯುವ ಅಲ್ಪ ಮೊತ್ತದಲ್ಲಿ ಯಾವ ಅಭಿವೃದ್ಧಿ ಸಾಧ್ಯ? ಉದ್ಯೋಗ ಸೃಷ್ಟಿ ಸಾಧ್ಯ? ನೇಮಕಾತಿಗೆ ಹಣ ಹೊಂದಿಸುವುದೆಲ್ಲಿ? ಸರ್ಕಾರ ಉತ್ತರಿಸಬೇಕು!

ಆದರೆ ಇದೇ ವೇಳೆಗೆ ಸಾಲದ ರಾಮಯ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೂದಲಿಸುತ್ತಿರುವ ರಾಜ್ಯದ ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ತಾವು ಅಧಿಕಾರದಲ್ಲಿದ್ದಾಗ ಮಾಡಿದ್ದೇನು? ಸಾಲ ಮಾಡುವ ಇದೇ ಪ್ರವೃತ್ತಿಯನ್ನು ಮುಂದುವರೆಸಿದ್ದಲ್ಲವೇ? ರಾಜ್ಯ ಸರ್ಕಾರದ ಸಾಲದ ಬಗ್ಗೆ ಮಾತನಾಡುವ ಈ ಪಕ್ಷಗಳು ಸ್ವತಃ ಕೇಂದ್ರದಲ್ಲಿ ಅಧಿಕಾರದಲ್ಲಿವೆ. ಈ ವರ್ಷ ಕೇಂದ್ರದ ವಿತ್ತ ಮಂತ್ರಿಗಳು ಮಂಡಿಸಿದ ಬಜೆಟ್ಟಿನಲ್ಲಿ, ಕೇಂದ್ರ ಸರ್ಕಾರ ಈ ವರ್ಷ ಮಾಡಿದ ರೂ.17 ಲಕ್ಷ ಕೋಟಿ ಸಾಲ ಸೇರಿದಂತೆ ಒಟ್ಟು ದೇಶದ ಸಾಲವನ್ನು ರೂ.214 ಲಕ್ಷ ಕೋಟಿಗೆ ಏರಿಸಲಾಗಿರುವುದನ್ನು ಇವರು ಮರೆಮಾಚುತ್ತಾರೆ. 2014ರ ಮುಂಚೆ ರೂ.52 ಲಕ್ಷ ಕೋಟಿ ಇದ್ದ ದೇಶದ ಸಾಲವನ್ನು ಈಗ ಕೇವಲ 12 ವರ್ಷಗಳಲ್ಲಿ ರೂ.214 ಲಕ್ಷ ಕೋಟಿಗೆ ಏರಿಸಿದ ಕೀರ್ತಿ ಈಗ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಗೆ ಸಲ್ಲುತ್ತದೆ!

ಆದ್ದರಿಂದ, ರಾಜ್ಯ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಈ ಮೂರೂ ಪಕ್ಷಗಳು ಬಂಡವಾಳಶಾಹಿ–ಕಾರ್ಪೋರೇಟ್ ಮನೆತನಗಳ ಆಸ್ತಿ–ಲಾಭ ಹೆಚ್ಚಾಗಲು ಅನುಕೂಲ ಮಾಡಿಕೊಡುತ್ತಿದ್ದು, ಜನಗಳನ್ನು ದಿವಾಳಿಯ ಅಂಚಿಗೆ ತಂದಿರುವುದನ್ನು ಮನಗಂಡು ಈ ಪಕ್ಷಗಳ ಬದ್ಧತೆ ಬಂಡವಾಳಶಾಹಿ ಪದ್ಧತಿಯನ್ನು ಉಳಿಸಿ, ಬೆಳೆಸುವ ಬಂಡವಾಳಿಗರ ಪರವಾಗಿ ಇದೆ ಎನ್ನುವುದನ್ನು ಜನರು ಅರಿಯಬೇಕಾಗಿದೆ. ಹಾಗೂ ಈ ಸರ್ಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ಪ್ರಬಲ ಹೋರಾಟ ಕಟ್ಟಲು ಬದ್ಧರಾಗುವುದೊಂದೇ ಜನಗಳ ಮುಂದಿರುವ ಏಕೈಕ ಮಾರ್ಗವಾಗಿದೆ.

# ಪಶ್ಚಿಮ ಬಂಗಾಲದ ಮಂದಿರ–ಮಸೀದಿ ರಾಜಕೀಯ

1947ರ ದೇಶ ವಿಭಜನೆಗೂ ಮುನ್ನ ಇಂದಿನ ಪಶ್ಚಿಮ ಬಂಗಾಲ ಮತ್ತು ಬಾಂಗ್ಲಾದೇಶ ಒಗ್ಗೂಡಿ ಒಂದೇ ರಾಜ್ಯವಾಗಿತ್ತು. ಹಿಂದೂ–ಮುಸ್ಲಿಮರು ಅಲ್ಲಿ ಸೌಹಾರ್ದತೆ ಮತ್ತು ಸಹಕಾರದಿಂದ ಬಾಳುತ್ತಿದ್ದರು.

ಈ ಏಕೀಕೃತ ಬಂಗಾಳ, ನಮ್ಮ ದೇಶದಲ್ಲಿ ನವೋದಯದ ಮೊದಲ ಕಿರಣಗಳನ್ನು ಸೃಷ್ಟಿಸಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕಪಿಮುಷ್ಟಿಯಿಂದ ಭಾರತವನ್ನು ಸ್ವತಂತ್ರಗೊಳಿಸಲು ಎದೆ ಎತ್ತಿ ನೇಣುಗಂಬಕ್ಕೆ ಮುತ್ತಿಡುವ ಕೆಚ್ಚೆದೆಯ ಯುವಕರಿಗೆ ಜನ್ಮ ನೀಡಿತ್ತು. ಜಾತಿ, ಧರ್ಮ, ಜನಾಂಗದ ಕಟ್ಟಳೆಗಳನ್ನೆಲ್ಲಾ ಮೀರಿ ಹೋರಾಡುವುದನ್ನು ಕಲಿಸಿತ್ತು. ಧರ್ಮನಿರಪೇಕ್ಷ ಮೌಲ್ಯಗಳನ್ನು ಎತ್ತಿಹಿಡಿದು, ಐಕ್ಯತೆ, ಭ್ರಾತೃತ್ವದ ಎಡ–ಪ್ರಜಾತಾಂತ್ರಿಕ ಹೋರಾಟಗಳ ಭದ್ರಕೋಟೆಯಾಗಿತ್ತು.

ಅದೇ ಬಂಗಾಳ, ವಿಭಜನೆಯ ನಂತರ ಇಂದು, ಕೋಮುವಾದಿ ದ್ವೇಷ ಕಾರುವ ಪ್ರದೇಶವಾಗಿ ಮಾರ್ಪಾಡಾಗುತ್ತಿದೆ. ಪ್ರಸ್ತುತ ಇದೀಗ ಬಾಂಗ್ಲಾದೇಶದಲ್ಲಿ ಕೋಮುವಾದಿ–ಮೂಲಭೂತವಾದಿ ಶಕ್ತಿಗಳು ಹಿಂಸಾಚಾರದಲ್ಲಿ ತೊಡಗಿವೆ. ಕೋಮು ಸೌಹಾರ್ದತೆಯ ಆಶಯಗಳ ಅಂತ್ಯಕ್ರಿಯೆ ನಡೆದಿದೆ.

ಇತ್ತ ಪಶ್ಚಿಮ ಬಂಗಾಳದಲ್ಲಿಯೂ ಕೊಮುವಾದಿ–ಮೂಲಭೂತವಾದಿ ಶಕ್ತಿಗಳು ತಲೆಯೆತ್ತುತ್ತಿವೆ. ಅಧಿಕಾರದ ಆಸೆಗೆ ಬಿಜೆಪಿ–ಆರ್. ಎಸ್.ಎಸ್ ಅನೇಕ ವರ್ಷಗಳಿಂದ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ವಿಷಕಾರುತ್ತ, ಹಿಂದೂ–ಮುಸಲ್ಮಾನರ ನಡುವೆ ದ್ವೇಷದ ಕಿಡಿಹಚ್ಚುತ್ತ ಹಿಂದುತ್ವವಾದಿ ವಿಷವನ್ನು ಹರಡುತ್ತಿದೆ. ಹಿಂದೂ ಕೋಮುವಾದ–ಮೂಲಭೂತವಾದಕ್ಕೆ ಪ್ರತಿಕ್ರಿಯೆಯಾಗಿ ಮುಸ್ಲಿಂ ಮೂಲಭೂತವಾದಿಗಳು ಅಲ್ಪಸಂಖ್ಯಾತರ ಮಧ್ಯೆ ತಮ್ಮ ಬೇರುಬಿಡಲು ಪ್ರಯತ್ನಿಸುತ್ತಿದ್ದಾರೆ. ಈ ಕೋಮುವಾದಿ ವಿಷಕಾರಿ ಬೀಜಗಳು ಇಂದು ಹೆಮ್ಮರಗಳಾಗಿ ಬೆಳೆಯುತ್ತಿವೆ.

ಬಹು ಕಾಲದಿಂದಲೂ ಹಿಂದೂ ವೋಟುಗಳಿಗಾಗಿ ಮಂದಿರ–ಮಸೀದಿಯ ಗಲಾಟೆ ಎಬ್ಬಿಸಲು ಬಿಜೆಪಿ ಸತತ ಪ್ರಯತ್ನದಲ್ಲಿದೆ. ಇದಕ್ಕೆ ಪ್ರತಿಯಾಗಿ ಮೂರ್ತಿ ಪೂಜೆಗೆ ಎಂದಿಲ್ಲದ ಪ್ರಾಮುಖ್ಯತೆ ನೀಡುತ್ತಾ, ತಾವೇನೂ ಕಡಿಮೆ ಇಲ್ಲವೆಂಬಂತೆ ತೃಣಮೂಲ ಕಾಂಗ್ರೆಸ್ 250 ಕೋಟಿ ವೆಚ್ಚದ ಜಗನ್ನಾಥ ಮಂದಿರವನ್ನು ದಿಘಾ ಎಂಬ ಪ್ರವಾಸಿ ತಾಣದಲ್ಲಿ ಕಟ್ಟಿಸಿದೆ. ಸಿಲಿಗುರಿಯ ಮಾಟಿಗಾರಾದಲ್ಲಿ ಟಿಎಂಸಿಯ ಒತ್ತಾಸೆಯ ಮೇರೆಗೆ 'ಮಹಾಕಾಲ' ಮಂದಿರದ ನಿರ್ಮಾಣ ನಡೆಯುತ್ತಿದ್ದು, ಅಲ್ಲಿ ಭಗವಾನ್ ಶಿವನ ಬೃಹತ್ ಪ್ರತಿಮೆಯನ್ನು ಸ್ಥಾಪಿಸಲಾಗುತ್ತಿದೆ. ಕಳೆದ ಡಿಸೆಂಬರ್ 13 ರಂದು ಆರ್‌ಎಸ್‌ಎಸ್–ಬಿಜೆಪಿ–ಸಂಘ ಪರಿವಾರ ಸೇರಿ ಕೋಲ್ಕತ್ತಾದ ಬ್ರಿಗೇಡ್ ಪೆರೇಡ್ ಮೈದಾನದಲ್ಲಿ "ಲಕ್ಷ ಕಂಠ ಗೀತಾ ಪಠಣ" ಕಾರ್ಯಕ್ರಮವನ್ನು ಆಯೋಜಿಸಿದ್ದವು. ಕೆಳಮಟ್ಟದ ಕಾರ್ಯಕರ್ತರಿಂದ ಹಿಡಿದು ಹಿರಿಯ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರೆಲ್ಲರೂ ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಇನ್ನು ಕಾಂಗ್ರೆಸ್, ಟಿಎಂಸಿ ಮತ್ತು ಬಿಜೆಪಿ ನಡುವೆ ಪದೇ ಪದೇ ಪಕ್ಷಾಂತರ ಮಾಡಿದ ಇತಿಹಾಸವುಳ್ಳ ಆದರೆ ಈಗ ಉಚ್ಚಾಟಿತಗೊಂಡಿರುವ ಟಿಎಂಸಿಯ ಎಂಎಲ್‌ಎ ಹುಮಾಯೂನ್ ಕಬೀರ್, ಮುಸ್ಲಿಂ ಮತಗಳನ್ನು ಸೆಳೆಯಲು ಮುರ್ಶಿದಾಬಾದ್‌ನ ರೇಜಿನಗರದಲ್ಲಿ ಬಾಬರಿ ಮಸೀದಿ ಧ್ವಂಸದ ಕಪ್ಪು ದಿನದಂದೇ 'ಬಾಬರಿ ಮಸೀದಿ'ಗೆ ಶಂಕುಸ್ಥಾಪನೆ ಮಾಡಿದ್ದಾರೆ. ವಾಸ್ತವದಲ್ಲಿ, ಬಂಗಾಳದಲ್ಲಿ ಅಧಿಕಾರಕ್ಕಾಗಿ ಸೆಣಸಾಡುತ್ತಿರುವ ಟಿಎಂಸಿ ಹಾಗೂ ಬಿಜೆಪಿ ಮಧ್ಯೆ ಈಗ ಹೊಸ ಪೈಪೋಟಿ, ಇಬ್ಬರಲ್ಲಿ 'ಶ್ರೇಷ್ಠ ಹಿಂದು ಯಾರು' ಎಂದು!

ಬಿಜೆಪಿ ಹಿಂದುತ್ವದ ಬಾವುಟ ಹಾರಿಸುತ್ತಿದ್ದರೆ, ಟಿಎಂಸಿ, ಹಿಂದೂ ಮತ್ತು ಮುಸ್ಲಿಂ ಇಬ್ಬರನ್ನೂ ಓಲೈಸುವ ರಾಜಕೀಯ ಮಾಡುತ್ತಿದೆ. ಟಿಎಂಸಿ ಒಂದಾದ ಮೇಲೊಂದು ದೇವಸ್ಥಾನಗಳನ್ನು ಕಟ್ಟುತ್ತಿದೆ, 44,000ಕ್ಕೂ ಹೆಚ್ಚು ನೋಂದಾಯಿತ ದುರ್ಗಾ ಪೂಜಾ ಸಮಿತಿಗಳಿಗೆ ತಲಾ 1,10,000 ರೂಪಾಯಿಗಳನ್ನು ನೀಡಿದೆ. ಇನ್ನೊಂದೆಡೆ ಮುಸ್ಲಿಂ ಸಮುದಾಯವನ್ನು ಓಲೈಸಲು ಮಸೀದಿಗಳ ಮೌಲ್ವಿಗಳಿಗೆ ಭತ್ಯೆಯನ್ನು ನೀಡುತ್ತಿದೆ. ಇದನ್ನೆಲ್ಲಾ ಗಮನಿಸುತ್ತಿರುವ ಇಸ್ಲಾಮಿಕ್ ಮೂಲಭೂತವಾದಿಗಳು ತಾವೇ ಮುಸ್ಲಿಂ ಅಲ್ಪಸಂಖ್ಯಾತರ ರಕ್ಷಕರೆಂಬಂತೆ ನಟಿಸುತ್ತಾ ತಮ್ಮ ಜಾಗವನ್ನು ಗಟ್ಟಿ ಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಬಾಬರಿ ಮಸೀದಿ ಧ್ವಂಸದಲ್ಲಿ ಭಾಗಿಯಾಗಿದ್ದ ಬಿಜೆಪಿ, ಹುಮಾಯೂನ್ ನಡೆಸಿರುವ 'ಬಾಬರಿ ಮಸೀದಿ' ಶಂಕುಸ್ಥಾಪನೆಯ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ಫುರ್ಫುರಾ ಶರೀಫ್‌ನ ಇಸ್ಲಾಂನ ಪಂಡಿತ ಪೀರ್‌ಜಾದ್ ಅಬ್ಬಾಸ್ ಸಿದ್ದಿಕಿ ಸ್ಥಾಪಿಸಿದ ಐಎಸ್‌ಎಫ್ ನ ನಾಯಕ ಭಾಯಿಜಾನ್ ಅಬು ಸಿದ್ದಿಕಿಯು ಕೋಮುವಾದಿ ಹೇಳಿಕೆಗಳನ್ನು ನೀಡಿದಾಗಲೂ ಬಿಜೆಪಿ ಸುಮ್ಮನಿದೆ. ಈ ನಿಗೂಢ ಮೌನ ಅನೇಕ ಪ್ರಶ್ನೆಗಳನ್ನು ಎಬ್ಬಿಸುತ್ತಿವೆ ಅಲ್ಲವೆ?

ಇದರ ಹಿಂದೆ ದೊಡ್ಡ ಗುಟ್ಟೇ ಅಡಗಿದೆ. ಹುಮಾಯೂನ್ ಮುಸ್ಲಿಂರಿಗಾಗಿ ಹೊಸ ಪಕ್ಷ ಕಟ್ಟುವುದಾಗಿ ಹೇಳಿದ್ದಲ್ಲದೆ ಮುಂಬರುವ ಚುನಾವಣೆಯಲ್ಲಿ ಮೈತ್ರಿಗಾಗಿ ಅಸಾದುದ್ದೀನ್ ಓವೈಸಿ ಅವರ ಜೊತೆ ಈಗಾಗಲೇ ಮಾತುಕತೆ ನಡೆಸಿದಂತಿದೆ. ಅಲ್ಪಸಂಖ್ಯಾತ ಮತಗಳನ್ನು ಒಗ್ಗೂಡಿಸಿ, ಆ ಮೂಲಕ ಬಿಜೆಪಿ ವಿರೋಧಿ ಮತಗಳನ್ನು ವಿಭಜಿಸುವುದೇ ಈ ಮುಸ್ಲಿಂ ನಾಯಕರ ಕೆಲಸ. ಇವರು ಹಿಂದೂ ಮೂಲಭೂತವಾದಿಗಳ ನಂಬಿಕಸ್ಥ ಏಜೆಂಟರಂತೆ ಕೆಲಸ ಮಾಡುತ್ತಿದ್ದಾರೆ. ನಿಜ ಹೇಳಬೇಕೆಂದರೆ, ಇವರೆಲ್ಲರೂ ಆಡಳಿತಾರೂಢ ಬಂಡವಾಳಶಾಹಿ ವರ್ಗದ ಕೈಗೊಂಬೆಗಳು. ಧಾರ್ಮಿಕ ಧ್ರುವೀಕರಣದ ಈ ಇಡೀ ನಾಟಕವು ಮತಗಳನ್ನು ಪಡೆಯಲು ಮತ್ತು ಜನರನ್ನು ಒಡೆದಿಡಲು ನಡೆಯುತ್ತಿದೆ. ಹಾಗಾಗಿ, ಚುನಾವಣಾ ಸಮಯದಲ್ಲಿ ಜನರನ್ನು ಕಾಡುತ್ತಿರುವ ನೈಜ ಸಮಸ್ಯೆಗಳು ಮುನ್ನೆಲೆಗೆ ಬರುವುದೇ ಇಲ್ಲ. ಬದಲಾಗಿ ಮಂದಿರ–ಮಸೀದಿ, ವಂದೇ ಮಾತರಂ, ತ್ರಿವಳಿ ತಲಾಖ್, ಅಕ್ರಮ ನುಸುಳುವಿಕೆಯಂತಹ ಅನಗತ್ಯ ವಿಷಯಗಳೇ ಮುನ್ನೆಲೆಗೆ ಬಂದು ಬೆಲೆ ಏರಿಕೆ, ನಿರುದ್ಯೋಗ, ರೈತರ ಸಂಕಷ್ಟ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳಂತಹ ಭೀಕರ ಸಮಸ್ಯೆಗಳು ಗೌಣವಾಗುತ್ತವೆ.

ಇದೆಲ್ಲದರ ಮಧ್ಯೆ ತಮ್ಮನ್ನು ತಾವು ಎಡಪಂಥೀಯರು ಎಂದು ಕರೆದುಕೊಳ್ಳುವ 'ನಕಲಿ–ಮಾರ್ಕ್ಸ್‌ವಾದಿಗಳು' ಕೂಡ ಇದೇ ಹಾದಿಯಲ್ಲಿರುವುದು ಅತ್ಯಂತ ಬೇಸರದ ಸಂಗತಿ. ಕೆಲವೇ ಕೆಲವು ಸೀಟುಗಳಿಗಾಗಿ ಕಾಂಗ್ರೆಸ್ ಮತ್ತು ಐಎಸ್‌ಎಫ್‌ನಂತಹ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಹಾಗೂ ಇನ್ನಿತರ ನಾಯಕರು ಹಿಂದೂ ಭಕ್ತರ ಉಡುಪು ಧರಿಸಿ ಬ್ರಾಹ್ಮಣವಾದಿ ಮೌಲ್ಯಗಳನ್ನು ಬಿತ್ತುವ ಜಾತಿವಾದಿ ಸಂಘಟನೆಯನ್ನು ಪ್ರಾರಂಭಿಸಿರುವ ಪಂಚಾನನ ಬರ್ಮಾ ಅವರ ಪ್ರತಿಮೆಗೆ ಹಾರ ಹಾಕಿದ್ದಂತಹ ಘಟನೆಗಳು ಇವರ ಕೀಳುಮಟ್ಟದ ವೋಟ್ ಬ್ಯಾಂಕ್ ರಾಜಕೀಯಕ್ಕೆ ಉದಾಹರಣೆಯಾಗಿವೆ.

ಆದರೆ ಭಾರತೀಯರ ಮನಸ್ಸಿನಲ್ಲಿ ಈ ಕೋಮುವಾದಿ ಮತ್ತು ಜಾತಿವಾದಿ ಆಲೋಚನೆಗಳು ಮನೆಮಾಡಲು ಕಾರಣವೇನು? ಇದಕ್ಕೆ ಇತಿಹಾಸದಲ್ಲಿ ಉತ್ತರವಿದೆ. ಬಂಗಾಳದ ನವೋದಯ ಕಾಲವು ಶತಮಾನಗಳ ಮೌಢ್ಯ, ಧಾರ್ಮಿಕ ಅಂಧಶ್ರದ್ಧೆ, ಮತಾಂಧತೆಯ ಕಟ್ಟಳೆಗಳನ್ನು ಕುಟ್ಟಿ ಪುಡಿಗಾಣಿಸಿ ಹೊಸ ಪ್ರಜಾತಾಂತ್ರಿಕ ಮೌಲ್ಯಗಳು, ನೈತಿಕತೆಕತೆಯನ್ನು ಅಳವಡಿಸಿಕೊಳ್ಳಲು ಕರೆ ನೀಡಿತ್ತು. ಊಳಿಗಮಾನ್ಯ ವ್ಯವಸ್ಥೆಯ ಜಡ್ಡನ್ನು ಕಿತ್ತೊಗೆದು ವೈಜ್ಞಾನಿಕ ಚಿಂತನೆಯೊಂದಿಗೆ ಎಲ್ಲಾ ಸಮುದಾಯಗಳ ಸೌಹಾರ್ದತೆ ಬಯಸಿತ್ತು. ಬ್ರಿಟಿಷರು ಕೇಂದ್ರಿಯ ಆಡಳಿತ ಯಂತ್ರಕ್ಕೆ ರೂಪು ನೀಡುತ್ತಿದ್ದಂತೆ ನಮ್ಮಲ್ಲಿ ಒಂದೇ ದೇಶವೆಂಬ ಪರಿಕಲ್ಪನೆ ಜಾಗೃತವಾಗತೊಡಗಿತು. ಜಾತಿ, ಧರ್ಮ, ಭಾಷೆ, ಜನಾಂಗೀಯ ಗಡಿ ಮೀರಿ ಒಂದಾಗುವ ಕೂಗು ಕೇಳಿ ಬಂತು. ಆದರೆ ನಿರ್ದಿಷ್ಟ ಸಾಮಾಜಿಕ–ಐತಿಹಾಸಿಕ ಕಾರಣಗಳಿಂದಾಗಿ ಭಾರತೀಯ ಜನಸಮುದಾಯವನ್ನು ಪ್ರಜಾತಾಂತ್ರೀಕರಣಗೊಳಿಸುವ ಆಶಯ ಈಡೇರಲಿಲ್ಲ. ಎಸ್.ಯು.ಸಿ.ಐ(ಸಿ) ಪಕ್ಷದ ಸಂಸ್ಥಾಪಕ ಕಾರ್ಯದರ್ಶಿಗಳಾದ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರು ಹೇಳಿದಂತೆ, "ಸಾಮ್ರಾಜ್ಯಶಾಹಿಯ ವಿರುದ್ಧದ ರಾಜಕೀಯ ಚಳುವಳಿಯ ಸಂದರ್ಭದಲ್ಲಿ, ವಿಭಿನ್ನ ಭಾಷೆಗಳನ್ನು ಮಾತನಾಡುವ ಮತ್ತು ವಿಭಿನ್ನ ಧರ್ಮಗಳನ್ನು ಪ್ರತಿಪಾದಿಸುವ ಭಾರತೀಯ ಜನರು ರಾಜಕೀಯವಾಗಿ ಒಂದು ರಾಷ್ಟ್ರವಾದರು... ಆದರೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಧರ್ಮ, ಜಾತಿ, ಭಾಷೆ, ಜನಾಂಗ ಇತ್ಯಾದಿಗಳಿಂದ ಬೇರ್ಪಟ್ಟು ವಿಭಿನ್ನ ಸಮುದಾಯಗಳಾಗಿ ವಿಭಜಿತರಾದರು"

ಕಾಲ ಕಳೆಯುತ್ತಿದ್ದಂತೆ ಶೋಷಿತ ಜನತೆ ಒಂದಾಗಿ ಶೋಷಕರ ವಿರುದ್ಧ ಬಂಡವಾಳಶಾಹಿ ವಿರೋಧಿ, ಸಮಾಜವಾದಿ ಕ್ರಾಂತಿಗೆ ಸಜ್ಜಾಗುವರೆಂಬ ಭೀತಿಯಲ್ಲಿ ಆಳುವ ಬಂಡವಾಳಶಾಹಿ ವರ್ಗವು ಜನರಲ್ಲಿ ಈಗಾಗಲೇ ಇರುವ ಒಡಕುಗಳಿಗೆ ಮತ್ತಷ್ಟು ಪುಷ್ಟಿ ನೀಡುತ್ತಿದೆ. ಒಂದು ಧರ್ಮದ ಜನರನ್ನು ಮತ್ತೊಂದು ಧರ್ಮದ ಜನರ ವಿರುದ್ಧ ಎತ್ತಿ ಕಟ್ಟಿ ಹಿಂಸಾಚಾರಗಳಿಗೆ ಎಡೆಮಾಡಿಕೊಡುತ್ತಿರುವುದು ಶೋಷಕರ ಹುನ್ನಾರಗಳಲ್ಲಿ ಒಂದು. ಹಾಗಾದರೆ 'ಹಿಂದೂ ರಾಷ್ಟ್ರ' ಸೃಷ್ಟಿಸುವುದಾಗಿ ಬೆದರಿಕೆ ಹಾಕುತ್ತಿರುವ ಬಿಜೆಪಿಯವರ ಈ ವಿಚಿತ್ರ ನಡವಳಿಕೆಯನ್ನು ಏನೆಂದು ಅರ್ಥೈಸಿಕೊಳ್ಳುವುದು? ಕೇವಲ ಉನ್ಮಾದವೆಂದೇ ಅಥವಾ ಹುದುಗಿಸಲಾದ ಗುಪ್ತ ಉದ್ದೇಶವೆಂದೇ?

ಬಿಜೆಪಿಯು ಕಾಂಗ್ರೆಸ್ ಹಾಗೂ ಇನ್ನಿತರೆ ಬಂಡವಾಳಶಾಹಿ ಪಕ್ಷಗಳಂತೆ ಭಾರತದ ಆಳುವ ವರ್ಗದ ಸೇವೆಯಲ್ಲಿ ತೊಡಗಿದೆ. ಧರ್ಮನಿರಪೇಕ್ಷ, ವೈಜ್ಞಾನಿಕ, ತಾರ್ಕಿಕ ಚಿಂತನಾ ಪ್ರಕ್ರಿಯೆಯನ್ನು ಬೆಳೆಸುವ ಶಿಕ್ಷಣ ವ್ಯವಸ್ಥೆಗೆ ತಿಲಾಂಜಲಿ ಇಡುತ್ತಾ, ಜನರ ಮನಸ್ಸಿನಲ್ಲಿ ಕೋಮು ದ್ವೇಷದ ಬೀಜ ಬಿತ್ತುತ್ತಾ, ಜನಗಳ ಹಕ್ಕುಗಳನ್ನು ಕಸಿಯುತ್ತಾ, ರಾಜ್ಯ ಯಂತ್ರದ ಮೂಲಕ ಪ್ರತಿರೋಧದ ಧ್ವನಿಗಳನ್ನು ಹೊಸಕಿ ಹಾಕುತ್ತಾ, ಹಣ, ಅಧಿಕಾರದ ಬಲಾಬಲಗಳೊಂದಿಗೆ ಈ ಪಕ್ಷಗಳು ಬಂಡವಾಳಶಾಹಿ ವರ್ಗದ ಹಿತಾಸಕ್ತಿಯನ್ನು ಕಾರ್ಯರೂಪಕ್ಕೆ ತರುತ್ತಿವೆ. ಉನ್ನತ ನೈತಿಕತೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ಜನರ ಸಂಘಟಿತ ಹೋರಾಟ ಮಾತ್ರವೇ ಈ ವಿನಾಶಕಾರಿ ರಾಜಕೀಯವನ್ನು ಸೋಲಿಸಬಹುದು. ಸರಿಯಾದ ಸೈದ್ಧಾಂತಿಕ ನಾಯಕತ್ವದ ಅಡಿಯಲ್ಲಿ ಶ್ರಮಿಕ ವರ್ಗವು ಒಂದಾಗಬೇಕು. ಇದನ್ನು ಕಾಂಗ್ರೆಸ್ ಅಥವಾ ಟಿಎಂಸಿಯಂತಹ ಪಕ್ಷಗಳು ಮಾಡುವುದು ಸಾಧ್ಯವೇ ಇಲ್ಲ. ಅಷ್ಟೇ ಅಲ್ಲ ನೈಜ ಮಾರ್ಕ್ಸ್‌ವಾದಿ ಹೋರಾಟಗಳಿಂದ ದೂರವಾಗಿ ಬಂಡವಾಳಶಾಹಿ ವರ್ಗದೊಂದಿಗೆ ಚುನಾವಣಾ ರಾಜಕೀಯದಲ್ಲಿ ಒಂದಾಗಿರುವ ಪೊಳ್ಳು ಮಾರ್ಕ್ಸ್‌ವಾದಿಗಳಿಂದಲೂ ಇದು ಸಾಧ್ಯವಿಲ್ಲ. ಆದ್ದರಿಂದ ಇತಿಹಾಸವು ಈ ಮಹತ್ತರ ಜವಾಬ್ದಾರಿಯನ್ನು ನೈಜ ಎಡ ಪಂಥೀಯ ಕ್ರಾಂತಿಕಾರಿಗಳ ಹೆಗಲಿಗೇರಿಸಿದೆ. ಕಾಮ್ರೇಡ್ ಶಿವದಾಸ್ ಘೋಷ್ ಅವರ ಮಾರ್ಗದರ್ಶನದಲ್ಲಿ ಸಾಗುತ್ತಿರುವ ನಮ್ಮ ಪಕ್ಷವು, ಈ ಮಂದಿರ–ಮಸೀದಿ ಮತ್ತು ಅಧಿಕಾರ ದಾಹದ ಕೊಳಕು ರಾಜಕೀಯದ ವಿರುದ್ಧ ಈ ಐತಿಹಾಸಿಕ ಜವಾಬ್ದಾರಿಯನ್ನು ನಿಭಾಯಿಸುತ್ತಿದೆ! ■

---

3ನೇ ಪುಟದಿಂದ

## ಕೇಂದ್ರ ಬಜೆಟ್ 2026:

ಸರ್ಕಾರ ಶೇ. 4.47ರಷ್ಟು ಕಡಿತಗೊಳಿಸಿದೆ. ಆದರೆ, ಮಿಲಿಟರಿ ವೆಚ್ಚವನ್ನು 7.85 ಲಕ್ಷ ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ. ಶಿಕ್ಷಣಕ್ಕೆ ಜಿಡಿಪಿಯ ಶೇ. 6ರಷ್ಟು ಹಣ ನೀಡಬೇಕೆಂಬ ಶಿಫಾರಸ್ಸಿದ್ದರೂ, ಸರ್ಕಾರ ಕೇವಲ ಶೇ. 0.6ರಷ್ಟು ಮಾತ್ರ ಮೀಸಲಿಟ್ಟಿದೆ. ಅಲ್ಪಸಂಖ್ಯಾತರ ಶಿಕ್ಷಣ ಮತ್ತು ಕಲ್ಯಾಣ ನಿಧಿಯಲ್ಲಿ ಶೇ. 92ರಷ್ಟು ಭಾರಿ ಕಡಿತ ಮಾಡಿರುವುದು ಸರ್ಕಾರದ ತಾರತಮ್ಯ ನೀತಿಯನ್ನು ತೋರಿಸುತ್ತದೆ. ಕಳೆದ ವರ್ಷ ಪ್ರಧಾನ ಮಂತ್ರಿ ಆವಾಸ್ ಯೋಜನೆ (PMAY) ಅಡಿಯಲ್ಲಿ 54,832 ಕೋಟಿ ರೂಪಾಯಿ ನಿಗದಿಪಡಿಸಿದ್ದರೂ, ಕೇವಲ 32,500 ಕೋಟಿ ರೂಪಾಯಿ ಮಾತ್ರ ಬಳಕೆ ಮಾಡಲಾಗಿದೆ. ಇದು ಬಡವರಿಗೆ ಮನೆ ಒದಗಿಸುವಲ್ಲಿ ಸರ್ಕಾರದ ಇಚ್ಛಾಶಕ್ತಿಯ ಕೊರತೆಯನ್ನು ತೋರಿಸುತ್ತದೆ.

### ಆರ್ಥಿಕ ಅಸಮಾನತೆಯ ಪರಾಕಾಷ್ಠೆ:

ಭಾರತದ ಸಂಪತ್ತು ಇಂದು ಕೇವಲ ಕೆಲವು ಬಿಲಿಯನೇರ್‌ಗಳ ಕೈಯಲ್ಲಿ ಕೇಂದ್ರೀಕೃತವಾಗಿದೆ. ದೇಶದ ಮೇಲ್‌ಸ್ತರದ ಶೇ. 10ರಷ್ಟು ಜನರು ರಾಷ್ಟ್ರೀಯ ಆದಾಯದ ಶೇ. 57ರಷ್ಟು ಪಾಲನ್ನು ಹೊಂದಿದ್ದಾರೆ. ದೇಶದ 248 ಬಿಲಿಯನೇರ್‌ಗಳ ಒಟ್ಟು ಸಂಪತ್ತು ಸುಮಾರು 98 ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಇದು ಜಿಡಿಪಿಯ ಮೂರನೇ ಒಂದು ಭಾಗದಷ್ಟಿದೆ. ಆಶ್ಚರ್ಯಕರ ವಿಷಯವೆಂದರೆ, ಸರ್ಕಾರವು ಕಳೆದ ಕೆಲವು ವರ್ಷಗಳಲ್ಲಿ ಕಾರ್ಪೊರೇಟ್ ದೈತ್ಯರ ಸುಮಾರು 16.50 ಲಕ್ಷ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡಿದೆ. ಆದರೆ ರೈತರ ಅಥವಾ ವಿದ್ಯಾರ್ಥಿಗಳ ಸಾಲ ಮನ್ನಾ ಮಾಡಲು ಸರ್ಕಾರಕ್ಕೆ ಹಣವಿಲ್ಲ.

### ಉತ್ತರದಾಯಿತ್ವ ಇಲ್ಲವೇ ಇಲ್ಲ!

ಕೇಂದ್ರ ಬಿಜೆಪಿ ಸರ್ಕಾರ 12 ವರ್ಷಗಳ ಹಿಂದೆ ಅಧಿಕಾರಕ್ಕೆ ಬರುವಾಗ ಅಚ್ಛೇದಿನದ ಭರವಸೆ ನೀಡಿತ್ತು. 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿತ್ತು. ಈಗ ವಿಕಸಿತ ಭಾರತದ ಬಗ್ಗೆ ಘೋಷಣೆ ಎತ್ತಿದೆ. ಈ ವರೆಗೆ ಹಿಂದಿನ ವರ್ಷದ ಯೋಜನೆಗಳ ಪ್ರಗತಿ ಏನು, ನೀಡಿದ್ದ ಭರವಸೆಗಳ ಅನುಷ್ಠಾನ ಎಲ್ಲಿಗೆ ಬಂದಿದೆ ಎಂಬಿತ್ಯಾದಿ ಅವಲೋಕನವಾಗಲಿ, ಉತ್ತರದಾಯಿತ್ವವಾಗಲಿ ಬಜೆಟ್ ಭಾಷಣದಲ್ಲಿ ಇಲ್ಲವೇ ಇಲ್ಲ. ಪ್ರತಿ ವರ್ಷ ಹೊಸ ಯೋಜನೆ, ಹೊಸ ಘೋಷಣೆಗಳನ್ನು ಎತ್ತುತ್ತಾ ಜನತೆ ಸುಳ್ಳು ಕನಸುಗಳ ಬೆನ್ನುಹತ್ತಿ ಹೋಗುವಂತೆ ಮಾಡಲಾಗುತ್ತಿದೆ.

ಒಟ್ಟಾರೆಯಾಗಿ, 2026–27ರ ಕೇಂದ್ರ ಬಜೆಟ್ ಬಂಡವಾಳಶಾಹಿಗಳ ಏಳಿಗೆಗಾಗಿ ರೂಪಿಸಿದ ಯೋಜನೆಯಾಗಿದೆ. ಇದು ಶ್ರೀಮಂತರ ಸಂಪತ್ತನ್ನು ವೃದ್ಧಿಸಲು ಸಹಾಯ ಮಾಡುತ್ತದೆ ಮತ್ತು ಬಡವರ ಹೊಟ್ಟೆಯ ಮೇಲೆ ಹೊಡೆಯುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆ ಹೊರಿಸಿ, ಸಾರ್ವಜನಿಕ ಆಸ್ತಿಗಳನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಯನ್ನು ಇದು ವೇಗಗೊಳಿಸಿದೆ. ಇದು ಜನರ ಬಜೆಟ್ ಆಗುವ ಬದಲಿಗೆ, ಕಾರ್ಪೊರೇಟ್ ಸಂಸ್ಥೆಗಳ ಲಾಭದ ಹಾದಿಯನ್ನು ಸುಗಮಗೊಳಿಸುವ ದಸ್ತಾವೇಜಾಗಿದೆ. ಜನಸಾಮಾನ್ಯರು ಒಗ್ಗಟ್ಟಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡದಿದ್ದರೆ, ಈ ಆರ್ಥಿಕ ಅಸಮಾನತೆ ದೇಶವನ್ನು ಮತ್ತಷ್ಟು ಪ್ರಪಾತಕ್ಕೆ ದೂಡಲಿದೆ. ■

# ಸೂಡಾನ್‌ನಲ್ಲಿ ವಿಭಿನ್ನ ಜನಾಂಗಗಳ ಮಧ್ಯೆ ಗಲಭೆ ಸೃಷ್ಟಿಸಿದ ಸಾಮ್ರಾಜ್ಯಶಾಹಿಗಳು

ಹೇರಳ ತೈಲ ನಿಕ್ಷೇಪ, ನೈಸರ್ಗಿಕ ಅನಿಲ, ಚಿನ್ನ ಸೇರಿದಂತೆ ಹಲವು ಖನಿಜ ಸಂಪತ್ತನ್ನು ಹೊಂದಿರುವ ಪೂರ್ವ ಆಫ್ರಿಕಾದ ದೇಶ ಸೂಡಾನ್. ಇಲ್ಲಿನ ಎಸ್‌ಎಎಫ್ ಹೆಸರಿನ ಸೇನೆ ಮತ್ತು ಅರೆಸೇನಾಪಡೆ ಆರ್‌ಎಸ್‌ಎಫ್‌ಗಳ ಮಧ್ಯೆ ಆಂತರಿಕ ಯುದ್ಧ 2023ರ ಏಪ್ರಿಲ್‌ನಿಂದ ನಡೆಯುತ್ತಿದ್ದು, ಹಲವು ತಿಂಗಳಿಂದ ಇದು ಮಿತಿ ಮೀರಿದೆ.

ಜಂಜವೀಡ್ ಬಂಡುಕೋರರು ದಕ್ಷಿಣ ಸೂಡಾನ್‌ನ ದಾರ್‌ಫುರ್ ಎಂಬಲ್ಲಿ ಹತ್ಯಾಕಾಂಡ ಹಾಗೂ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವ ಮೂಲಕ ಆ ಪ್ರದೇಶದಲ್ಲಿ ಭೀತಿಯ ವಾತಾವರಣವನ್ನು ಸೃಷ್ಟಿಸಿದ್ದಾರೆ. ಸೂಡಾನ್‌ನ ಮಿಲಿಟರಿ ಸರ್ಕಾರದ ಇಬ್ಬರು ಪ್ರಭಾವಿಗಳಾದ, ಸರ್ಕಾರದ ಭಾಗವಾಗಿ 2019ರಲ್ಲಿ ದಂಗೆಯ ಮೂಲಕ ಅಧಿಕಾರಕ್ಕೆ ಬಂದ ಜನರಲ್ ಅಬ್ದೆಲ್ ಫತಾಹ್ ಅಲ್ ಬುರ್ಹಾನ್ ಹಾಗೂ ಆರ್‌ಎಸ್‌ಎಫ್ ಪಡೆಯ ಮುಖ್ಯಸ್ಥ ಮುಹಮ್ಮದ್ ಹಮ್ದಾನ್ ಡಗಾಲೊ ಎಂಬುವವರ ಮಧ್ಯೆ ನಡೆದ ಕಲಹದಲ್ಲಿ ದೇಶದಾದ್ಯಂತ 1.50 ಲಕ್ಷ ಜನರು ಹತರಾಗಿದ್ದಾರೆ. 1.4 ಕೋಟಿ ಜನರು ತಮ್ಮ ಮನೆಗಳನ್ನು ತೊರೆದು ಜೀವ ಉಳಿಸಿಕೊಳ್ಳಲು ಬೇರೆ ಕಡೆ ಹೋಗಿದ್ದಾರೆ. ಆ ಪೈಕಿ 30 ಲಕ್ಷ ಜನರು ನೆರೆಯ ದೇಶಗಳಾದ ಚಾಡ್, ಇಥಿಯೋಪಿಯಾ ಮತ್ತು ದಕ್ಷಿಣ ಸೂಡಾನ್‌ನತ್ತ ತೆರಳಿದ್ದಾರೆ. ದೇಶದ ಅರ್ಧದಷ್ಟು ಜನಸಂಖ್ಯೆ ಅಂದರೆ 2.5 ಕೋಟಿ ಜನಸಂಖ್ಯೆಯು ತೀವ್ರ ಹಸಿವಿನಿಂದ ಬಳಲುತ್ತಿದೆ. ಆರೋಗ್ಯ ಮತ್ತು ಶಿಕ್ಷಣ ವ್ಯವಸ್ಥೆಗಳು ಸಂಪೂರ್ಣ ಕುಸಿದು ಬಿದ್ದಿವೆ. ಇದಕ್ಕಿಂತ ಭೀಕರವೆಂದರೆ ಸುಮಾರು 1.2 ಕೋಟಿ ಬಾಲಕಿಯರು ಮತ್ತು ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾರೆ.

ಒಂದು ಕಾಲಕ್ಕೆ ವೈಭವದಿಂದ ಮೆರೆದಿದ್ದ ದೇಶದ ರಾಜಧಾನಿ ಖಾರ್ಟೋಮ್ ಕ್ಷಿಪಣಿಗಳ ದಾಳಿಯಿಂದ ಸುಟ್ಟು ಬೂದಿಯಾದ ನಗರವಾಗಿ ಉಳಿದಿದೆ. ಸಾಮ್ರಾಜ್ಯಶಾಹಿಗಳ ಚಿತಾವಣೆಗೆ ಸಿಲುಕಿರುವ ಪ್ಯಾಲೆಸ್ಟೈನಿನ ಗಾಜಾ ಪಟ್ಟಿಯಂತೆ ಈ ನಗರ ತೀವ್ರ ಮಾನವೀಯ ಬಿಕ್ಕಟ್ಟನ್ನು ಎದುರಿಸುತ್ತಿದೆ.

### ಸಾಮ್ರಾಜ್ಯಶಾಹಿ ತಿಮಿಂಗಿಲಗಳ ಗುರಿ

ಸೂಡಾನ್ ದೇಶವು 1899ರಿಂದ 1956ರವರೆಗೆ ಬ್ರಿಟಿಷರ ವಸಾಹತಾಗಿತ್ತು. 1956ರ ಜನವರಿ 1ರಂದು ಸ್ವಾತಂತ್ರ್ಯ ಪಡೆಯಿತು. ವಿಭಿನ್ನ ಬುಡಕಟ್ಟು, ಸಂಸ್ಕೃತಿ ಹಿನ್ನೆಲೆಯ ಜನರು ಇಲ್ಲಿದ್ದರೂ ಶತಮಾನಗಳಿಂದ ಪರಸ್ಪರ ಸೌಹಾರ್ದದಿಂದ ವಾಸವಾಗಿದ್ದರು. ಹಲವು ಜನಾಂಗಗಳ ಮಧ್ಯೆ ಮದುವೆ ಸಂಬಂಧಗಳು ಏರ್ಪಡುತ್ತಿದ್ದವು. ಆ ಮೂಲಕ ಸಮಾನ ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳನ್ನು ಒಳಗೊಂಡಿದ್ದವು. ಆದರೆ, ದಶಕಗಳ ಕಾಲ ಬ್ರಿಟಿಷರ ವಸಾಹತಾಗಿ ಇದ್ದುದರಿಂದ ಭಾರಿ ಪ್ರಮಾಣದ ಸಂಪನ್ಮೂಲಗಳಿದ್ದರೂ ಸೂಡಾನಿಗರು ಬಡತನದಲ್ಲಿಯೇ ಬೆಂದು ಹೋಗುತ್ತಿದ್ದರು. ಭೀಕರ ಬರಗಾಲ, ಕ್ಷಾಮ ಮತ್ತು ಇತರ ನೈಸರ್ಗಿಕ ವಿಪತ್ತುಗಳಿಂದಾಗಿ ತೀವ್ರ ಸ್ವರೂಪದ ಹಸಿವು ಮತ್ತು ಅಪೌಷ್ಟಿಕತೆಯು ಇಲ್ಲಿನ ಜನರನ್ನು ಕಿತ್ತು ತಿನ್ನುತ್ತಿತ್ತು. ಸೂಡಾನ್ ದೇಶ ಸಾರ್ವಭೌಮತ್ವವನ್ನು ಪಡೆದುಕೊಂಡ ಬಳಿಕ ರಾಷ್ಟ್ರವಾದಿ ಚಿಂತನೆಯ ಮೂಲಕ ಆರ್ಥಿಕ ಅಭಿವೃದ್ಧಿಯತ್ತ ಹೊರಳುವ ನೀತಿಯನ್ನು ಅನುಸರಿಸಲು ಮುಂದಾಗಿತ್ತು.

ಸೂಡಾನಿಗರ ಈ ಪ್ರಯತ್ನಗಳು ಅಮೆರಿಕ ಮತ್ತು ಇಂಗ್ಲೆಂಡ್ ದೇಶದ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಇರುಸು ಮುರುಸು ಉಂಟು ಮಾಡಿದವು. ಹಾಗಾಗಿ, ತಮ್ಮ ಒಡೆದು ಆಳುವ ತಂತ್ರಗಾರಿಕೆಯನ್ನು ಇಲ್ಲಿಯೂ ಅನುಸರಿಸಿದವು. ಸೂಡಾನ್‌ನ ಬುಡಕಟ್ಟು ಜನರಲ್ಲಿ ಇತರ ಸಮುದಾಯಗಳ ಬಗ್ಗೆ ವೈಮನಸ್ಸನ್ನು ಬೆಳೆಸುವಂತೆ ಪ್ರಚೋದಿಸಿದವು. ಬಡತನ, ಹಸಿವಿನಿಂದ ಕಂಗೆಟ್ಟಿದ್ದ ಜನ ಆಳ್ವಿಕರ ವಿರುದ್ಧ ಬಂಡೇಳದಂತೆ ಅವರು ತಮ್ಮತಮ್ಮಲ್ಲಿ ಕಚ್ಚಾಡುವಂತೆ ಸಂಚು ರೂಪಿಸಿದವು. ಸಾಮ್ರಾಜ್ಯಶಾಹಿ ತಿಮಿಂಗಿಲಗಳು ವಿವಿಧ ಬಂಡಾಯ ಗುಂಪುಗಳಿಗೆ ರಹಸ್ಯವಾಗಿ ಹಣಕಾಸು ಹಾಗೂ ಮಿಲಿಟರಿ ನೆರವು ನೀಡಿ ಸೂಡಾನಿನಲ್ಲಿ ಕೋಮುವಾದಿ–ಜನಾಂಗೀಯವಾದಿ ಸಂಘರ್ಷಗಳಿಗೆ ತುಪ್ಪ ಸುರಿದವು.

ಇದರಿಂದಾಗಿ ಮುಸ್ಲಿಂ ಮತ್ತು ಅರಬ್ ಜನಾಂಗದ ಪ್ರಾಬಲ್ಯವಿರುವ ಉತ್ತರ ಸೂಡಾನ್ ಮತ್ತು ಆಫ್ರಿಕಾದ ಕ್ರೈಸ್ತ ಜನಾಂಗದ ಪ್ರಾಬಲ್ಯವಿರುವ ದಕ್ಷಿಣ ಸೂಡಾನ್, ಒಂದೇ ರಾಷ್ಟ್ರವಾಗಿದ್ದರೂ ವಾಸ್ತವದಲ್ಲಿ ಬೇರೆಯಾಗಿಯೇ ಉಳಿದವು. ಹೀಗೆ, ಸಾಮ್ರಾಜ್ಯಶಾಹಿ ಕುಟಿಲತಂತ್ರಕ್ಕೆ ಬಲಿಯಾದ ಸೂಡಾನ್ ಜನಾಂಗೀಯ ಸಂಘರ್ಷಗಳಿಗೆ ಸತತವಾಗಿ ಬಲಿಯಾಗುತ್ತಾ ನೆಮ್ಮದಿಯ ಜೀವನಕ್ಕೆ ಎರವಾಗಿದೆ.

### ಅಮೆರಿಕ ಸಾಮ್ರಾಜ್ಯಶಾಹಿಗಳಿಗೆ ಮಗ್ಗಲು ಮುಳ್ಳಾದ ಸೂಡಾನ್ ಅಧ್ಯಕ್ಷ ಅಲ್ ಬಷೀರ್

ಇಂತಹ ಸಂದರ್ಭದಲ್ಲಿ 1989ರಲ್ಲಿ ಸೂಡಾನ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಒಮರ್ ಹಸನ್ ಅಲ್ ಬಷೀರ್ ಅವರು ಅಮೆರಿಕ ಹಾಗೂ ಇಂಗ್ಲೆಂಡಿನ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ತಮ್ಮ ದೇಶವನ್ನು ಲೂಟಿ ಮಾಡಲು ಅವಕಾಶ ನೀಡಲಿಲ್ಲ. ನಿರಂತರ ಒತ್ತಡಗಳ ಮಧ್ಯೆಯೂ ಬಷೀರ್ ಅವರು ತನ್ನ ದೇಶದ ತೈಲ ಬಾವಿಗಳನ್ನು ಇವರಿಗೆ ಬಿಟ್ಟುಕೊಡಲಿಲ್ಲ. ಅಲ್ಲದೇ, ಅಮೆರಿಕವು ಇರಾಕ್ ಮೇಲೆ ಯುದ್ಧ ಸಾರಿದ ಕ್ರಮವನ್ನು ಬೆಂಬಲಿಸಲಿಲ್ಲ. ಇವರ ಕಠಿಣ ನಿಲುವು ಸಾಮ್ರಾಜ್ಯಶಾಹಿಗಳಿಗೆ ನುಂಗಲಾರದ ತುತ್ತಾಯಿತು. ಹೇಗಾದರೂ ಮಾಡಿ ದೇಶವನ್ನು ಅಸ್ಥಿರಗೊಳಿಸಲು ನಿರ್ಧರಿಸಿ 1998ರಲ್ಲಿ ಸೂಡಾನ್‌ನ ಅತಿ ದೊಡ್ಡ ಔಷಧ ತಯಾರಿಕಾ ಘಟಕದ ಮೇಲೆ ಕ್ಷಿಪಣಿ ದಾಳಿ ನಡೆಸಲಾಯಿತು. ಈ ಘಟಕವು ಇಡೀ ಸೂಡಾನ್ ದೇಶದ ಶೇ 60ರಷ್ಟು ಔಷಧದ ಬೇಡಿಕೆಯನ್ನು ನೀಗಿಸುತ್ತಿತ್ತು. ಆ ಘಟಕದಲ್ಲಿ ರಹಸ್ಯವಾಗಿ ರಾಸಾಯನಿಕ ಅಸ್ತ್ರಗಳನ್ನು ಉತ್ಪಾದಿಸಲಾಗುತ್ತಿದೆ ಎಂಬ ಸುಳ್ಳು ಕಾರಣ ನೀಡಿ ಈ ಕ್ಷಿಪಣಿ ದಾಳಿ ನಡೆಸಿದರು. ಹೇಗೆ ಪೆಂಟಗನ್ ಆಡಳಿತಗಾರರು ಇರಾಕ್‌ನಲ್ಲಿ ಸಮೂಹನಾಶಕ ಶಸ್ತ್ರಗಳಿವೆ ಎಂಬ ಕಾರಣ ನೀಡಿ ಅಲ್ಲಿನ ಅಧ್ಯಕ್ಷ ಸದ್ದಾಂ ಹುಸೇನ್ ಅವರನ್ನು ಬಂಧಿಸಿ ಗಲ್ಲಿಗೇರಿಸಿದರೋ, ಅದೇ ಮಾದರಿಯಲ್ಲಿ ಸೂಡಾನ್ ಸರ್ಕಾರ 2008ರಲ್ಲಿ ಪಶ್ಚಿಮ ಸೂಡಾನ್‌ನ ದರ್ಫುರ್ ಎಂಬಲ್ಲಿ ಭಾರಿ ಪ್ರಮಾಣದ ಹತ್ಯಾಕಾಂಡ ನಡೆಸಿದೆ ಎಂಬ ಆರೋಪ ಹೊರಿಸಿದರು. ಯುದ್ಧಾಪರಾಧ ಮಾಡಿದ ಕಾರಣಕ್ಕಾಗಿ ಸೂಡಾನ್ ಸರ್ಕಾರದ ವಿರುದ್ಧ ವಿಚಾರಣೆ ನಡೆಸಲು ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯವು (ICC) ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಿದರು.

ಹೇಗಾದರೂ ಮಾಡಿ ಸೂಡಾನ್‌ನ ನೈಸರ್ಗಿಕ ಸಂಪತ್ತನ್ನು ಲೂಟಿ ಹೊಡೆಯಲು ಕಾಯುತ್ತಿರುವ ಅಮೆರಿಕನ್ ಸಾಮ್ರಾಜ್ಯಶಾಹಿ ಕಳೆದ 30 ವರ್ಷಗಳಿಂದ ಆ ದೇಶದ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ಹೇರಿ ದೇಶದ ಕತ್ತು ಹಿಸುಕಿದೆ. ಅಮೆರಿಕದ ತಾಳಕ್ಕೆ ತಕ್ಕಂತೆ ಕುಣಿಯುವ ವಿಶ್ವಸಂಸ್ಥೆಯೂ ದಾರ್ಫುರ್‌ನಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ತಡೆಗಟ್ಟುವ ನೆಪದಲ್ಲಿ ಶಸ್ತ್ರಗಳ ಪೂರೈಕೆಗೆ ತಡೆ, ಆಸ್ತಿಗಳ ಜಪ್ತಿ ಹಾಗೂ ಸೂಡಾನ್‌ಗೆ ತೆರಳುವವರ ಮೇಲೆ ಪ್ರಯಾಣ ನಿರ್ಬಂಧಗಳನ್ನು ಹೇರಿದೆ.

ಮತ್ತೊಂದೆಡೆ, ಮತ್ತೊಂದು ಸಾಮ್ರಾಜ್ಯಶಾಹಿ ಶಕ್ತಿಯಾಗಿ (2004ರ ಪ್ರತಿಕ್ರಾಂತಿಯ ಬಳಿಕ) ಬದಲಾಗಿರುವ ಚೀನಾ ಮತ್ತು ರಷ್ಯಾಗಳು ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು, ಸೂಡಾನ್ ಅನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಸಲುವಾಗಿ ಅಮೆರಿಕ ಹೇರಿದ ಆರ್ಥಿಕ ದಿಗ್ಬಂಧನಗಳನ್ನು ಹಾಗೂ ಒಮರ್ ಅಲ್ ಬಷೀರ್ ವಿರುದ್ಧ ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯ ಹೊರಡಿಸಿದ ಬಂಧನ ವಾರೆಂಟ್ ವಿರೋಧಿಸಿದವು. ಬಹಳ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಏನೆಂದರೆ ರಷ್ಯಾ, ಚೀನಾ ಮತ್ತು ಇರಾನ್ ಸೂಡಾನ್ ವ್ಯಾಪ್ತಿಯ ಬಂದರಿನಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಯತ್ನಿಸುತ್ತಿವೆ. ಚೀನಾ ಸೂಡಾನ್‌ನ ಮೂಲಸೌಕರ್ಯಗಳಿಗಾಗಿ ಮೇಲೆ ಭಾರಿ ಪ್ರಮಾಣದ ಹೂಡಿಕೆಯನ್ನು ಮಾಡಿದ್ದು, ಪೋರ್ಟ್ ಸೂಡಾನ್‌ನಲ್ಲಿ ನೆಲೆಯೂರಲು ತನ್ನ ಆಸಕ್ತಿಯನ್ನು ವ್ಯಕ್ತಪಡಿಸಿದೆ.

ರಷ್ಯಾ ಸೂಡಾನ್ ಜಲಪ್ರದೇಶದಲ್ಲಿ ತನ್ನ ಸೇನಾ ನೆಲೆಯನ್ನು ಸ್ಥಾಪಿಸಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಇದಕ್ಕೆ ಪೂರಕವಾಗಿ ಪೋರ್ಟ್ ಸೂಡಾನ್‌ನಲ್ಲಿ ರಷ್ಯಾದ ಸೇನಾ ನೆಲೆಗೆ ತಮ್ಮಿಂದ ಯಾವುದೇ ಅಡ್ಡಿ ಇಲ್ಲ ಎಂದು ಸೂಡಾನ್ ವಿದೇಶಾಂಗ ಸಚಿವ ಅಲಿ ಯೂಸುಫ್ ಸ್ಪಷ್ಟಪಡಿಸಿದ್ದಾರೆ. ಈ ಹೇಳಿಕೆಯು ಪಶ್ಚಿಮದ ಸಾಮ್ರಾಜ್ಯಶಾಹಿಗಳನ್ನು ಚಿಂತೆಗೆ ದೂಡಿದೆ. ಈ ಒಪ್ಪಂದದ ಪ್ರಕಾರ ರಷ್ಯಾ 300ಕ್ಕೂ ಅಧಿಕ ಜನರಿರುವ ಸೇನಾಪಡೆಯನ್ನು ಅಲ್ಲಿ ನೆಲೆಗೊಳಿಸಿ ಯುದ್ಧ ನೌಕೆಯನ್ನು ನಿಲ್ಲಿಸಲಿದೆ. ಜೊತೆಗೆ ಜಲಾಂತರ್ಗಾಮಿಗಳ ಕಾರ್ಯಾಚರಣೆಯನ್ನು ಶುರು ಮಾಡಲಿದೆ. ಆ ಮೂಲಕ ತನ್ನ ಸೇನಾ ಶಕ್ತಿಯನ್ನು ಪ್ರದರ್ಶಿಸುವುದು ಹಾಗೂ ಪಶ್ಚಿಮದ ದೇಶಗಳ ಹಿತಾಸಕ್ತಿಗಳಿಗೆ ಎದಿರೇಟು ನೀಡುವುದು ಇದರ ಉದ್ದೇಶವಾಗಿದೆ.

### ದೇಶ ವಿಭಜನೆ

ಅಮೆರಿಕಾ ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಿಂದ 2011ರಲ್ಲಿ ಸೂಡಾನ್, ಉತ್ತರ ಮತ್ತು ದಕ್ಷಿಣ ಸೂಡಾನ್ ಆಗಿ ವಿಭಜಿತವಾಯಿತು. ಬಷೀರ್ ಉತ್ತರ ಸೂಡಾನ್‌ನ ಆಳ್ವಿಕರಾದರು. 2019ರಲ್ಲಿ ಅವರನ್ನು ಮಿಲಿಟರಿ ದಂಗೆಯ ಮೂಲಕ ಪದಚ್ಯುತಗೊಳಿಸಲಾಯಿತು. ನಂತರ ಅವರ ಮೇಲೆ ಹಲವಾರು ಆರೋಪಗಳನ್ನು ಮಾಡಿ ಜೈಲಿಗೆ ಹಾಕಲಾಗಿದೆ. ನಂತರ, ಅಮೆರಿಕಾ ಬೆಂಬಲಿತ ಅಬ್ದಲ್ಲಾ ಹಾಮ್ಡೊಕ್ ಉತ್ತರ ಸೂಡಾನಿನ ಪ್ರಧಾನಿಯಾದರೆ, ದಕ್ಷಿಣ ಸೂಡಾನ್ ಸಾಲ್ವಾಕೀರ್ ಮಯಾರ್ದಿತ್ ನೇತೃತ್ವದಲ್ಲಿ ಅಧ್ಯಕ್ಷೀಯ ಗಣರಾಜ್ಯವಾಗಿದೆ.

### ಸೂಡಾನ್‌ನ ಸದ್ಯದ ಚಿತ್ರಣ

ಆದರೆ ಇದರಿಂದ ಸೂಡಾನಿನ ಸಮಸ್ಯೆ ಬಗೆಹರಿದಿಲ್ಲ. ಬದಲಿಗೆ 2019ರ ಮಿಲಿಟರಿ ದಂಗೆಯ ನೇತೃತ್ವ ವಹಿಸಿದ್ದ ಇಬ್ಬರು ನಾಯಕರ ನಡುವೆಯೇ ಕಲಹ ನಡೆಯುತ್ತಿದೆ. ಪ್ರಸ್ತುತ ಎಸ್‌ಎಎಫ್ ಹಾಗೂ ಆರ್‌ಎಸ್‌ಎಫ್ ಬಣಗಳ ನಡುವೆ 2023ರ ಏಪ್ರಿಲ್ 15ರಂದು ಮತ್ತೆ ಅಂತರ್ಯುದ್ಧ ಶುರುವಾಗಿದ್ದು, ಜಾಗತಿಕವಾಗಿ ಸೂಡಾನ್‌ನ ಈ ಅಂತಃಕಲಹ ಅತಿ ಭೀಕರ ಎಂದು ಭಾವಿಸಲಾಗಿದೆ. ಪಶ್ಚಿಮ ಸೂಡಾನ್‌ನ ದಾರ್ಫುರ್‌ನಲ್ಲಿ ವ್ಯಾಪಕವಾದ ಹತ್ಯಾಕಾಂಡ ಸಂಭವಿಸುತ್ತಿದೆ ಎಂದು ರಾಜಕೀಯ ವಿಶ್ಲೇಷಕರು ತಿಳಿಸಿದ್ದಾರೆ. ಇದಕ್ಕಿಂತ ಹೆಚ್ಚಾಗಿ ಯುದ್ಧಾಪರಾಧಗಳು ಭಾರಿ ಪ್ರಮಾಣದಲ್ಲಿ ಸಂಭವಿಸುತ್ತಿವೆ. ಎರಡೂ ಬಣಗಳು ಬಾಲಯೋಧರನ್ನು ಬಳಸಿಕೊಳ್ಳುತ್ತಿವೆ. ನಾಗರಿಕರ ಮೇಲೆ ಭಾರಿ ದೌರ್ಜನ್ಯ ಎಸಗುತ್ತಿವೆ. ಪತ್ರಕರ್ತರನ್ನು ಬಂಧಿಸಲಾಗುತ್ತಿದೆ. ನಾಗರಿಕರು ಮೇಲಿಂದ ಮೇಲೆ ದಾಳಿಗೊಳಗಾಗುತ್ತಿದ್ದಾರೆ. ಮಾನವ ಹಕ್ಕುಗಳ ಉಲ್ಲಂಘನೆಯೂ ಹೆಚ್ಚುತ್ತಿದೆ. ಔಷಧಿಗಳನ್ನು ತಲುಪಿಸುವ ಆರೋಗ್ಯ ಕಾರ್ಯಕರ್ತರ ಮೇಲೆ ನಡೆಯುತ್ತಿರುವ ದಾಳಿಯಿಂದಾಗಿ ಗಾಯಾಳುಗಳಿಗೆ ಸಕಾಲಕ್ಕೆ ವೈದ್ಯಕೀಯ ನೆರವು ಸಿಗದೇ ಇದ್ದುದರಿಂದ ಸೂಡಾನ್‌ನ ಆರೋಗ್ಯ ವ್ಯವಸ್ಥೆ ಸಂಪೂರ್ಣ ಕುಸಿದು ಹೋಗಿದೆ. ದೇಶದ ಅತಿ ದೊಡ್ಡ ನಗರವಾದ ಅಲ್ ಫಾಷರ್‌ನಲ್ಲಿ 4 ಲಕ್ಷ ಜನರು ವಿವಿಧೆಡೆಯಿಂದ ಮನೆ ಮಠ ಕಳೆದುಕೊಂಡು ಇಲ್ಲಿ ನೆಲೆ ಕಂಡುಕೊಂಡಿದ್ದು, ಈ ನಗರವನ್ನು ಸೇರುವವರ ಸಂಖ್ಯೆ ಹೆಚ್ಚುತ್ತಿದೆ.

ಸೂಡಾನ್‌ನ ಶೇ 70ರಷ್ಟು ಆಸ್ಪತ್ರೆಗಳನ್ನು ಧ್ವಂಸಗೊಳಿಸಲಾಗಿದೆ. ಇದರಿಂದಾಗಿ ಸಕಾಲಕ್ಕೆ ಆರೋಗ್ಯ ಸೇವೆ ಸಿಗದೇ ಲಕ್ಷಾಂತರ ಜನರು ಪರದಾಡುತ್ತಿದ್ದಾರೆ. ವೈದ್ಯಕೀಯ ನೆರವಿನ ಕೊರತೆಯ ಮಧ್ಯೆಯೇ ಆ ದೇಶದಲ್ಲಿ ಕಾಲರಾ ರೋಗ ಉಲ್ಬಣಗೊಂಡಿದ್ದು, ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. 1.20 ಲಕ್ಷ ಜನರಲ್ಲಿ ಕಾಲರಾ ಕಾಣಿಸಿಕೊಂಡಿದ್ದು, ಅದರಲ್ಲಿ 3 ಸಾವಿರ ಜನರು ಕಾಯಿಲೆಯಿಂದ ಮೃತಪಟ್ಟಿದ್ದಾರೆ. 12 ದಶಲಕ್ಷ ಜನರು ತಮ್ಮ ನೆಲೆಗಳನ್ನು ಕಳೆದುಕೊಂಡು ಅನಾಥರಾಗಿದ್ದು, ಸೂಡಾನ್‌ನ ಅರ್ಧದಷ್ಟು ಜನರಿಗೆ ಮಾನವೀಯ ನೆಲೆಗಟ್ಟಿನ ನೆರವು ಅಗತ್ಯವಾಗಿ ಬೇಕಿದೆ.

### ಸಾಮ್ರಾಜ್ಯಶಾಹಿ ಶಕ್ತಿಗಳೇ ಕಾರಣ

ತಮ್ಮ ಹಿತಾಸಕ್ತಿಯ ಬೇಳೆ ಬೇಯಿಸಿಕೊಳ್ಳಲು ಸಾಮ್ರಾಜ್ಯಶಾಹಿ ಶಕ್ತಿಗಳು ಉದ್ದೇಶಪೂರ್ವಕವಾಗಿ ಯುದ್ಧಗಳನ್ನು ಹುಟ್ಟುಹಾಕುತ್ತವೆ. ಇಡೀ ದೇಶದಲ್ಲಿ ಅಸ್ಥಿರತೆಯನ್ನು ಉಂಟು ಮಾಡಿ ತೀವ್ರ ಮಾನವೀಯ ಬಿಕ್ಕಟ್ಟುಗಳನ್ನು ಸೃಷ್ಟಿ ಮಾಡುತ್ತವೆ. ಸೂಡಾನ್‌ನ ನೈಸರ್ಗಿಕ ಸಂಪತ್ತಿನ ಲೂಟಿಯನ್ನು ತಡೆಯಲು ಮುಂದಾದ ಅಲ್ಲಿನ ಅಧ್ಯಕ್ಷರಾಗಿದ್ದ ಅಲ್ ಬಷೀರ್ ಮೇಲೆ ಕ್ರಮಕ್ಕೆ ಮುಂದಾದ ಅಮೆರಿಕ, ಇಂಗ್ಲೆಂಡ್ ನೇತೃತ್ವದ ಸಾಮ್ರಾಜ್ಯಶಾಹಿಗಳನ್ನು ಸೂಡಾನ್‌ನ ದೇಶಪ್ರೇಮಿ, ಶಾಂತಿಪ್ರೇಮಿ ಜನತೆ ಸೋಲಿಸಬೇಕು. ತಮ್ಮ ದೇಶವನ್ನು ಹೇಗೆ ಮುನ್ನಡೆಸಬೇಕು ಎಂಬುದನ್ನು ಸೂಡಾನ್ ನಾಗರಿಕರು ನಿರ್ಧರಿಸಬೇಕೇ ಹೊರತು ಹೊರಗಿನವರಲ್ಲ. ಇಂತಹ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಸೋಲಿಸಲು ಸರಿಯಾದ ಕ್ರಾಂತಿಕಾರಿ ನಾಯಕತ್ವದಡಿಯಲ್ಲಿ ಎಲ್ಲರೂ ಒಂದಾಗಿ ಹೋರಾಟಗಳನ್ನು ನಡೆಸುವುದೊಂದೇ ಉಳಿದಿರುವ ಮಾರ್ಗವಾಗಿದೆ.



"ಸೂಡಾನ್ ಡಾರ್ಫೂರ್ ಪ್ರಾಂತ್ಯದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಹೆದರಿ ಪಲಾಯನ ಮಾಡುತ್ತಿರುವ ನಿರಾಶ್ರಿತರ ಸಾಮಾನು–ಸರಂಜಾಮುಗಳನ್ನು ಚಾಡ್ ದೇಶದ ಗಾಡಿ ಮಾಲೀಕರು ಸಾಗಿಸುತ್ತಿರುವುದು. ಸ್ಥಳ: ಸೂಡಾನ್ ಚಾಡ್ ಗಡಿಭಾಗದ ಅದ್ರೆ, ದಿನಾಂಕ: ಆಗಸ್ಟ್ 4, 2023" (ಕೃಪೆ: ರಾಯಿಟರ್ಸ್)

# ಮಹಿಳಾ ಮತಾಧಿಕಾರ ಪುರುಷರಿಗೇ ಏಕೆ ಅವಶ್ಯಕ

(ಅನೇಕ ತರಹದ ದೈಹಿಕ ನ್ಯೂನತೆಗಳನ್ನು ಮೀರಿ ಸಮಾಜವಾದಕ್ಕಾಗಿ ಹೋರಾಡಿದ ಮಹಾನ್ ಚೇತನ ಹೆಲೆನ್ ಕೆಲರ್ ಅವರ ಈ ಲೇಖನ ಅಕ್ಟೋಬರ್ 17, 1913ರಂದು, ಅಮೆರಿಕಾದ ಪತ್ರಿಕೆ ನ್ಯೂಯಾರ್ಕ್ ಕಾಲ್‌ನಲ್ಲಿ ಪ್ರಕಟವಾಗಿತ್ತು; **ಅಂತರರಾಷ್ಟ್ರೀಯ ಮಹಿಳಾ ದಿನ, ಮಾರ್ಚ್ 8, ತಮ್ಮ ಹಕ್ಕುಗಳಿಗಾಗಿ ಮಹಿಳೆಯರು ಹೋರಾಡಿದ, ಮಡಿದ ದಿನ. ಈ ಸಂದರ್ಭದಲ್ಲಿ ಅವರ ಲೇಖನದ ಭಾವಾನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.)**

ಮಹಿಳೆಯರು ಸ್ವತಃ ಗಂಡಾಂತರವಾಗಿ ಪರಿಣಮಿಸುವ ಕಾಲ ದೂರವಿಲ್ಲ ಎಂದು ಅನೇಕರು ಘೋಷಿಸುತ್ತಾರೆ. ನಿಸ್ಸಂದೇಹವಾಗಿ ಇದು ಸತ್ಯವೇ. ವಾಸ್ತವದಲ್ಲಿ, ಈ ಗಂಡಾಂತರ ಈಗಾಗಲೇ ಬಹಳಷ್ಟು ಮನೆಗಳನ್ನು ಪ್ರವೇಶಿಸಿದೆ ಎಂದು ನಾನು ಶಂಕಿಸುತ್ತೇನೆ. ಖಂಡಿತವಾಗಿಯೂ ಹೆಚ್ಚಿನ ಸಂಖ್ಯೆಯ ಪುರುಷರು ಉಪಹಾರದ ಮೇಜಿನ ಬಳಿ ಇದಕ್ಕೆ ಮುಖಾಮುಖಿಯಾಗಿದ್ದಾರೆ. ಅವರು ಎಷ್ಟೇ ಕಿವುಡರಂತೆ ನಟಿಸಿದರೂ, ಈ ಗಂಡಾಂತರದ ಧ್ವನಿಯನ್ನು ಕೇಳಿಸಿಕೊಳ್ಳದೆ ಇರಲು ಅವರಿಗೆ ಸಾಧ್ಯವಿಲ್ಲ.

ಮಹಿಳೆಯರು ತಮ್ಮ "ದೈವಿಕ ಹಕ್ಕುಗಳು," "ಬದಲಾಯಿಸಲಾಗದ ಹಕ್ಕುಗಳು," "ಅವಿಭಾಜ್ಯ ಹಕ್ಕುಗಳಿಗಾಗಿ" ಪಟ್ಟು ಹಿಡಿಯುತ್ತಿದ್ದಾರೆ. ಈ ಪದಗುಚ್ಛಗಳು ಯಾರೊಬ್ಬರು ಬಯಸುವಷ್ಟು ಸಂವೇದನಾಶೀಲವಾಗಿಲ್ಲ. ಆಳವಾಗಿ ಯೋಚಿಸಿದರೆ, ದೈವಿಕ, ಬದಲಾಯಿಸಲಾಗದ ಅಥವಾ ಅವಿಭಾಜ್ಯ ಹಕ್ಕುಗಳು ಎಂಬಂತಹವುಗಳೇ ಇಲ್ಲ. ಹಕ್ಕುಗಳು ಎಂಬುದು ನಾವು ಅವುಗಳಿಗಾಗಿ ಹೋರಾಡುವಷ್ಟು ಪ್ರಬಲರಾದಾಗ ನಮಗೆ ಸಿಗುವಂತಹವುಗಳು. ಪುರುಷರು ಇಂದು, ದೈವಿಕ, ಬದಲಾಯಿಸಲಾಗದ ಮತ್ತು ಅವಿಭಾಜ್ಯ ಎಂದು ಕರೆಯುವ ಹಕ್ಕುಗಳನ್ನು ಪಡೆಯಲು ನೂರಾರು ವರ್ಷಗಳ ಕಠಿಣ ಹೋರಾಟ ಮಾಡಿದ್ದಾರೆ. ಇಂದು ಮಹಿಳೆಯರು ಆಗ್ರಹಿಸುತ್ತಿರುವ ಅಂತಹ ಹಕ್ಕುಗಳನ್ನು ನಾಳೆ ಪ್ರಶ್ನಿಸುವಂತಹ ಮೂರ್ಖರು ಯಾರೂ ಇರುವುದಿಲ್ಲ.

ಬುದ್ಧಿವಂತಿಕೆ ಇರುವ ಯಾರಿಗಾದರೂ ನಮ್ಮ ಕೆಲವು ಹಳೆಯ ಆಲೋಚನೆಗಳು ಇಂದು ಅಪ್ರಸ್ತುತ ಮತ್ತು ಹೊಸ ಯುಗದ ಪ್ರಶ್ನಿಸುವ ಮನೋಭಾವದ ಮುಂದೆ ಸಂಪ್ರದಾಯಗಳು ಕಂಬಿ ಕೀಳುತ್ತಿವೆ ಎಂಬುದು ತಿಳಿದಿದೆ. ಹೊಸ ಪರಿಸ್ಥಿತಿಗಳು ಮತ್ತು ಹೊಸ ಆಲೋಚನೆಗಳ ಬೆಳಕಿನಲ್ಲಿ ಮಾನವ ವ್ಯವಹಾರಗಳನ್ನು ಅವಲೋಕಿಸುವ ಸಮಯ ಇದು; ಈ ನಿಟ್ಟಿನಲ್ಲಿ ಪುರುಷನೇ ಮನುಕುಲದ ಭವಿಷ್ಯವನ್ನು ನಿರ್ಧರಿಸುವವನು ಎಂಬ ಸಂಪ್ರದಾಯ ಕೊಚ್ಚಿಹೋಗಲಿದೆ.

ಈ ವಿಶ್ವದಲ್ಲಿ ಸಾಕಷ್ಟು ತಪ್ಪಿದೆ ಎಂಬುದನ್ನು ಸಾಮಾನ್ಯನೂ ಬಲ್ಲ. ಇದು ಹಳೆಯ ಶೈಲಿಯದಾಗಿದ್ದು, ಹಳೆಯ ಜಾಡಿನಲ್ಲೇ ಸಾಗುತ್ತಿದೆ. ಇಲ್ಲಿ ವಿವೇಕಯುತ ಮಾರ್ಗದರ್ಶನವೂ ಇಲ್ಲ, ಹತೋಟಿಯೂ ಇಲ್ಲ. ನಮ್ಮ ಅವಕಾಶಗಳು ಮತ್ತು ಅನುಕೂಲಗಳಿಂದ ನಮಗೆ ಗರಿಷ್ಠ ಪ್ರಯೋಜನ ಸಿಗುತ್ತಿಲ್ಲ.......ಬಹುಶಃ ಇಂದಿನ ಅಸ್ತವ್ಯಸ್ತ ಸ್ಥಿತಿಗೆ ಒಂದು ಮುಖ್ಯ ಕಾರಣವೆಂದರೆ, ಜಗತ್ತು ತನ್ನ ಅರ್ಧ ಭಾಗದೊಂದಿಗೆ ಮಾತ್ರ ಮುನ್ನಡೆಯಲು ಪ್ರಯತ್ನಿಸುತ್ತಿರುವುದು. ಮನುಕುಲಕ್ಕೆ ಜಗತ್ತನ್ನು ಉತ್ತಮ ನೆಲೆಯನ್ನಾಗಿ ಮಾಡುವಲ್ಲಿ ಬಳಸಬೇಕಾದ ಮಹಿಳಾ ಶಕ್ತಿಯು ಎಲ್ಲೆಡೆ ವ್ಯರ್ಥವಾಗುತ್ತಿರುವುದನ್ನು ನಾವು ಕಾಣುತ್ತೇವೆ. ವಿವೇಕದಿಂದ, ಒಳ್ಳೆಯ ರೀತಿಯಿಂದ ಬದುಕಲು ಮಹಿಳೆಯರ ಮತಗಳು ಹೇಗೆ ನೆರವಾಗುತ್ತವೆ ಎಂದು ನೋಡೋಣ.

ಮಹಿಳೆಯರು ಮತ ಚಲಾಯಿಸಿದಾಗ, ಪುರುಷರು ಅವರ ಆಕಾಂಕ್ಷೆಗಳನ್ನು ಊಹಿಸಲು ಮತ್ತು ಈ ಬಗ್ಗೆ ತಪ್ಪು ಊಹೆ ಮಾಡಲು ಆಸ್ಪದವಿರುವುದಿಲ್ಲ. ಮಹಿಳೆಯರು ತಮ್ಮ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಪುರುಷ ನಿರ್ಮಿತ ಕಾನೂನುಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ. ಮಹಿಳೆಯೆಡೆಗೆ ಮಾನವೀಯವಾಗಿ ವರ್ತಿಸಲು ಮತ್ತು ಅವಳ ಹಕ್ಕುಗಳನ್ನು ರಕ್ಷಿಸಲು ಪುರುಷನ ಎದೆಗಾರಿಕೆಯ ಸ್ವಭಾವವು ಪ್ರೇರೇಪಿಸುತ್ತದೆ ಎಂದು ಕೆಲವರು ಅಂದುಕೊಳ್ಳುತ್ತಾರೆ. ಕೆಲವು ಪುರುಷರು ಕೆಲವು ಮಹಿಳೆಯರನ್ನು ರಕ್ಷಿಸುತ್ತಾರೆ ಸಹ. ಆದರೆ, ಎಲ್ಲಾ ಮಹಿಳೆಯರು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರಬೇಕು ಮತ್ತು ಈ ಊಳಿಗಮಾನ್ಯ ಜವಾಬ್ದಾರಿಯಿಂದ ಪುರುಷನನ್ನು ಮುಕ್ತಗೊಳಿಸಬೇಕು ಎಂದು ನಾವು ಒತ್ತಾಯಿಸುತ್ತೇವೆ.



ರಾಜಕೀಯ ಅಧಿಕಾರವು ರಾಜ್ಯದ ವ್ಯವಹಾರಗಳನ್ನು ರೂಪಿಸುತ್ತದೆ ಮತ್ತು ಮನುಷ್ಯರ ನಡುವಿನ ದೈನಂದಿನ ಸಂಬಂಧಗಳನ್ನು ನಿರ್ಧರಿಸುತ್ತದೆ. ಮತದಾನದ ಹಕ್ಕಿರುವ ಪ್ರಜೆಯೇ ತನ್ನ ಸ್ವಂತ ವಿಧಿಗೆ ಜವಾಬ್ದಾರ. ಈ ಅಧಿಕಾರವಿಲ್ಲದ ಮತ್ತು "ನೈಸರ್ಗಿಕ ರಕ್ಷಕರು" ಇಲ್ಲದ ಮಹಿಳೆಯರು ಪುರುಷ ನಿರ್ಮಿತ ಕಾನೂನುಗಳ ಕೃಪೆಯಲ್ಲಿದ್ದಾರೆ. ಮತ್ತು ಈ ಕಾನೂನುಗಳು ಹೆಚ್ಚಿನಂಶ ಅವರಿಗೆ ಅನ್ಯಾಯ ಮಾಡುತ್ತವೆ ಎಂದು ಅನುಭವವು ಸಿದ್ಧ ಪಡಿಸುತ್ತದೆ. ತಂದೆ ಮತ್ತು ಪತಿಯ ಸುಪರ್ದಿಯಲ್ಲಿರುವ ಮಹಿಳೆಯರನ್ನು ರಕ್ಷಿಸಲು ಮಾಡಿದ ಶಾಸನಗಳು, ರಾಜ್ಯದ ಪೊಲೀಸರೇ ಏಕೈಕ ರಕ್ಷಕರಾಗಿರುವ ದುಡಿಯುವ ಮಹಿಳೆಯರನ್ನು ರಕ್ಷಿಸುವುದಿಲ್ಲ.

ಕೆಲವು ರಾಜ್ಯಗಳಲ್ಲಿ ಮಹಿಳೆಯರ ವೇತನವು ಅವರ ತಂದೆ ಅಥವಾ ಪತಿಗೆ ಸೇರಿರುತ್ತದೆ. ಅವರು ಆಸ್ತಿಯನ್ನು ಹೊಂದುವಂತಿಲ್ಲ. ಈ ತಥಾಕಥಿತ ಪುರುಷ ಪ್ರಜಾಪ್ರಭುತ್ವದ ಕೆಲವೆಡೆ ತಂದೆಯೇ ಮಗುವಿನ ಏಕೈಕ ವಾರಸುದಾರ. ಆತ ಇನ್ನೂ ಹುಟ್ಟದ ಮಗುವನ್ನು ಕೂಡ ಬೇರೆಯವರಿಗೆ ಕೊಟ್ಟು ಬಿಡಬಹುದು ಎಂದು ನಾನು ಕೇಳಿದ್ದೇನೆ. ವಿವಾಹದ ವಯಸ್ಸಿಗೆ (age of consent) ಸಂಬಂಧಿಸಿದ ಶಾಸನಗಳು, ಈ ಬಗ್ಗೆ ಮಹಿಳೆಗೆ ಧ್ವನಿಯೇ ಇಲ್ಲ ಎಂಬುದಕ್ಕೆ ಮತ್ತೊಂದು ಪುರಾವೆಯಾಗಿದೆ. ದುಡಿಯುವ ಮಹಿಳೆಯರಿಗೆ ಸಂಬಂಧಿಸಿದ ನಿಯಮಗಳು, ಪುರುಷರು ತಮ್ಮ 'ಸುಪರ್ದಿಯಲ್ಲಿರುವ ಮಹಿಳೆಯರನ್ನು' ಮಾತ್ರವೇ ರಕ್ಷಿಸುವಲ್ಲಿ ಜತನದಿಂದ ಇದ್ದಾರೆ ಎಂಬುದಕ್ಕೆ ನಿದರ್ಶನ.

ಆರ್ಥಿಕ ತುರ್ತುಗಳು ಮಹಿಳೆಯರನ್ನು ತಮ್ಮ ಮತದಾನದ ಹಕ್ಕಿಗಾಗಿ ಒತ್ತಾಯಿಸಲು ಪ್ರೇರೇಪಿಸಿವೆ. ಹೆಚ್ಚಿನ ಸಂಖ್ಯೆಯ ಮಹಿಳೆಯರಿಗೆ ಶಿಕ್ಷಣದ ಪ್ರಮುಖ ಸಾರ್ವಜನಿಕ ಜವಾಬ್ದಾರಿಯನ್ನು ಒಪ್ಪಿಸಲಾಗಿದೆ. ಆದರೂ ಶಿಕ್ಷಕಿಯರಿಗೆ ಗೌರವಯುತವಾಗಿ ಬದುಕುವಂತಹ ವೇತನವಿಲ್ಲ. ಈ ಅತಿಯಾಗಿ ಕೆಲಸ ಮಾಡುವ, ಕಡಿಮೆ ವೇತನ ಪಡೆಯುವ, ಮತದಾನದ ಹಕ್ಕಿಲ್ಲದ ಮಹಿಳೆಯರಿಗೆ ಯಾವ ಪರಿಹಾರವಿದೆ? ರಾಜಕೀಯವಾಗಿ ಅವರಿಗೆ ಯಾವುದೇ ಬೆಲೆ ಇಲ್ಲ.

ಇತ್ತೀಚೆಗೆ ಮಹಿಳಾ ಸಂಘಟನೆಯೊಂದು ನ್ಯೂಯಾರ್ಕ್ ಶಾಸಕಾಂಗದಿಂದ ಕಲ್ಯಾಣ ಕ್ರಮವೊಂದನ್ನು ಪಡೆಯಲು ಬಯಸಿತು. 5,000 ಮಹಿಳೆಯರು ಸಹಿ ಮಾಡಿದ ಅರ್ಜಿಯನ್ನು ಮಸೂದೆಯ ವರದಿ ನೀಡಬೇಕಾದ ಸಮಿತಿಯ ಅಧ್ಯಕ್ಷರ ಮುಂದೆ ಇಡಲಾಯಿತು. ಅದು ಒಳ್ಳೆಯ ಮಸೂದೆ ಮತ್ತು ಅಂಗೀಕಾರವಾಗಬೇಕು ಎಂದು ಅವರು ಹೇಳಿದರು. ಮಹಿಳೆಯರು ಸ್ವಲ್ಪ ಸಮಯ ಕಾಯ್ದ ನಂತರ, ಮಸೂದೆ ಏನಾಯಿತು ಎಂದು ತಿಳಿಯಬಯಸಿದರು..... ಈ ಬಗ್ಗೆ ಮರೆತೇ ಹೋದ ಅವರು ನಂತರ ಹೇಳಿದ್ದು: "5,000 ಮಹಿಳೆಯರು ಸಹಿ ಮಾಡಿದ ಅರ್ಜಿಯು ಅದು ಬರೆದ ಕಾಗದದಷ್ಟೂ ಬೆಲೆ ಬಾಳುವುದಿಲ್ಲ. ಐದು ಪುರುಷರಿಂದ ಸಹಿ ಮಾಡಿಸಿ ತನ್ನಿ, ನಾವು ಅದರ ಬಗ್ಗೆ ಏನಾದರೂ ಮಾಡುತ್ತೇವೆ." ನಾವು ಮತವನ್ನು ಒತ್ತಾಯಿಸಲು ಇದೂ ಒಂದು ಕಾರಣ: 5,000 ಮಹಿಳೆಯರ ಧ್ವನಿ ಐದು ಪುರುಷರಿಗಿಂತ ಹೆಚ್ಚು ಮೌಲಿಕವಾಗಿರಬೇಕೆಂದು ನಾವು ಬಯಸುತ್ತೇವೆ.

ಮತದಾನದ ಅಗತ್ಯವಿರುವ ಬಹುಪಾಲು ಮಹಿಳೆಯರು ವೇತನ ಪಡೆಯುವ ಕೆಲಸಗಾರರು. ಕೈ ಉಪಕರಣಗಳ ಬದಲಿಗೆ ಯಂತ್ರಗಳು ಬಂದಾಗಿನಿಂದ ಕೈಗಾರಿಕಾ ಜಗತ್ತಿನಲ್ಲಿ ಅಪಾರ ಬದಲಾವಣೆ ಉಂಟಾಗಿದೆ. ಪುರುಷರು ಮತ್ತು ಮಹಿಳೆಯರು ಉತ್ಪಾದನೆ ಮತ್ತು ವಿತರಣೆಯ ಈ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ಹಿಂದೆಂದೂ ಇಲ್ಲದ ರೀತಿಯಲ್ಲಿ, ಯಂತ್ರಗಳನ್ನು ಬಳಸಿ ಪುರುಷ ಮತ್ತು ಮಹಿಳೆಯರ ಶ್ರಮವನ್ನು ಶೋಷಿಸಲಾಗುತ್ತಿದೆ. ಈ ಬದಲಾವಣೆಯಿಂದ ಉಂಟಾದ ಭೀಕರ ಜೀವನ ಹೋರಾಟದ ಗತಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಪುರುಷರಿಗಿಂತ ಹೆಚ್ಚು ಶೋಷಣೆಗೆ ಗುರಿಯಾಗುತ್ತಾರೆ. ವಾಸ್ತವವಾಗಿ, ಈ ಆರ್ಥಿಕ ಒತ್ತಡವು ಅನೇಕ ಮಹಿಳೆಯರನ್ನು ವೇಶ್ಯಾವಾಟಿಕೆಗೆ ದೂಡುತ್ತದೆ.

ಆದರೂ ಮಹಿಳೆಯರು ತಾವು ಬದುಕುವ ಮತ್ತು ಶ್ರಮಿಸುವ ಪರಿಸ್ಥಿತಿಗಳ ಬಗ್ಗೆ ಏನು ಹೇಳಲೂ ಸಾಧ್ಯವಾಗುತ್ತಿಲ್ಲ. ಈ ಅಸಹಾಯಕ, ದಮನಿತ ಮಹಿಳೆಯರು ತಮನ್ನು ಶೋಚನೀಯವಾದ ಅಧೋಗತಿಗೆ ದೂಡುವ ಸಂಕಷ್ಟಗಳನ್ನು ಸಹಿಸಿಕೊಳ್ಳಬೇಕು. ತಮ್ಮನ್ನು ದೈಹಿಕವಾಗಿ, ಬೌದ್ಧಿಕವಾಗಿ ಕುಂಠಿತಗೊಳಿಸುವ ಮತ್ತು ಅಕಾಲಿಕ ಮರಣವನ್ನು ಅಥವಾ ಅಕಾಲಿಕ ಮುಪ್ಪನ್ನು ತರುವ ಕ್ರೂರ ಪ್ರಕ್ರಿಯೆಗಳ ವಿರುದ್ಧ ತಮ್ಮನ್ನು ರಕ್ಷಿಸಿಕೊಳ್ಳಲು ಅವರು ಧ್ವನಿ ಎತ್ತುವಂತಿಲ್ಲ.

ದುಡಿಯುವ ಮಹಿಳೆಯರ ಅಸಹಾಯಕತೆಯಿಂದ ದುಡಿಯುವ ಪುರುಷರೂ ನರಳುತ್ತಾರೆ. ಸೂಕ್ತ ಕಾನೂನುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಆಗದ ಮಹಿಳೆಯರೊಂದಿಗೆ ಒಂದೇ ಕಚೇರಿ ಮತ್ತು ಕಾರ್ಖಾನೆಗಳಲ್ಲಿ ಅವರು ಸ್ಪರ್ಧಿಸಬೇಕಾಗುತ್ತದೆ. ಮನೆಯೆಂಬ ಹೆಸರಿನ ಅಶುದ್ಧ ಕೊಠಡಿಗಳಲ್ಲಿ ಕೆಲಸ ಮಾಡುವ, ರಾತ್ರಿಯಲ್ಲಿ ಮಸುಕಾದ ದೀಪದ ಬೆಳಕಿನಲ್ಲಿ ಒಂದು ಕಾಲಿನಿಂದ ತೊಟ್ಟಿಲನ್ನು ತೂಗುತ್ತಾ ಕೆಲಸ ಮಾಡುವ ಮಹಿಳೆಯರೊಂದಿಗೆ ಅವರು ಸ್ಪರ್ಧಿಸಬೇಕಾಗುತ್ತದೆ. ಈ ಮೂರ್ಖತನದ, ಏಕಪಕ್ಷೀಯ ವ್ಯವಸ್ಥೆಯನ್ನು ಕೊನೆಗೊಳಿಸುವುದು ಮತ್ತು ಎಲ್ಲರಿಗೂ ಮತಾಧಿಕಾರ ನೀಡುವುದು ಎಲ್ಲಾ ಕಾರ್ಮಿಕರ ಹಿತದೃಷ್ಟಿಯಿಂದ ಒಳ್ಳೆಯದು.

.......ಮತದಾನದ ಹಕ್ಕಿರುವ ಪುರುಷರಿಗಿಂತ ಮಹಿಳೆಯರು ಸಾಮಾಜಿಕ ಶಾಸನಗಳು ಮತ್ತು ಶಾಲೆಗಳು, ಹಾಲು ಪೂರೈಕೆ ಮತ್ತು ಆಹಾರದ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಕಾನೂನುಗಳಿಗಾಗಿ ಕೆಲಸ ಮಾಡುವಲ್ಲಿ ಈಗಲೂ ಹೆಚ್ಚು ಸಕ್ರಿಯರಾಗಿದ್ದಾರೆ. ಮೂಲಭೂತವಾಗಿ, ಮಹಿಳೆ ಪುರುಷನಿಗಿಂತ ಹೆಚ್ಚು ಸಾಮಾಜಿಕ ಜೀವಿ. ಅವಳು ಇಡೀ ಕುಟುಂಬದ ಬಗ್ಗೆ ಕಾಳಜಿ ವಹಿಸುತ್ತಾಳೆ, ಆದರೆ ಪುರುಷನು ಹೆಚ್ಚು ವ್ಯಕ್ತಿವಾದಿ......ಮಹಿಳೆಯ ಸಾಮಾಜಿಕ ಅನುಭವದಿಂದ ಮಾತ್ರವೇ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು ಕೆಲಸದಲ್ಲಿ ಮಹಿಳೆಯರ ಸುರಕ್ಷತೆಯ ವಿಷಯ, ಸಣ್ಣ ಮಕ್ಕಳ ಹಕ್ಕುಗಳು ಇತ್ಯಾದಿ.

ಆದರೂ ಅವಳ ವಿಶಿಷ್ಟ ಜ್ಞಾನ ಮತ್ತು ಸಾಮರ್ಥ್ಯಗಳನ್ನೇ ಅವಳಿಗೆ ಮತ ನೀಡಬಾರದು ಎಂಬ ವಾದಗಳಿಗೆ ಆಧಾರವಾಗಿ ಬಳಸಲಾಗುತ್ತದೆ. ಮಹಿಳೆಯ ರಚನೆ ಮಾತೃತ್ವಕ್ಕಾಗಿ ಎಂಬುದು ನಿರ್ವಿವಾದವಾದ ಸತ್ಯ. ಹಾಗೆಯೇ ಪುರುಷನ ರಚನೆ ಪಿತೃತ್ವಕ್ಕಾಗಿ. ಆದರೆ ಅದು ಅವನನ್ನು ಪೌರತ್ವಕ್ಕೆ ಅನರ್ಹಗೊಳಿಸುತ್ತದೆ ಎಂದು ಯಾರೂ ಭಾವಿಸುವುದಿಲ್ಲ. ಪುರುಷ ಮತ್ತು ಮಹಿಳೆಯ ನಡುವೆ ಮೂಲಭೂತ ವ್ಯತ್ಯಾಸವಿದೆ ಎಂದರೆ, ಅದನ್ನು ನಿರಾಕರಿಸಲು ನಾನು ಹೋಗುವುದಿಲ್ಲ. ಆದರೆ ಅವಳ ಪರವಾದ ಧ್ವನಿಯನ್ನು ಕೇಳಲು ಇದು ಇನ್ನೂ ಹೆಚ್ಚಿನ ಸಕಾರಣವಾಗಿದೆ.

ಪುರುಷನ ಎದೆಗಾರಿಕೆಯ ಸ್ವಭಾವವು ಮನುಕುಲದ ದುರ್ಬಲ ಅರ್ಧಭಾಗವನ್ನು ವಿಮೋಚನೆಗೊಳಿಸಲು ಪ್ರೇರೇಪಿಸುತ್ತದೆ ಎಂದು ನಾನು ಭಾವಿಸುತ್ತೇನೆ. ವಾಸ್ತವವಾಗಿ, ಅವನು ತನಗಾಗಿ ಮತಾಧಿಕಾರವನ್ನು ಪಡೆಯುವಾಗ ತನ್ನ ಪ್ರಿಯ ಸಂಗಾತಿಯೊಂದಿಗೆ ಅದನ್ನು ಹಂಚಿಕೊಳ್ಳಲು ಏಕೆ ಯೋಚಿಸಲಿಲ್ಲ ಎಂಬುದೇ ವಿಸ್ಮಯಕಾರಿ. ಗಾಢವಾಗಿ ಗಮನಿಸಿದರೆ, ಮತಾಧಿಕಾರದ ಪ್ರಶ್ನೆಯಲ್ಲಿ ಅವಳೆಡೆಗಿನ ಅವನ ವರ್ತನೆಯಲ್ಲಿ ದಮನದ ಶಂಕೆ ನನಗಿದೆ. ಮತ್ತು ಈ ದಬ್ಬಾಳಿಕೆ ಎದೆಗಾರಿಕೆಯ ಮುಖವಾಡವನ್ನು ಧರಿಸಿರಬಹುದೇ? ದಯವಿಟ್ಟು ನನ್ನನ್ನು ತಪ್ಪಾಗಿ ಅರ್ಥೈಸಬೇಡಿ. ನಾನು ಎದೆಗಾರಿಕೆಯನ್ನು ಕೀಳಾಗಿ ಕಾಣುತ್ತಿಲ್ಲ. ಅದು ತುಂಬಾ ಒಳ್ಳೆಯ ವಿಷಯ ಎಷ್ಟಿದೆಯೋ ಅಷ್ಟು, ಸಮಸ್ಯೆಯೆಂದರೆ, ಅದು ಸಾಕಷ್ಟಿಲ್ಲ. ಮಹಿಳೆ ಪಡೆದಿರುವ ಬಹುತೇಕ ಎಲ್ಲಾ ಶೈಕ್ಷಣಿಕ ಮತ್ತು ರಾಜಕೀಯ ಅವಕಾಶಗಳನ್ನು, ಅವಳು ಪ್ರತಿ ಹಂತದಲ್ಲೂ ಹೋರಾಟ ಮಾಡುವ ಮೂಲಕವೇ ಪಡೆದಿದ್ದಾಳೆ.

ಆದ್ದರಿಂದ ಪುರುಷರ ಎದೆಗಾರಿಕೆಯಿಂದ ನಮಗೆ ಪ್ರಯೋಜನ ಇಲ್ಲದಿರುವುದರಿಂದ, ನಾವು ಸ್ವಲ್ಪ ತ್ವರೆ ಮಾಡಿ, ನಮಗಾಗಿ ಹಾಗೂ ನಮ್ಮ ಮತಾಧಿಕಾರದ ಅಗತ್ಯವಿರುವ ಪುರುಷರಿಗಾಗಿ ನಾವು ಏನು ಮಾಡಬಹುದು ಎಂದು ನೋಡಬೇಕು. ಎಲ್ಲಕ್ಕಿಂತ ಮೊದಲು, ನಾವು ಸಂಘಟಿತರಾಗಬೇಕು. ನಾವು ಯಾವ ಕಾನೂನುಗಳಡಿಯಲ್ಲಿ ಬದುಕಬೇಕಾಗಿದೆಯೋ, ಅವನ್ನು ನಿರ್ದೇಶಿಸುವಲ್ಲಿ ಮತ್ತು ರೂಪಿಸುವಲ್ಲಿ ನಮ್ಮ ನೈಸರ್ಗಿಕ ರಕ್ಷಕರು ಇನ್ನೆಷ್ಟು ಮಾತ್ರಕ್ಕೂ ನಮ್ಮ ಧ್ವನಿಯನ್ನು ನಿರಾಕರಿಸದಂತೆ ನಾವು ನಮ್ಮನ್ನು ಪ್ರಬಲ ರಾಜಕೀಯ ಶಕ್ತಿಯಾಗಿ ರೂಪಿಸಿಕೊಳ್ಳಬೇಕು.

ಪುರುಷರು ಮತ್ತು ಮಹಿಳೆಯರು ತಮ್ಮ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಒಟ್ಟಾಗಿ ಕೆಲಸ ಮಾಡುವವರೆಗೆ ನಾವು ಬಂಡವಾಳವಾದದ ಅಂತ್ಯ ಮತ್ತು ಪ್ರಜಾಪ್ರಭುತ್ವದ ವಿಜಯವನ್ನು ಕಾಣಲಾಗುವುದಿಲ್ಲ. ಎಲ್ಲರಿಗೂ ಸ್ವಾತಂತ್ರ್ಯ ಸಿಗಬೇಕೆಂಬ ನಮ್ಮ ಹೋರಾಟದಲ್ಲಿ ಮತದಾನದ ಹಕ್ಕು ಅನೇಕ ಆಯುಧಗಳಲ್ಲಿ ಒಂದು ಮಾತ್ರ ಎಂದು ನಾನು ಅರಿತುಕೊಂಡಿದ್ದೇನೆ. ಆದರೆ ಪ್ರತಿಯೊಂದು ಸಾಧನವೂ ಅಮೂಲ್ಯವಾಗಿದೆ ಮತ್ತು ಮತದಾನದ ಹಕ್ಕನ್ನು ಹೊಂದಿರುವ ಪುರುಷರು ಮತ್ತು ಮಹಿಳೆಯರು ಒಟ್ಟಾಗಿ ಭೂಮಿಯ ಮೇಲೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಶತಮಾನಗಳ ಕಾಲದ ಕನಸನ್ನು ಸಾಕಾರಗೊಳಿಸುತ್ತಾರೆ. ■

# ವಿಬಿ ಜಿ ರಾಮ್ ಜಿ ಕಾಯ್ದೆ – ಗ್ರಾಮೀಣ ಜನರಿಗೆ ಉದ್ಯೋಗ ಖಾತರಿ ಖೋತಾ

ನಾಲ್ಕು ಕರಾಳ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಸಿ ನಗರ ಉದ್ಯೋಗಸ್ಥರ ಬದುಕಿನಲ್ಲಿ ಉದ್ಯೋಗ ಅಭದ್ರತೆಯನ್ನು ಸೃಷ್ಟಿಸುತ್ತಿರುವ, ರಕ್ತಹರಿಸಿ ಗಳಿಸಿದ ಕಾರ್ಮಿಕ ಸಂಘದ ಹಕ್ಕುಗಳ ಹರಣವನ್ನು ನಡೆಸುತ್ತಿರುವ ಕೇಂದ್ರ ಬಿಜೆಪಿ ಸರ್ಕಾರವು ಈಗ ಈಗಾಗಲೇ ಉದ್ಯೋಗದ ಅವಕಾಶಗಳಿಲ್ಲದೆ ತತ್ತರಿಸುತ್ತಿರುವ ಗ್ರಾಮೀಣ ಬಡಜನರ, ಮುಖ್ಯವಾಗಿ ಕೃಷಿ ಕಾರ್ಮಿಕರ ಕನಿಷ್ಠ ಉದ್ಯೋಗ ಖಾತರಿಗೂ ಕತ್ತರಿ ಹಾಕುವ 'ವಿಕಸಿತ್ ಭಾರತ್ ಉದ್ಯೋಗ ಖಾತ್ರಿ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ್) ಕಾಯ್ದೆ–2025' (ವಿಬಿ ಜಿ ರಾಮ್ ಜಿ ಕಾಯ್ದೆ) ಕಾಯ್ದೆಯನ್ನು ಜನಗಳ ವಿರೋಧದ ನಡುವೆಯೂ ಜಾರಿಗೊಳಿಸಿದೆ. ನರೆಗಾದಲ್ಲಿ ಇದ್ದ ನೂರು ದಿನಗಳ ಉದ್ಯೋಗದ ಜಾಗದಲ್ಲಿ 125 ದಿನಗಳ ಉದ್ಯೋಗದ ಮರೀಚಿಕೆ ತೋರಿಸುತ್ತಿದೆ. ಇದುವರೆಗೂ ಪಂಚಾಯಿತಿ, ರಾಜ್ಯ ಸರ್ಕಾರಗಳಿಗಿದ್ದ ಹಿಡಿತವನ್ನು ನಯವಾಗಿ ಕೇಂದ್ರ ಸರ್ಕಾರ ತೆಗೆದುಕೊಳ್ಳುತ್ತಿದೆ.

ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಕಾರ್ಮಿಕರ ಶ್ರಮದಿಂದ ಸೃಷ್ಟಿಯಾದ ಸಂಪತ್ತು ಮಾಲೀಕನ ಖಜಾನೆ ಸೇರುತ್ತದೆ. ದುಡಿತಕ್ಕೆ ಪ್ರತಿಫಲ ಸಿಗದ ಜನರು ಕೊಂಡುಕೊಳ್ಳುವ ಶಕ್ತಿಯನ್ನು ಕಳೆದುಕೊಳ್ಳುವುದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿಯುತ್ತದೆ. ಇದರ ಪರಿಣಾಮವಾಗಿ ಉತ್ಪಾದನೆ ಕುಸಿದು ಆರ್ಥಿಕ ಬಿಕ್ಕಟ್ಟು ಉಂಟಾಗುತ್ತದೆ. ಈ ಆರ್ಥಿಕ ನಿಯಮದಿಂದಾಗಿ ನಿರುದ್ಯೋಗ ಉಲ್ಬಣಗೊಳ್ಳುತ್ತಾ ಹೋಗುತ್ತದೆ. ಅದರಲ್ಲೂ ಗ್ರಾಮೀಣ ಜನತೆ ಹೆಚ್ಚು ಸಂಕಷ್ಟಕ್ಕೆ ಸಿಲುಕುತ್ತಾರೆ. ಇದರಿಂದಾಗಿ ನಿರುದ್ಯೋಗಿಗಳಲ್ಲಿ ತೀವ್ರ ಅಸಮಾಧಾನ, ಆಕ್ರೋಶ ಮಡುಗಟ್ಟಿದೆ. ಬಂಡವಾಳಿಗರ ನೆಚ್ಚಿನ ಭಂಟನಾದ ಕಾಂಗ್ರೆಸ್ ಪಕ್ಷವು ನಿರುದ್ಯೋಗದ ಒತ್ತಡವನ್ನು ಇಳಿಸಲು, ಆಕ್ರೋಶವನ್ನು ತಾತ್ಕಾಲಿಕವಾಗಿ ಹಾಗೂ ಅಲ್ಪಮಟ್ಟದಲ್ಲಾದರೂ ಶಮನಗೊಳಿಸಲು ನರೆಗಾ ಯೋಜನೆಯನ್ನು ಜಾರಿಗೆ ತಂದಿತು.

**ಈಗ ಉದ್ಯೋಗ ಹಕ್ಕಲ್ಲ, ಸರ್ಕಾರದ ದಾನ**

ನರೆಗಾ ಮೂಲಭೂತವಾಗಿ ಗ್ರಾಮೀಣ ಜನರ ಬೇಡಿಕೆ ಆಧಾರಿತ ಯೋಜನೆ. ಗ್ರಾಮೀಣ ಪ್ರದೇಶದ ಯಾವುದೇ ಕುಟುಂಬ ಉದ್ಯೋಗ ಕೇಳಿದರೆ, ಅದನ್ನು ಒದಗಿಸುವುದು ಸರ್ಕಾರದ ಕಾನೂನುಬದ್ಧ ಕರ್ತವ್ಯವಾಗಿತ್ತು. ದುಡಿಯುವವರ ಬೇಡಿಕೆಗೆ ಅನುಗುಣವಾಗಿ ಹಣಕಾಸು ಒದಗಿಸಲಾಗುತ್ತಿತ್ತು. ನರೆಗಾ ಜನ ಕಲ್ಯಾಣವನ್ನು ದಾನದಿಂದ ಹಕ್ಕಾಗಿ ಪರಿವರ್ತನೆ ಮಾಡಿತ್ತು.

ಜಿ ರಾಮ್ ಜಿ ಕಾಯ್ದೆ ಇದನ್ನು ತಿರುವು ಮುರುವು ಮಾಡಿತು. ಕೇಂದ್ರ ಸರ್ಕಾರವು ರಾಜ್ಯಗಳಿಗೆ ನಿಗದಿತ ಮೊತ್ತದ ಹಣಕಾಸು ಹಂಚಿಕೆ ಮಾಡುತ್ತದೆ; ಅದರ ಪ್ರಮಾಣ ಎಷ್ಟು ಜನರ ಬೇಡಿಕೆಯಿದೆ ಎನ್ನುವುದರ ಬದಲು ಎಷ್ಟು ಕೆಲಸ ಮಾಡಿಸಬೇಕು ಎನ್ನುವುದರ ಮೇಲೆ ಆಧಾರವಾಗಿರುತ್ತದೆ. ಈ ಮಿತಿಯನ್ನು ದಾಟಿದರೆ ಅದರ ಹಣಕಾಸಿನ ಜವಾಬ್ದಾರಿ ರಾಜ್ಯ ಸರ್ಕಾರದ್ದಾಗುತ್ತದೆ. ಒಟ್ಟಾರೆ ಅರ್ಥದಲ್ಲಿ, ಉದ್ಯೋಗದ ಹಕ್ಕನ್ನು ಬಜೆಟ್‌ನ ಮರ್ಜಿಗೆ ಪರಿವರ್ತನೆ ಮಾಡಲಾಗಿದೆ.

ಈ ಕಾಯ್ದೆಯು, ಉದ್ಯೋಗ ಖಾತರಿ ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 60:40 ಅನುಪಾತದಲ್ಲಿ ಹಣಕಾಸು ಒದಗಿಸುವ ಕೇಂದ್ರ ಸರ್ಕಾರದ ಯೋಜನೆಯನ್ನಾಗಿ ಪರಿವರ್ತಿಸಿದೆ. ಇದರ ಜೊತೆಗೆ ಸರಿಯಾದ ಸಮಯಕ್ಕೆ ಉದ್ಯೋಗ ನೀಡದಿದ್ದರೆ ನಿರುದ್ಯೋಗ ಭತ್ಯೆಯನ್ನು ನೀಡುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರದ ಮೇಲೆ ಹೊರಿಸಿದೆ. ನಿರುದ್ಯೋಗವನ್ನು ಉದ್ಯೋಗ ಖಾತರಿಯಿಂದ ಬಗೆಹರಿಸುವುದಿಲ್ಲ. ಬಡಜನರು ಹಕ್ಕು ಹೊಂದಿದ ನಾಗರಿಕರಾಗುವ ಬದಲು ಸರದಿಗಾಗಿ ಕಾಯುವ ಜನರಾಗುತ್ತಾರೆ.

**ವಿಕಸಿತ ಭಾರತಕ್ಕೆ ಹಿಂದುತ್ವದ ಲೇಪ**

ಜನರನ್ನು ಗೊಂದಲದಲ್ಲಿಡಲು ಮತ್ತು ಧಾರ್ಮಿಕ ಭಾವನೆಗಳನ್ನು ದುರುಪಯೋಗಪಡಿಸಿಕೊಳ್ಳಲು ಹಾಗೂ ಎಲ್ಲದ್ದಕ್ಕಿಂತಲೂ ಹೆಚ್ಚಾಗಿ ಜನರ ಗಮನವನ್ನು ಅನಗತ್ಯ ಧಾರ್ಮಿಕ ವಿವಾದಗಳೆಡೆಗೆ ಸೆಳೆಯಲು ಕಾಯ್ದೆಯ ಹೆಸರಿನಲ್ಲಿ 'ರಾಮ್ ಜಿ' ಬರುವಂತೆ ಹೆಸರನ್ನು ಬದಲಿಸಲಾಗಿದೆ. ಅದಕ್ಕಾಗಿ, ಬೇರೆ ಕಾಯ್ದೆಗಳಲ್ಲಿ ಮಾಡುವಂತೆ ಕೇವಲ ತಿದ್ದುಪಡಿಗಳನ್ನು ತರದೆ, ಮಹಾತ್ಮ ಗಾಂಧಿ ಹೆಸರನ್ನು ತೆಗೆದು ಹಾಕಿ ಹೊಸ ಹೆಸರನ್ನು ನೀಡಲಾಗಿದೆ. ಕಲ್ಯಾಣ ಯೋಜನೆಯಲ್ಲಿ ಕಲ್ಯಾಣ ಕೈಬಿಡುವ ಕಾಯ್ದೆಗೆ ಹಿಂದುತ್ವದ ಲೇಪವನ್ನು ಹಚ್ಚಲಾಗಿದೆ.

ಆದರೆ ವಾಸ್ತವದಲ್ಲಿ ಇದು ಕಾರ್ಪೊರೆಟ್ ಕಂಪೆನಿಗಳ ಕಲ್ಯಾಣ. ಏಕೆಂದರೆ ಈ ಕಾಯ್ದೆಯಲ್ಲಿ ವಿಕಸಿತ ಭಾರತದ ಹೆಸರು ತಂದಿರುವುದಕ್ಕೆ ಕಾರಣವೆಂದರೆ, ವಿಕಸಿತ ಭಾರತವು ಕಾರ್ಪೊರೆಟ್ ಕಂಪೆನಿಗಳಿಗೆ ನಿರಂತರ ಯಥೇಚ್ಛ ಲಾಭ ಹರಿಯುವುದನ್ನು ಖಚಿತಪಡಿಸಲು ಅವರಿಗೆ ಬೇಕಾದ ಸೌಕರ್ಯಗಳ ವ್ಯವಸ್ಥೆಯನ್ನು ಮಾಡುವುದು; ಅದರಂತೆ ಜಿ ರಾಮ್ ಜಿ ಕಾಯ್ದೆಯನ್ನು ವಿಕಸಿತ ಭಾರತದ ಕನಸಿಗೆ ಪೂರಕವಾಗಿ ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯವನ್ನು ರೂಪಿಸುವುದಕ್ಕೆ ತರಲಾಗಿದೆ. ಇದರಿಂದ ಗ್ರಾಮೀಣ ಪ್ರದೇಶದ ಜನರ ಅಗತ್ಯಗಳಿಗೆ, ಅಲ್ಲಿನ ಅಭಿವೃದ್ಧಿಗೆ ತಕ್ಕಂತೆ ಕಾರ್ಯ ಯೋಜನೆಯನ್ನು ರೂಪಿಸುವುದಿಲ್ಲ. ನರೆಗಾದಡಿಯಲ್ಲಿ ಕೃಷಿ ಕೆಲಸಗಳು, ಶೌಚಾಲಯ, ಮಳೆ ನೀರು ಸಂಗ್ರಹಣೆ, ಕೃಷಿಗೆ ಪೂರಕವಾದ ಸೌಕರ್ಯಗಳು ಸೇರಿದ್ದವು; ಈಗ ಅದಕ್ಕೆ ಎಳ್ಳುನೀರು ಬಿಟ್ಟು ಕಾರ್ಪೊರೆಟ್ ಕಂಪೆನಿಗಳ ಅವಶ್ಯಕತೆಗೆ ತಕ್ಕಂತೆ ಗ್ರಾಮೀಣ ಪ್ರದೇಶದ ಅಭಿವೃದ್ಧಿಯಾಗುತ್ತದೆ.

ಜೊತೆಗೆ ಕೃಷಿ ಕೆಲಸಗಳು ಉತ್ತುಂಗದಲ್ಲಿರುವಾಗ ಉದ್ಯೋಗ ನಿರಾಕರಣೆಯು ಕೃಷಿ ಕಾರ್ಮಿಕರಿಗೆ ಪೂರಕವಲ್ಲ, ಮಾರಕ. ಏಕೆಂದರೆ ಈ ಕೆಲಸಗಳು ಯೋಜನೆಯಡಿ ಬರುವುದಿಲ್ಲ. ಒಂದು ಕಡೆ ಉದ್ಯೋಗದ ಸೃಷ್ಟಿಯಿಲ್ಲ. ಇನ್ನೊಂದು ಕಡೆ, ಯಂತ್ರ ಬಳಕೆಯಿಂದಾಗಿ ಕೊಯ್ಲಿನ ಸಂದರ್ಭದಲ್ಲಿ ಕೃಷಿ ಕಾರ್ಮಿಕರಿಗೆ ಸರಿಯಾಗಿ ಕೃಷಿ ಕೆಲಸವೂ ದೊರಕುವುದಿಲ್ಲ. ಇಲ್ಲವಾದರೆ ಕಡಿಮೆ ಕೂಲಿಗೆ ಕೆಲಸಕ್ಕೆ ಹೋಗಬೇಕು. ಇದರಿಂದ ದೊಡ್ಡ ಭೂಮಾಲೀಕರಿಗೆ, ಶ್ರೀಮಂತ ರೈತರಿಗೆ ಅನುಕೂಲ.

**ಹಕ್ಕೊತ್ತಾಯದಿಂದ ಬಜೆಟ್ ಹಂಚಿಕೆಯ ಕಡೆಗೆ**

ನರೆಗಾದಡಿಯಲ್ಲಿ ನಿರುದ್ಯೋಗವನ್ನು ನಿವಾರಿಸುವ ಜವಾಬ್ದಾರಿ, ಕಡೇ ಪಕ್ಷ ತಾತ್ವಿಕವಾಗಿಯಾದರೂ, ಕೇಂದ್ರ ಸರ್ಕಾರದ್ದಾಗಿತ್ತು. ಬಜೆಟ್ ಹಂಚಿಕೆ ಕಡಿಮೆಯಾದರೂ, ಹಣ ಬರುವುದು ನಿಧಾನವಾದರೂ ಜನರಿಗೆ ಕಾನೂನಿನ ಹಕ್ಕಿತ್ತು. ಜಿ ರಾಮ್ ಜಿ ಕಾಯ್ದೆಯು ಕಾನೂನು ಬದ್ಧತೆಯನ್ನೇ ತೆಗೆದು ಹಾಕಿದೆ. ಇದು ಕೇಂದ್ರ ಸರ್ಕಾರಕ್ಕೆ ಯಾವುದೇ ಕಾನೂನಿನ ಅಥವಾ ಬೆಲೆ ಏರಿಕೆಯ ಮಾನದಂಡವಿಲ್ಲದೆ ವೇತನ ನಿಗದಿಪಡಿಸಲು ಅನಿರ್ಬಂಧಿತ ಅಧಿಕಾರ ನೀಡಿದೆ. ವೇತನ ಪರಿಷ್ಕರಣೆಯ ಗ್ಯಾರಂಟಿಯಿಲ್ಲ. ಹಣದುಬ್ಬರದ ಪರಿಣಾಮಗಳಿಂದ ರಕ್ಷಣೆಯಿಲ್ಲ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಣ ನೀಡಿಕೆಯ 60:40 ಅನುಪಾತವು ಯೋಜನೆಯ ಜಾರಿಗೆ ದೊಡ್ಡ ಕಂಟಕವಾಗುತ್ತಿದೆ. ಈಗಾಗಲೇ ಜಿಎಸ್‌ಟಿ ಕೇಂದ್ರೀಕೃತವಾಗಿರುವುದರಿಂದ, ಕೇಂದ್ರದಿಂದ ಹಣ ವಾಪಸ್ ಬರುವುದರಲ್ಲಿ ವ್ಯತ್ಯಯವಾಗುತ್ತಿದೆ. ಒಂದು ಕಡೆ, ರಾಜ್ಯ ಸರ್ಕಾರದ ಪಾಲು ಕಡಿಮೆಯಾದರೆ, ಇನ್ನೊಂದು ಕಡೆ ಹಣ ವಾಪಸ್ ಬರುವುದು ತೀರಾ ನಿಧಾನವಾಗುತ್ತದೆ. ಆದ್ದರಿಂದ, ರಾಜ್ಯ ಸರ್ಕಾರ ಈಗಾಗಲೇ ಕಲ್ಯಾಣ ಯೋಜನೆಗಳನ್ನು ಕೈಬಿಡುತ್ತಿದೆ. ಇಂತಹ ಸಮಯದಲ್ಲಿ, ಹೊಸದಾಗಿ ಜಿ ರಾಮ್ ಜಿ ಕಾಯ್ದೆಯು ಹೊರಿಸುವ ಹೊರೆಯನ್ನು ರಾಜ್ಯ ಸರ್ಕಾರ ಭರಿಸುವುದಿಲ್ಲ. ಉದ್ಯೋಗ ಖಾತರಿ ಮರೀಚಿಕೆಯಾಗುತ್ತದೆ. ಇಬ್ಬರಿಬ್ಬರ ಜಗಳದಲ್ಲಿ ಗ್ರಾಮೀಣ ಬಡಜನರು ಬಡವರಾಗುತ್ತಾರೆ.

**125 ದಿನಗಳ ಉದ್ಯೋಗ ಖಾತರಿಯ ಮರೀಚಿಕೆ**

ಜಿ ರಾಮ್ ಜಿ ಕಾಯ್ದೆಯನ್ನು ತರುವಾಗ, ಬಿಜೆಪಿ ಸರ್ಕಾರ ವರ್ಷಕ್ಕೆ 125 ದಿನಗಳ ಉದ್ಯೋಗದ ಭರವಸೆಯನ್ನು ಭಾರಿ ಶಬ್ದದೊಂದಿಗೆ ಪ್ರಚಾರ ಮಾಡಿತು. ಆದರೆ ಬಿಜೆಪಿ ಭರವಸೆ ವಾಸ್ತವವಾಗುತ್ತದಯೇ ಅಥವಾ ಅದರ ಹಿಂದಿನ ಭರವಸೆಗಳಂತೆ ಇದೂ ಕೂಡ ಕೇವಲ ಮರೀಚಿಕೆಯಾಗುತ್ತದೆಯೇ ಎನ್ನುವುದು ಮುಖ್ಯ ಪ್ರಶ್ನೆ. ಒಂದು ವರ್ಷದ ಚೌಕಟ್ಟಿನಲ್ಲಿ, ನರೆಗಾ ಯೋಜನೆಯಡಿಯಲ್ಲಿಯೇ ಅದು ಅಪರೂಪವಾಗಿ 50 ದಿನಗಳನ್ನು ದಾಟಿದೆ. ಬಜೆಟ್ ಕೊರತೆ, ರಾಜ್ಯ ಸರ್ಕಾರಕ್ಕೆ ಹಣಕಾಸಿನ ಹೊರೆ, ಕೃಷಿ ಕಾಲದಲ್ಲಿ ಉದ್ಯೋಗ ನಿರಾಕರಣೆ, ಕೇಂದ್ರದ ನಿಯಂತ್ರಣ, ಹಕ್ಕಾಗದ ಉದ್ಯೋಗ ಖಾತರಿ – ಇವುಗಳ ಹಿನ್ನೆಲೆಯಲ್ಲಿ ಉದ್ಯೋಗದ ದಿನಗಳು 125 ಕ್ಕೆ ಏರುವುದಿರಲಿ ಹಿಂದಿಗಿಂತಲೂ ಮತ್ತಷ್ಟು ಇಳಿಕೆಯಾಗುವುದು ಖಂಡಿತ. ಸಂಖ್ಯೆಗಳು ನಿಜವಾದ ಉದ್ದೇಶವನ್ನು ಮುಚ್ಚುವ ಮುಸುಕು.

ಜಿ ರಾಮ್ ಜಿ ಕಾಯ್ದೆಯ ಹಿಂದಿರುವ ನಿಜವಾದ ಉದ್ದೇಶವೆಂದರೆ, ಯೋಜನೆ ಮತ್ತು ಹಣಕಾಸಿನ ವಿಷಯಗಳ ಮತ್ತಷ್ಟು ಕೇಂದ್ರೀಕರಣ. ಇದು ರಾಜ್ಯ ಸರ್ಕಾರಗಳ ಪಾತ್ರವನ್ನು ತಗ್ಗಿಸುತ್ತಾ ತನ್ನ ಬಿಗಿಹಿಡಿತವನ್ನು ಸಾಧಿಸುತ್ತದೆ. ನಮ್ಮ ದೇಶದಲ್ಲಿ ಆರ್ಥಿಕತೆಯ ಕೇಂದ್ರೀಕರಣ ತೀವ್ರವಾಗುತ್ತದೆ. ಬೆರಳೆಣಿಕೆಯಷ್ಟು ಜನರಲ್ಲಿ ಸಂಪತ್ತು ಕ್ರೋಢೀಕರಣವಾಗಿದೆ. ಪ್ರಾದೇಶಿಕ ಬಂಡವಾಳಿಗರು ಕ್ಷೀಣಿಸುತ್ತಿದ್ದಾರೆ. ಏಕಸ್ವಾಮ್ಯ ಬಂಡವಾಳಿಗರು ವೇಗವಾಗಿ ಬೆಳೆಯುತ್ತಿದ್ದಾರೆ ಇವರ ಹಿತಾಸಕ್ತಿಯನ್ನು ಕಾಪಾಡಬೇಕೆಂದರೆ ಆರ್ಥಿಕತೆಯ ಜೊತೆಗೆ ಅಧಿಕಾರವೂ ಕೇಂದ್ರೀಕೃತವಾಗಬೇಕು. ಇದು ಫ್ಯಾಸೀವಾದದ ಲಕ್ಷಣಗಳು. ಫ್ಯಾಸೀವಾದಿ ಆಡಳಿತ ನಡೆಸದೆ ಇಂದಿನ ಸರ್ಕಾರಗಳಿಗೆ ಬಂಡವಾಳಿಗರ ಹಿತಾಸಕ್ತಿಯನ್ನು ಕಾಪಾಡಲು ಸಾಧ್ಯವಿಲ್ಲ.

ಆದ್ದರಿಂದಲೇ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಸಂಸ್ಥಾಪಕರು ಮತ್ತು ಅಸಾಮಾನ್ಯ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರು ಬಹಳ ಹಿಂದೆಯೇ ಫ್ಯಾಸೀವಾದವು ಮುಂದುವರೆದ ಅಥವಾ ಹಿಂದುಳಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿದೆ ಎಂದು ತೋರಿಸಿದರು. ಅವರು ಹೇಳಿದರು: "ಚಾರಿತ್ರಿಕ ಪರಿಸ್ಥಿತಿಗಳು ಫ್ಯಾಸೀವಾದಕ್ಕೆ ಕೆಲವು ಸಾಮಾನ್ಯ ಗುಣಲಕ್ಷಣಗಳನ್ನು ಕೊಡುತ್ತವೆ; ಅವುಗಳು ಫ್ಯಾಸೀವಾದದ ವಿಶಿಷ್ಟ ಗುಣಲಕ್ಷಣಗಳು. ಅವುಗಳು ಮುಖ್ಯವಾಗಿ, ಆರ್ಥಿಕತೆಯ ಕೇಂದ್ರೀಕರಣ, ಪ್ರಭುತ್ವಕ್ಕೆ ಅತ್ಯಧಿಕ ರಾಜಕೀಯ ಅಧಿಕಾರದ ಕೇಂದ್ರೀಕರಣ, ಅತ್ಯಂತ ಬಿಗಿ ಆಡಳಿತ – ಇದೆಲ್ಲವೂ ಪ್ರಭುತ್ವದ ಹಿತಾಸಕ್ತಿಯು ಹೆಚ್ಚು ಏಕಸ್ವಾಮ್ಯಾಧಿಪತಿಗಳ ಹಿತಾಸಕ್ತಿಗೆ ಮತ್ತು ಸಾಂಸ್ಕೃತಿಕ ಅಂಧ–ಚಿಂತನಾಕ್ರಮಕ್ಕೆ ದಾರಿ ಮಾಡಿಕೊಡುತ್ತವೆ." (ಸಂಗ್ರಹ ಕೃತಿಗಳು, ಸಂಪುಟ–2)

ಹೀಗೆ, ಆರ್ಥಿಕ ಹಾಗೂ ರಾಜಕೀಯ ಅಧಿಕಾರಗಳ ಕೇಂದ್ರೀಕರಣದ ಮೂಲಕ ಫ್ಯಾಸಿಸ್ಟ್ ನಿರಂಕುಶಾಡಳಿತವು ದೇಶದ ಮೇಲೆ ತನ್ನ ಬಿಗಿಹಿಡಿತವನ್ನು ಸಾಧಿಸುತ್ತದೆ. ಅದಕ್ಕೆ ಪೂರಕವಾಗಿ ಬಿಜೆಪಿ ಸರ್ಕಾರ ಕೆಲಸ ಮಾಡುತ್ತಿದೆ. ಇದೇ ದುರುದ್ದೇಶದಿಂದ ಬಿಜೆಪಿ ಸರ್ಕಾರವು ಜಿ ರಾಮ್ ಜಿ ಕಾಯ್ದೆಯೂ ಸೇರಿದಂತೆ ಹಲವಾರು ರೈತ ಹಾಗೂ ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿಗೆ ತರುತ್ತಿದೆ.

## ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಕೊರತೆಯನ್ನು ತಕ್ಷಣವೇ ಪರಿಹರಿಸಿ

**ಎಸ್‌ಯುಸಿಐ(ಸಿ)ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾ. ಕೆ. ಉಮಾ ಅವರು ಮಾಧ್ಯಮಗಳಿಗೆ ನೀಡಿದ ಹೇಳಿಕೆ:**

ಆರೋಗ್ಯ ಇಲಾಖೆಯ ಅಡಿಯಲ್ಲಿ ಬರುವ ರಾಜ್ಯದ ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವನಾವಶ್ಯಕ ಔಷಧಿಗಳ ತೀವ್ರ ಕೊರತೆ ಉಂಟಾಗಿರುವ ಬಗ್ಗೆ ಎಸ್‌ಯುಸಿಐ (ಸಿ) ರಾಜ್ಯ ಸಮಿತಿಯು ತೀವ್ರ ಆತಂಕ ವ್ಯಕ್ತಪಡಿಸುತ್ತದೆ.

ಜ್ವರ, ನೆಗಡಿ, ಕೆಮ್ಮು, ಬೇಧಿ, ಬಿಪಿಯಂತಹ ಸಾಮಾನ್ಯ ಕಾಯಿಲೆಗಳಿಗೂ ಸರ್ಕಾರಿ ವೈದ್ಯರು ಔಷಧಿಗಳನ್ನು ಹೊರಗೆ ಖರೀದಿಸಲು ಚೀಟಿ ಬರೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕಾರಣಕ್ಕೆ ಶಸ್ತ್ರ ಚಿಕಿತ್ಸೆಗಳನ್ನು ಕೂಡ ಮುಂದೂಡಿದ ಕುರಿತು ಪತ್ರಿಕೆಗಳಲ್ಲಿ ವರದಿಯಾಗಿದೆ.

ಸರ್ಕಾರಿ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ಬರುವವರು ಬಹುತೇಕ ಬಡವರು, ಕೂಲಿ ಕಾರ್ಮಿಕರೇ ಆಗಿದ್ದಾರೆ. ಅವರಿಗೆ ಕನಿಷ್ಠ ಚಿಕಿತ್ಸೆಯನ್ನು ಕೂಡ ಉಚಿತವಾಗಿ ಒದಗಿಸಲು ಸಾಧ್ಯವಾಗದ ದಾರಿದ್ರ್ಯ ಈ ಸರ್ಕಾರಕ್ಕೆ ಬಂದಿರುವುದು ನಾಚಿಕೆಗೇಡಿನ ಸಂಗತಿ.

ಇತ್ತೀಚಿನವರೆಗೆ ಆರೋಗ್ಯ ಇಲಾಖೆಯೇ ಔಷಧಿಗಳನ್ನು ಉತ್ಪಾದಿಸಿ ಅಗತ್ಯಕ್ಕೆ ತಕ್ಕಂತೆ ಜಿಲ್ಲೆಗಳಿಗೆ ವಿತರಣೆ ಮಾಡುತ್ತಿತ್ತು. ಆದರೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ (ಎಬಿ– ಎಆರ್‌ಕೆ) ಯೋಜನೆ ಜಾರಿಯಾದ ನಂತರ, ಈ ಅನುದಾನದಲ್ಲಿ ಆಯಾ ಆಸ್ಪತ್ರೆಯ ಮಟ್ಟದಲ್ಲೇ ಔಷಧಿಗಳನ್ನು ಖರೀದಿಸುವಂತೆ ಬದಲಾವಣೆ ಮಾಡಿರುವುದೇ ಸಮಸ್ಯೆಗೆ ಕಾರಣ ಎಂದು ಹೇಳಲಾಗುತ್ತಿದೆ. ಆಯುಷ್ಮಾನ್ ಭಾರತ್ ಯೋಜನೆಯೇ ಜನರಿಂದ ಆರೋಗ್ಯದ ಹಕ್ಕನ್ನು ಕಸಿಯುವ ಹುನ್ನಾರವಾಗಿದೆ. ಕೇಂದ್ರದ ಬಿಜೆಪಿ ಮತ್ತು ರಾಜ್ಯದ ಕಾಂಗ್ರೆಸ್ ಸರ್ಕಾರಗಳು ಜಂಟಿಯಾಗಿ ಜನರ ಮೇಲೆ ಸವಾರಿ ಮಾಡುತ್ತಿವೆ.

ಖಾಸಗೀಕರಣದ ಭರಾಟೆಯಲ್ಲಿ, ಬಡರೋಗಿಗಳನ್ನು ಕೂಡ ಖಾಸಗಿ ಆಸ್ಪತ್ರೆಗಳಿಗೆ ತಳ್ಳುವ ಇಂತಹ ಯೋಜನೆಯ ಬಗ್ಗೆ ಜನರಲ್ಲಿ ತೀವ್ರ ಆಕ್ರೋಶವಿದೆ ಎಂಬುದನ್ನು ಸರ್ಕಾರಗಳು ಗುರುತಿಸಬೇಕು. ಆರೋಗ್ಯ ಇಲಾಖೆ ತಕ್ಷಣದ ಕ್ರಮವಾಗಿ ರೂ. 30 ಕೋಟಿ ಬಿಡುಗಡೆ ಮಾಡಿದೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆಯಾದರೂ ಇದು ಶಾಶ್ವತ ಪರಿಹಾರವಲ್ಲ.

ಒಂದು ಪ್ರಜಾಪ್ರಭುತ್ವ ಸರ್ಕಾರ ತನ್ನ ಪ್ರಜೆಗಳಿಗೆ ಕನಿಷ್ಠ ಆರೋಗ್ಯ ಸೌಲಭ್ಯವನ್ನು ಕಲ್ಪಿಸಬೇಕಾಗಿರುವುದು ಅದರ ಆದ್ಯ ಕರ್ತವ್ಯ ಎಂದು ನೆನಪಿಸುತ್ತಾ,

1) ತಕ್ಷಣವೇ ಸರ್ಕಾರಿ ಆಸ್ಪತ್ರೆಗಳಲ್ಲಿ ಕೊರತೆ ಇರುವ ಔಷಧಿಗಳನ್ನು ಪೂರೈಕೆ ಮಾಡಬೇಕು.
2) ಮತ್ತೆ ಈ ಸಮಸ್ಯೆ ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು.
3) ಹಿಂದಿನಂತೆ ಸರ್ಕಾರವೇ ಅವಶ್ಯಕ ಔಷಧಿಗಳನ್ನು ಉತ್ಪಾದಿಸಿ ವಿತರಿಸಬೇಕು,
4) ಎಬಿ–ಎಆರ್‌ಕೆ ಅನುದಾನದ ಜೊತೆಗೆ ಔಷಧಿ ಖರೀದಿಯನ್ನು ಲಿಂಕ್ ಮಾಡುವುದನ್ನು ನಿಲ್ಲಿಸಬೇಕು ಎಂದು ಎಸ್‌ಯುಸಿಐ(ಸಿ) ಒತ್ತಾಯಿಸುತ್ತದೆ.

# ಬೀಜ ಮಸೂದೆ 2025 – ಕೃಷಿಕರ ಗಾಯದ ಮೇಲೊಂದು ಬರೆ!

ರೈತರ ಬವಣೆಗಳಿಗೆ ಕೊನೆಯೇ ಇಲ್ಲ! ದಿನನಿತ್ಯ ಅವೇ ಸುದ್ದಿಗಳು ಪುನರಾವರ್ತಿಸುತ್ತಿರುತ್ತವೆ: 'ಬೆಳೆದ ಬೆಳೆಗೆ ಸೂಕ್ತ ಬೆಲೆ ಇಲ್ಲ', 'ಮೆಣಸಿನ ಕಾಯಿ, ಟೊಮೆಟೊ ರಸ್ತೆಗೆ ಚೆಲ್ಲಿದ ರೈತರು', ' 'ಅತಿವೃಷ್ಟಿಯಿಂದ ಬೆಳೆ ಹಾನಿ', 'ದಿಢೀರ್ ಬೆಲೆ ಕುಸಿತದಿಂದ ಹಾಕಿದ ಬಂಡವಾಳವನ್ನೂ ಕಾಣದ ರೈತ' ಇತ್ಯಾದಿ, ಇತ್ಯಾದಿ. ಇಂತಹ ಸಮಸ್ಯೆಗಳ ಸರಪಳಿಯಲ್ಲಿ ಸಿಲುಕಿರುವ ರೈತರು ಆತ್ಮಹತ್ಯೆಗೆ ಮೊರೆ ಹೋಗುತ್ತಿರುವುದು ಸರ್ವೇಸಾಮಾನ್ಯವಾಗಿರುವ ವಿಷಯ. ಕಳೆದ 30 ವರ್ಷಗಳಲ್ಲಿ 3 ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅಂದಾಜಿಸಲಾಗಿದೆ.

ಕೇಂದ್ರ ಸರ್ಕಾರವು ತಾನು ಜಾರಿಗೆ ತರಬೇಕೆಂದಿದ್ದ ರೈತ ವಿರೋಧಿಯಾಗಿದ್ದ ಮೂರು ಕರಾಳ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ರೈತರು ನಡೆಸಿದ ಭವ್ಯ ಹೋರಾಟದ ಹಿನ್ನೆಲೆಯಲ್ಲಿ ಅವನ್ನು ತಾನೇ ಹಿಂಪಡೆಯಬೇಕಾಯಿತು. ಆದರೆ, ಈಗ ಆ ಕಾಯ್ದೆಗಳಲ್ಲಿದ್ದ ಅಂಶಗಳನ್ನೇ ವಿವಿಧ ರಾಜ್ಯಗಳಲ್ಲಿ ಸರ್ಕಾರಗಳು ಹಿಂಬಾಗಿಲಿನಿಂದ ಜಾರಿ ಮಾಡುತ್ತಿವೆ. ಅವುಗಳ ಜೊತೆಯಲ್ಲಿಯೇ, ರೈತರ ಮೇಲೆ ಎಡೆಬಿಡದೆ ವಿವಿಧ ರೀತಿಯ ಪ್ರಹಾರಗಳನ್ನೂ ಸಹ ಮಾಡುತ್ತಲೇ ಇರುತ್ತವೆ. ಕಳೆದ ನವೆಂಬರ್‌ನಲ್ಲಿ ಸಂಸತ್ತಿನಲ್ಲಿ ಮಂಡಿಸಲಾದ ಬೀಜ ಮಸೂದೆ 2025 ಆ ಪ್ರಹಾರಗಳ ಪಟ್ಟಿಗೆ ಈಗ ಹೊಸ ಸೇರ್ಪಡೆಯಾಗಿದೆ. ಈ ಮಸೂದೆಯು ರೈತರನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುತ್ತದೆ.

### ದೇಶದಲ್ಲಿ ಬೀಜ ವಲಯದ ಉಗಮ ಹಾಗೂ ಬೆಳವಣಿಗೆ

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಬೀಜದ ಅವಶ್ಯಕತೆಯನ್ನು ರೈತರು ವಿನಿಮಯದ ಮೂಲಕ ಪೂರೈಸಿಕೊಳ್ಳುತ್ತಿದ್ದರು. ಅದರ ಉತ್ಪಾದನೆ, ಸಂಸ್ಕರಣೆ, ದಾಸ್ತಾನು ಹಾಗೂ ಹಂಚಿಕೆಯನ್ನು ಅವರೇ ಸ್ವತ: ನಿರ್ವಹಿಸುತ್ತಿದ್ದರು. ಸ್ವಾತಂತ್ರ್ಯಾನಂತರ ಕೇಂದ್ರ ಸರ್ಕಾರವು ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಹೊಂದಲು ಮಾರಾಟಕ್ಕಿಡುವ ಬೀಜದ ಗುಣಮಟ್ಟವನ್ನು ತಾನೇ ನಿಯಂತ್ರಿಸಲು ಆರಂಭಿಸಿತು. 1966ರ ಬೀಜ ಕಾಯ್ದೆಯು ಬೀಜದ ಪರಿವೀಕ್ಷಣೆ, ಪರೀಕ್ಷೆ, ಪ್ರಮಾಣ ಪತ್ರ ನೀಡಿಕೆಗಳನ್ನು ಕುರಿತ ವಿವಿಧ ಅಂಶಗಳನ್ನು ಒಳಗೊಂಡಿತ್ತು ಹಾಗೂ ವಿವಿಧ ಭೂಪ್ರದೇಶಗಳಿಗೆ ಮತ್ತು ವಾತಾವರಣಗಳಿಗೆ ಹೊಂದುವ ಬೀಜಗಳ ಹೊಸ ತಳಿಗಳು ಮತ್ತು ಕೃಷಿ ಕ್ಷೇತ್ರ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಸಾರ್ವಜನಿಕ ವಲಯದಲ್ಲಿಯೇ ಮಾಡುವ ಅಂಶಗಳನ್ನು ಹೊಂದಿತ್ತು.

### ಬೀಜ ಅಭಿವೃದ್ಧಿ ನೀತಿ, ಜಾಗತೀಕರಣ, ಡಬ್ಲ್ಯೂಟಿಓ ಒಪ್ಪಂದಗಳು ಮತ್ತು ಟ್ರಿಪ್ಸ್

1988ರಲ್ಲಿ, ದೇಶದಲ್ಲಿ ಬೀಜ ಉತ್ಪಾದನೆಯ ಕ್ಷೇತ್ರವನ್ನು ಉದಾರೀಕರಿಸಲಾಯಿತು. ಇದರಿಂದ ವಿದೇಶಿ ಕಂಪನಿಗಳಿಗೆ ಎಫ್‌ಡಿಐ ಯೋಜನೆಯ ಮೂಲಕ ದೇಶದ ಒಳಗೆ ನುಸುಳಲು ಸಾಧ್ಯವಾಗುವಂತಹ ಆಮದು ನೀತಿ ಜಾರಿಗೆ ಬಂತು. 1991ರಲ್ಲಿ ಕಾಂಗ್ರೆಸ್ ಸರ್ಕಾರವು ಜಾರಿಗೆ ತಂದ ಜಾಗತೀಕರಣದ ನೀತಿಗನುಗುಣವಾಗಿ, 1994ರಲ್ಲಿ ವಿಶ್ವವಾಣಿಜ್ಯ ಸಂಸ್ಥೆ(ಡಬ್ಲ್ಯೂಟಿಓ)ಯ ಪ್ರತಿಪಾದನೆಯಂತೆ ಟ್ರಿಪ್ಸ್(ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳು)ನ ಷರತ್ತುಗಳಿಗೆ ಒಪ್ಪಿಗೆ ನೀಡಲಾಯಿತು. ಸಸ್ಯ ವೈವಿಧ್ಯತೆಯನ್ನು ಕಾಪಾಡಲು ಎಲ್ಲವನ್ನೂ ಪೇಟೆಂಟ್ ಪದ್ಧತಿಗೆ ಒಳಪಡಿಸಬೇಕು ಎಂದು ಹೇಳಲಾಯಿತು. ಇದಾದ ನಂತರ ಬೀಜೋದ್ಯಮದಲ್ಲಿ ಖಾಸಗಿ ವಲಯಕ್ಕೆ ಉತ್ತೇಜನ ದೊರೆಯಿತು. ಪ್ರಸಕ್ತ ಬೀಜ ಉತ್ಪಾದನೆ ಅಥವಾ ಮಾರಾಟ ಕ್ಷೇತ್ರದಲ್ಲಿ 400 ರಿಂದ 500 ಕಂಪನಿಗಳು ಭರ್ಜರಿ ವ್ಯವಹಾರ ನಡೆಸುತ್ತಿವೆ. ಅತ್ಯಧಿಕ ಲಾಭವನ್ನು ನೀಡುವ ಕಡಿಮೆ ಪ್ರಮಾಣದಲ್ಲಿ ಬಳಕೆಯಾಗುವ, ಹೆಚ್ಚಿನ ಬೆಲೆಯ ಬೀಜಗಳನ್ನು ಖಾಸಗಿ ಬೀಜ ಕಂಪನಿಗಳು ತಮ್ಮ ಗುರಿಯಾಗಿಟ್ಟುಕೊಂಡಿದ್ದರೆ, ಸಾರ್ವಜನಿಕ ವಲಯದ ಬೀಜ ನಿಗಮಗಳು ಲಾಭಗಳಿಕೆಯನ್ನೇ ತಮ್ಮ ಏಕೋದ್ದೇಶ ಮಾಡಿಕೊಳ್ಳದೆ ಕಡಿಮೆ ಬೆಲೆಯ ಅಪಾರ ಪ್ರಮಾಣದಲ್ಲಿ ಬಳಕೆಯಾಗುವ, ಬದುಕಿಗೆ ಮೂಲಭೂತವಾಗಿ ಬೇಕಾಗಿರುವ ಆಹಾರ ಧಾನ್ಯ ಬೀಜಗಳ ಕ್ಷೇತ್ರಕ್ಕೆ ಒತ್ತು ನೀಡಿದ್ದವು.

ಆರ್ಥಿಕ ಸುಧಾರಣೆ(ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ) ಹಾಗೂ ಟ್ರಿಪ್ಸ್‌ಗೆ ಭಾರತವು ಸಹಿ ಹಾಕಿದ ಪರಿಣಾಮದಿಂದಾಗಿ, ಹೊಸ ವಿದೇಶಿ ಹಾಗೂ ಸ್ವದೇಶಿ ಕಂಪನಿಗಳು ಭಾರತದ ಬೀಜ ವಲಯವನ್ನು ಆಕ್ರಮಿಸತೊಡಗಿದವು ಮತ್ತು ಮಾರುಕಟ್ಟೆಗಾಗಿ ತೀವ್ರ ಪೈಪೋಟಿ ಶುರುವಾಯಿತು. ಜೊತೆಗೆ ಬೀಜದ ಉತ್ಪಾದನಾ ವೆಚ್ಚವು ಏರಿ ಬೀಜದ ಬೆಲೆ ಗಗನಮುಖಿಯಾಗುತ್ತಾ ಸಾಗಿತು. ಹಿಂದೆ ರೈತರು ತಾವು ಬೆಳೆದ ಬೆಳೆಯ ಬೀಜಗಳನ್ನು ಮರುಬಳಕೆ ಮಾಡುತ್ತಿದ್ದ ವಿಧಾನವನ್ನು ಬದಲಾಯಿಸಲಾಯಿತು. ಮಿಶ್ರತಳಿಯನ್ನು ಬಳಸಲು ಉತ್ತೇಜನ ನೀಡಲಾಯಿತು. ತತ್ಪರಿಣಾಮವಾಗಿ, ಮಿಶ್ರತಳಿಯ ಬೀಜಗಳನ್ನು ಮರುಬಳಕೆ ಮಾಡಿದರೆ ಇಳುವರಿಯು ಸಾಕಷ್ಟು ಇಳಿಮುಖವಾಯಿತು. ಇದರಿಂದ ರೈತರು ಅನಿವಾರ್ಯವಾಗಿ, ಪ್ರತಿ ವರ್ಷವೂ ಬೀಜ ಖರೀದಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. 1988ರ ಬೀಜ ನೀತಿಯು ಖಾಸಗಿ ವಲಯಕ್ಕೆ ನೀಡಿದ ಉತ್ತೇಜನದಿಂದಾಗಿ ಬೀಜ ವ್ಯಾಪಾರದ ಕ್ಷೇತ್ರದಲ್ಲಿ ಖಾಸಗಿ ವಲಯದ ಅಸ್ತಿತ್ವದ ಪ್ರಮಾಣವು 1984–95ರ ನಡುವೆ ಶೇ.50 ರಿಂದ ಶೇ.60ರಷ್ಟು ಇದ್ದದ್ದು, 2019ರ ಸಂದರ್ಭದಲ್ಲಿ, ಶೇ.80ರಷ್ಟು ಆಯಿತು. ಖಾಸಗಿ ವಲಯದಲ್ಲಿ ಹೆಚ್ಚು ಬಂಡವಾಳದ ಹೂಡಿಕೆಯಿಂದ ಮತ್ತು ಉನ್ನತ ಸಂಶೋಧನೆಗಳ ಪರಿಣಾಮದಿಂದ ದೊರೆತ ಬೀಜಗಳನ್ನು ಪಡೆಯಲು ರೈತರು ಅಧಿಕ ಬೆಲೆಯನ್ನು ತೆರಬೇಕಾಯಿತು. ಸ್ವದೇಶಿ ಬೀಜಗಳ ಬಳಕೆ ಕಡಿಮೆಯಾಗುತ್ತಾ ಸಾಗಿತು. ಹೇಗೆ ಭಾರತದ ರೈತರು ಕಾನೂನಾತ್ಮಕ ತಡೆಗಳಿಗಿಂತ ಹೆಚ್ಚಾಗಿ ತಾಂತ್ರಿಕ ಬೆಳವಣಿಗೆಯ ಕೊರತೆಯಿಂದ ನರಳುತ್ತಾರೆ ಎನ್ನುವುದಕ್ಕೆ ಇದು ಉತ್ತಮ ನಿದರ್ಶನವಾಗುತ್ತದೆ.

### ಭಾರತದ ರೈತರ ವಿನಾಶಕಾರಿ ಸ್ಥಿತಿ

ಕಳೆದ ಮೂರು ದಶಕಗಳಲ್ಲಿ ಕೃಷಿ ಉತ್ಪಾದನೆ ವೆಚ್ಚ ವಿಪರೀತವಾಗಿ ಏರಿದೆ. ಅದಕ್ಕೆ ಮೂಲ ಕಾರಣವೇ, ಕೃಷಿ ಒಳಸುರಿ ವೆಚ್ಚಗಳ ಅಪಾರ ಏರಿಕೆ. ಕನಿಷ್ಠ ಬೆಂಬಲ ಬೆಲೆ(ಸಿ2+50%) ನೀಡಬೇಕು ಮತ್ತು ಎಲ್ಲಾ ಕೃಷಿ ಉತ್ಪನ್ನಗಳನ್ನೂ ಬೆಂಬಲ ಬೆಲೆಯ ಆಧಾರದಲ್ಲಿ ಖರೀದಿಸಬೇಕು ಎಂಬ ರೈತರ ಕನಿಷ್ಠ ಆಗ್ರಹಕ್ಕೆ ಮುಖ ತಿರುಗಿಸಿಕೊಂಡಿರುವ ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರ್ಕಾರಗಳು ಆ ವಿಷಯವನ್ನೇ ಮುಂದೆ ಹಾಕುತ್ತಾ ನಡೆದಿವೆ. ಜೊತೆಗೆ, ಸೂಕ್ತ ಸಮಯಕ್ಕೆ ಬೀಜ ಲಭ್ಯವಾಗದೇ ಇರುವುದು ಹಾಗೂ ಕಳಪೆ ಬೀಜಗಳ ಹಾವಳಿಗೆ ಯಾವುದೇ ಪರಿಹಾರ ದೊರಕಿಲ್ಲ. ಹೀಗಾಗಿ ರೈತರು ತಮ್ಮ ಇತರೆ ಎಲ್ಲಾ ಸಮಸ್ಯೆಗಳೊಂದಿಗೆ ಖಾಸಗಿ ಕಂಪನಿಗಳು ಸರಬರಾಜು ಮಾಡುತ್ತಿರುವ ಕಳಪೆ ಬೀಜದಿಂದಾಗಿ ಅಪಾರ ಬೆಳೆ ನಷ್ಟವನ್ನು ಅನುಭವಿಸುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಬಿಹಾರದಲ್ಲಿ ಆಲೂಗಡ್ಡೆ ಮತ್ತು ಹತ್ತಿ ಬೆಳೆಗಾರರು ಖಾಸಗಿ ಬೀಜ ನಿಗಮಗಳಿಂದ ಪೂರೈಕೆಯಾದ ಅತಿಕಳಪೆ ಬೀಜಗಳ ಬಳಕೆಯಿಂದಾಗಿ ಭೀಕರ ನಷ್ಟಕ್ಕೆ ಒಳಗಾದರು. ಅಂತಹ ಸಂದರ್ಭಗಳಲ್ಲಿ, ಸಾಮಾನ್ಯ ರೈತರು ಬೃಹತ್ ಏಕಸ್ವಾಮ್ಯ ಬಹುರಾಷ್ಟ್ರೀಯ ದೈತ್ಯ ಕಂಪನಿಗಳ ವಿರುದ್ಧ ದಾವೆ ಹೂಡಿ ಗೆಲ್ಲಲು ಸಾಧ್ಯವೇ? ಆ ದೋಷಿ ಕಂಪನಿಗಳಿಗೆ ನಿದರ್ಶನೀಯ ಶಿಕ್ಷೆಗೆ ಗುರಿಮಾಡಲೋ ಅಥವಾ ಅವುಗಳಿಂದ ಸೂಕ್ತ ಪರಿಹಾರವನ್ನು ರೈತರಿಗೆ ದೊರಕಿಸಿಕೊಡಲೋ ಸರ್ಕಾರಗಳು ತಮ್ಮ ಕಿರುಬೆರಳನ್ನೂ ಎತ್ತಿಲ್ಲ.

### 2025ರ ಬೀಜ ಮಸೂದೆಯ ಅಂಶಗಳು

2025ರ ನವೆಂಬರ್ 12ರಂದು ಮಂಡಿಸಲಾದ 'ಕರಡು ಬೀಜ ಮಸೂದೆ 2025'ರ ಪ್ರಮುಖ ಅಂಶಗಳು ಹಾಗೂ ಉದ್ದೇಶಗಳು: ಈಗ ಚಾಲ್ತಿಯಲ್ಲಿರುವ ಬೀಜ ಕಾಯ್ದೆ 1966 ಅನೂರ್ಜಿತವಾಗುತ್ತದೆ, ಬೀಜ ಮಾರಾಟ, ಆಮದು, ರಫ್ತು, ಉತ್ಪಾದನೆ, ಸಂಗ್ರಹಣೆ, ಸರಬರಾಜು ಇತ್ಯಾದಿಗಳ ಮೇಲೆ ನಿಗಾ ವಹಿಸಲಾಗುತ್ತದೆ, ರೈತರು, ಮಾರಾಟಗಾರರು, ಉತ್ಪಾದಕರು, ವಿತರಕರು ಎಂದು ಸರಬರಾಜು ಸರಪಳಿಯಲ್ಲಿರುವ ಎಲ್ಲರನ್ನೂ ಪ್ರತ್ಯೇಕವಾಗಿ ವಿಂಗಡಿಸಲಾಗುತ್ತದೆ. ವ್ಯವಸ್ಥೆಯ ನಿಯಂತ್ರಣಕ್ಕಾಗಿ 27 ಸದಸ್ಯರ ಕೇಂದ್ರ ಬೀಜ ಸಮಿತಿ ಹಾಗೂ 15 ಸದಸ್ಯಬಲದ ರಾಜ್ಯ ಬೀಜ ಸಮಿತಿಯನ್ನು ರಚಿಸಲಾಗುತ್ತದೆ. ರಾಷ್ಟ್ರೀಯ ನೋಂದಣಿ ಪಡೆದ ಬೀಜ ಕಂಪನಿಗಳಿಗೆ ಎಲ್ಲಾ ರಾಜ್ಯಗಳಲ್ಲಿ ಸುಲಭವಾಗಿ ವ್ಯಾಪಾರ ವಹಿವಾಟು ನಡೆಸಲು ಅನುವು ಮಾಡಿಕೊಡಲಾಗುತ್ತದೆ. ಬೀಜವೆಂದರೇನು ಎಂದು ವಿವರಿಸಿ, ಆ ವ್ಯಾಖ್ಯಾನವು ಎಲ್ಲಾ ಬೀಜ ಹಾಗೂ ಗಿಡಗಳನ್ನು ವ್ಯಾಪಿಸಿಕೊಂಡಿರುವಂತೆ ನಿಗಾವಹಿಸಲಾಗಿದೆ. 1966ರ ಬೀಜ ಕಾಯ್ದೆಯು ಕೆಲವೇ ಆಯ್ದ ಬೀಜಗಳನ್ನು ಮಾತ್ರ ಒಳಗೊಂಡಿತ್ತು. ಅಂದರೆ, ಇದರಿಂದಾಗಿ, ಈಗ ದೈತ್ಯ ಕೃಷಿ ಕಂಪನಿಗಳಿಗೆ ಹಾಗೂ ಕಾರ್ಪೊರೇಟ್ ತಿಮಿಂಗಲಗಳಿಗೆ ಎಲ್ಲ ಕೃಷಿ ಸಂಬಂಧಿತ ವಸ್ತುಗಳನ್ನು ತಮ್ಮ ಕಪಿಮುಷ್ಟಿಯಲ್ಲಿ ಹಿಡಿದು ಲಾಭದಾಯಕ ವ್ಯವಹಾರ ನಡೆಸಲು ದೇಶೀಯ ಮಾರುಕಟ್ಟೆಯ ಹೆಬ್ಬಾಗಿಲು ತೆರೆಯಲಾಗಿದೆ. ಕಳಪೆ ಬೀಜಗಳಿಂದಾಗಿ ರೈತರಿಗೆ ಬೆಳೆ ಹಾನಿಯಾದರೆ ಅವರಿಗೆ ದೊರಕಬೇಕಾದ ಪರಿಹಾರದ ಕುರಿತು ಗಟ್ಟಿಯಾದ ಪ್ರತಿಪಾದನೆ ಈ ಮಸೂದೆಯಲ್ಲಿಲ್ಲ. ಅವರಿಗೆ ಕೋರ್ಟ್ ಮೆಟ್ಟಿಲು ಹತ್ತಲು ಸಲಹೆಗಳಿವೆ ಮಾತ್ರ! ಯಾರಾದರೂ ರೈತರು ವೈಯಕ್ತಿಕವಾಗಿ ಹಾಗೂ ತಮ್ಮದೇ ಗುಂಪುಗಳಲ್ಲಿ ತಮ್ಮ ಮಧ್ಯೆ ಬೀಜ ವಿತರಣೆಯನ್ನು ಮಾಡಿಕೊಂಡರೆ ಅಂತಹ ಗುಂಪುಗಳನ್ನು ವಾಣಿಜ್ಯ ಘಟಕಗಳಂತೆ ಪರಿಗಣಿಸಲಾಗುತ್ತದೆ, ಅವಕ್ಕೆ ಎಲ್ಲ ಕಂಪನಿಗಳಿಗೆ ಅನ್ವಯಿಸುವ ನಿಬಂಧನೆಗಳೂ ಇರುತ್ತವೆ. ಅವರು ಬೀಜದ ಬೆಲೆಯನ್ನು ನಿಗದಿಪಡಿಸಲು ಸಾಧ್ಯವಿಲ್ಲ. ಯಾರು ಕಾಯ್ದೆಯಡಿ ನೋಂದಾಯಿಸಿಕೊಳ್ಳುವರೋ ಅವರಿಗೆ ಮಾತ್ರವೇ ಬೀಜದ ಬೆಲೆಯನ್ನು ನಿರ್ಧರಿಸಲು ಅವಕಾಶವಿದೆ. ಈ ಮಸೂದೆಯ ಹೊಸ ನಿಯಮಗಳ ಪ್ರಕಾರ ಇದೀಗ ಗುಡಿ ಕೈಗಾರಿಕೆಗಳಂತೆ ಇರುವ ಸಾವಿರಾರು ಬೀಜದ ಅಂಗಡಿಗಳು ಮುಚ್ಚಿ ಹೋಗುತ್ತವೆ. ಸಣ್ಣ ಹಾಗೂ ಗ್ರಾಮೀಣ ಬೀಜ ಮಾರಾಟಗಾರರು ಆನ್ಲೈನ್ ವ್ಯವಹಾರಗಳನ್ನು ಮಾಡಲಾರರು. ಹೀಗೆ, ಕೃಷಿ ಆಧಾರಿತ ಚಟುವಟಿಕೆಗಳನ್ನು ನಡೆಸುವ ಲಕ್ಷೋಪಲಕ್ಷ ಜನರು ಭೀಕರ ಅನಾಹುತಕ್ಕೆ ತುತ್ತಾಗಲಿದ್ದಾರೆ.

ಈ ಕರಡು ಮಸೂದೆಯು ವಿದೇಶಿ ಸಂಸ್ಥೆಗಳಿಗೆ ಬೀಜದ ಗುಣಮಟ್ಟ ಅಳೆಯಲು ಅವಕಾಶ ನೀಡುತ್ತದೆ. ಇದರಿಂದಾಗಿ ವಿದೇಶಿ ಅಳತೆಗೋಲಿನಿಂದ ನಿರ್ಧರಿತವಾಗುವ ಕುಲಾಂತರಿ ಬೀಜಗಳು ಅಥವಾ ಹಕ್ಕುಸ್ವಾಮ್ಯ ಹೊಂದಿರುವ ಬೀಜಗಳು ಭಾರತದೊಳಕ್ಕೆ ಬರಲು ಅವಕಾಶವಾಗುತ್ತದೆ. ಇದು ಮಾನವನ ಹಾಗೂ ಪ್ರಕೃತಿಯ ಆರೋಗ್ಯದ ಮೇಲೆ ಅಪಾಯಕಾರಿ ಪರಿಣಾಮ ಬೀರುತ್ತದೆ ಮತ್ತು ಸಣ್ಣ ರೈತರು ನಿರ್ನಾಮವಾಗುತ್ತಾರೆ ಎಂದು ತಜ್ಞರ ಆತಂಕ ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದ ಕೃಷಿಗೆ ಸಂಬಂಧಿಸಿದ ಸಂಶೋಧನೆ ಹಾಗೂ ಬೆಳವಣಿಗೆಯ ಕಾರ್ಯಗಳು ನೇಪಥ್ಯಕ್ಕೆ ಸರಿಯುತ್ತವೆ. ಈ ಮಸೂದೆಯ ಮೂಲಕ ಬಿಜೆಪಿ ಸರ್ಕಾರವು ಈಗ ರಾಜ್ಯ ಪಟ್ಟಿಯಲ್ಲಿರುವ ಪ್ರಮುಖ ಕ್ಷೇತ್ರವಾದ ಕೃಷಿ ಅಡಿಯಲ್ಲಿರುವ ಬೀಜ ವಲಯಕ್ಕೆ ಸಂಬಂಧಿಸಿದಂತೆ ಇರುವ ಒಕ್ಕೂಟ ವ್ಯವಸ್ಥೆಯ ಸ್ವರೂಪವನ್ನು ತಿರುಗುಮುರುಗಾಗಿಸುತ್ತಿದೆ. ಈ ಎಲ್ಲಾ ನಿಬಂಧನೆಗಳಿಂದಾಗಿ, ಬಹುತೇಕ ಸಣ್ಣ ಹಾಗೂ ಮಧ್ಯಮ ರೈತರು ವಿಪತ್ತಿಗೆ ಒಳಗಾಗುತ್ತಾರೆ.

### ರೈತರು ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ

ಕೇಂದ್ರ ಸರ್ಕಾರವು ದೆಹಲಿಯಲ್ಲಿ ನಡೆದ ಐತಿಹಾಸಿಕ ರೈತರ ಹೋರಾಟವು ನೊಂದ ರೈತ ಸಮುದಾಯದಲ್ಲಿ ಹೋರಾಟದ ಕಿಚ್ಚನ್ನು ಹಚ್ಚಿದೆ. ಈಗ ರೈತರು ಸಂಘಟಿತರಾಗಿ ಎಲ್ಲಾ ರೈತ ವಿರೋಧಿ, ಕೃಷಿ ವಿರೋಧಿ ನೀತಿಗಳ ವಿರುದ್ಧ ಸಿಡಿದೇಳುತ್ತಿದ್ದಾರೆ. ಅವರು ಮತ್ತೆ ಇನ್ನೊಂದು ದೀರ್ಘಕಾಲೀನ ಸಮರಶೀಲ ಹೋರಾಟವನ್ನು ಕಟ್ಟುತ್ತಾ ಸರ್ಕಾರವನ್ನು ಮಣಿಸುತ್ತಾರೆ ಎಂಬ ದೃಢ ವಿಶ್ವಾಸ ಇರಿಸಿಕೊಳ್ಳಬಹುದು.




ಎಐಕೆಕೆಎಂಎಸ್ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಸತ್ಯವಾನ್ ಅವರು ಮಾತನಾಡುತ್ತಿರುವುದು, ಅವರ ಎಡಕ್ಕೆ, ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಂಕರ್ ಘೋಷ್, ಕರ್ನಾಟಕ ರಾಜ್ಯದ ಅಧ್ಯಕ್ಷರಾದ ಕಾಮ್ರೇಡ್ ಶಶಿಧರ್

## ಎಐಕೆಕೆಎಂಎಸ್ ಸಂಘಟಿತ ದಕ್ಷಿಣ ಭಾರತದ ಅಧ್ಯಯನ ಶಿಬಿರ

ಕರ್ನಾಟಕದ ರಾಯಚೂರಿನಲ್ಲಿ ಫೆಬ್ರವರಿ 21 ಮತ್ತು 22 ರಂದು ಎರಡು ದಿನಗಳ ಕಾಲ ನಡೆದ ಶಿಬಿರದಲ್ಲಿ ಕರ್ನಾಟಕ, ತಮಿಳು ನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಪುದುಚೇರಿ ರಾಜ್ಯಗಳಿಂದ ರೈತ–ಕೃಷಿ ಕಾರ್ಮಿಕರ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಶಿಬಿರವನ್ನು ಎಐಕೆಕೆಎಂಎಸ್ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಸತ್ಯವಾನ್ ಮತ್ತು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಂಕರ್ ಘೋಷ್ ನಡೆಸಿಕೊಟ್ಟರು. ರಾಷ್ಟ್ರೀಯ ಉಪಾಧ್ಯಕ್ಷರಾದ ಕಾಮ್ರೇಡ್ ಸುನೀತ್ ಕುಮಾರ್, 'ಮೈಸೂರು ಸಂಸ್ಥಾನದಲ್ಲಿ ಭೂ ಸಂಬಂಧಗಳು', ಅಖಿಲ ಭಾರತ ಸೆಕ್ರೆಟೇರಿಯಟ್ ಸದಸ್ಯರಾದ ಕಾಮ್ರೇಡ್ ಆಜೀಜ್, 'ಕೇರಳದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಭೂ ಸಂಬಂಧಗಳು' ಮತ್ತು ಮತ್ತೊಬ್ಬ ಅಖಿಲ ಭಾರತ ಸೆಕ್ರೆಟೇರಿಯಟ್ ಸದಸ್ಯರಾದ ಕಾಮ್ರೇಡ್ ಗಿರೀಶ್, 'ಹೈದರಾಬಾದಿನ ನಿಜಾಮನ ಕಾಲದ ಭೂಸಂಬಂಧಗಳು' ಕುರಿತು ವಿಷಯ ಮಂಡನೆ ಮಾಡಿದರು. ಎಐಕೆಕೆಎಂಎಸ್ ಕರ್ನಾಟಕ ರಾಜ್ಯದ ಅಧ್ಯಕ್ಷರಾದ ಕಾಮ್ರೇಡ್ ಶಶಿಧರ್, ಕಾರ್ಯದರ್ಶಿಗಳಾದ ಕಾಮ್ರೇಡ್ ಭಗವಾನ್ ರೆಡ್ಡಿ ಮತ್ತು ಅಖಿಲ ಭಾರತ ಸೆಕ್ರೆಟೇರಿಯಟ್ ಸದಸ್ಯರಾದ ಕಾಮ್ರೇಡ್ ನಾಗಮ್ಮಾಳ್ ಉಪಸ್ಥಿತರಿದ್ದರು.

# ‘ಶಾಂತಿ’ ಕಾಯ್ದೆ 2025–ಯಾರ ಹಿತಕ್ಕಾಗಿ?

ಮೋದಿ ನೇತೃತ್ವ ಬಿಜೆಪಿ ಸರ್ಕಾರವು ವಿವಿಧ ಯೋಜನೆಗಳಿಗೆ ಸುಂದರವಾದ ಪದಪುಂಜಗಳ ಮೂಲಕ ನಾಮಕರಣ ಮಾಡುವುದರಲ್ಲಿ ಸಿದ್ಧಹಸ್ತ. ‘ಪೋಷಣ್, ಜಿ ರಾಮ್ ಜಿ, ಮುದ್ರಾ, ಉದಯ’ಗಳ ನಂತರ ಮತ್ತೀಗ ‘ಶಾಂತಿ’ ಕಾಯ್ದೆ ಬಂದಿದೆ. ಹೆಸರುಗಳೇನೋ ಕಿವಿಗೆ ಇಂಪಾಗಿವೆ. ಆದರೆ, ಇವುಗಳ ಉದ್ದೇಶ? ‘ಶಾಂತಿ’ (SHANTHI) ಎಂಬುದು Sustainable Harnessing and Advancement of Nuclear Energy for Transforming India (SHANTHI) Act 2025 ಎಂಬ ಕಾಯ್ದೆ. ಭಾರತವು ಅಂತರರಾಷ್ಟ್ರೀಯ ಸಹಕಾರದೊಂದಿಗೆ 700 ಮೆ.ವಾ. ಹಾಗೂ 1000 ಮೆ.ವಾ. ಸಾಮರ್ಥ್ಯದ ಪರಮಾಣು ರಿಯಾಕ್ಟರ್‌ಗಳನ್ನು ಸ್ಥಾಪಿಸುವ ಉದ್ದೇಶವು ಈ ಕಾಯ್ದೆಯ ಹಿಂದಿದೆ. 2031–32ರ ಹೊತ್ತಿಗೆ, ದೇಶದ ಶಕ್ತಿಯ ಉತ್ಪಾದನಾ ಸಾಮರ್ಥ್ಯವನ್ನು 22 ಗಿ.ವಾ. ಪ್ರಮಾಣಕ್ಕೆ ಹಾಗೂ 2047ರ ಹೊತ್ತಿಗೆ 100 ಗಿ.ವಾಗೆ ಹೆಚ್ಚಿಸಲಾಗುವುದು ಎಂದು ಹೇಳಲಾಗುತ್ತಿದೆ. ಈ ಕಾಯ್ದೆಯ ನಿರೂಪಣೆಗಳನ್ನು ಬಳಸಿಕೊಂಡು ಪರಮಾಣು ಶಕ್ತಿಯ ಉತ್ಪಾದನೆಯಲ್ಲಿ ಬಂಡವಾಳ ಹೂಡಲು ಖಾಸಗಿ ಕಂಪೆನಿಗಳಿಗೆ ಮುಕ್ತ ಅವಕಾಶ ನೀಡಲಾಗುವುದು. 2025ರ ಡಿ.17 ಹಾಗೂ 18ರಂದು ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ, ಯಾವುದೇ ಚರ್ಚೆ ನಡೆಯದೆ, ವಿರೋಧ ಪಕ್ಷಗಳ ಸಭಾತ್ಯಾಗದ ನಡುವೆ ತರಾತುರಿಯಲ್ಲಿ ಈ ಮಸೂದೆಯನ್ನು ಅಂಗೀಕರಿಸಲಾಯಿತು. ರಾಷ್ಟ್ರಪತಿ ಸಹ ಈ ಕಾಯ್ದೆಗೆ ಅಂಕಿತ ಹಾಕಿದ್ದಾರೆ.

### ಪ್ರಸ್ತುತ ಸಾಮಾಜಿಕ–ರಾಜಕೀಯ–ಆರ್ಥಿಕ ಪರಿಸ್ಥಿತಿ

ದೊಡ್ಡ ಪ್ರಮಾಣದಲ್ಲಿ ಪರಮಾಣು ಶಕ್ತಿಯನ್ನು ಉತ್ಪಾದಿಸುವ ನಿರ್ಧಾರವನ್ನು ಮಾಡುವ ಮುನ್ನ, ಅದರಿಂದ ಉಂಟಾಗುವ ಪರಿಣಾಮಗಳು ಹಾಗೂ ಇತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಲ್ಲವೇ? ವಿಜ್ಞಾನ–ತಂತ್ರಜ್ಞಾನದ ಬಳಕೆಯ ಪರಿಣಾಮಗಳನ್ನು ಸಾಮಾಜಿಕ–ಆರ್ಥಿಕ–ರಾಜಕೀಯ ಪರಿಸ್ಥಿತಿಯಿಂದ ಹೊರಗಿಟ್ಟು ನೋಡಲು ಸಾಧ್ಯವಿದೆಯೇ ಅಥವಾ ಅದು ಸರಿಯೇ? ನಾವಿಂದು ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಇಲ್ಲಿನ ರಾಜಕೀಯ ವ್ಯವಸ್ಥೆಯು ಸಂಪೂರ್ಣವಾಗಿ ಬಂಡವಾಳಶಾಹಿಗಳ ಲಾಭೋದ್ದೇಶವನ್ನು ಕಾಪಿಡುತ್ತದೆ ಹಾಗಾಗಿ, ಈ ವ್ಯವಸ್ಥೆಯಲ್ಲಿ ಜನರ ಬವಣೆಗಳಿಗೆ ಪರಿಹಾರ ದೊರಕದು. ಯಾವುದೇ ಪ್ರಶ್ನೆಯನ್ನು ಜನಸಾಮಾನ್ಯರ ದೃಷ್ಟಿಕೋನದಿಂದ ಯೋಚಿಸುವಾಗ, ಬಂಡವಾಳಶಾಹಿ ವರ್ಗದ ಚಿಂತನಾ ಕ್ರಮದಿಂದ ನಿರ್ದೇಶಿತವಾಗಲು ನಾವು ಅವಕಾಶ ನೀಡಬಾರದು ಅಥವಾ ಶೋಷಕ ಬಂಡವಾಳಶಾಹಿ ಆರ್ಥಿಕ–ರಾಜಕೀಯ ಹಿತಾಸಕ್ತಿ ನಮ್ಮನ್ನು ಪ್ರಭಾವಿಸುವಂತೆ ಆಗಕೂಡದು. ಈ ದೃಷ್ಟಿಕೋನವು ವಿಜ್ಞಾನ–ತಂತ್ರಜ್ಞಾನದ ಬಳಕೆ ಮತ್ತು ವೈಜ್ಞಾನಿಕ ಆವಿಷ್ಕಾರಗಳನ್ನು ಮಾನವ ಸಮಾಜದ ಹಿತಾಸಕ್ತಿಗಾಗಿ ದುಡಿಸಿಕೊಳ್ಳುವ ಸಂದರ್ಭದಲ್ಲಿಯೂ ಅನ್ವಯವಾಗುತ್ತದೆ.

ನಮ್ಮ ದೇಶದಲ್ಲಿರುವ ಈ ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಎಲ್ಲಾ ಉತ್ಪಾದನೆಗಳಂತೆ ವಿದ್ಯುತ್ ಉತ್ಪಾದನೆಯೂ ಕೂಡ ಅತಿ ಹೆಚ್ಚು ಲಾಭಗಳಿಕೆಯ ಉದ್ದೇಶದಿಂದ ಕೂಡಿದೆ. ಆಡಳಿತಾರೂಢ ಬಂಡವಾಳಶಾಹಿ ವರ್ಗ ಮತ್ತು ಅದರ ಬಾಲಬಡುಕ ಬಿಜೆಪಿ ಸರ್ಕಾರವು ಅಪಾಯರಹಿತವಾಗಿರುವ ಪರಮಾಣು ಶಕ್ತಿಯ ಉತ್ಪಾದನಾ ಕ್ರಮವನ್ನು ಮತ್ತು ವಿಕಿರಣಯುಕ್ತ ತ್ಯಾಜ್ಯದ ಸರಿಯಾದ ನಿರ್ವಹಣೆಗೆ ಸೂಕ್ತ ಪ್ರಕ್ರಿಯೆಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತವೆ ಎಂದು ನಂಬುವುದು ನಿರರ್ಥಕ. ಯಾವುದೇ ಅಪಾಯವಿಲ್ಲದೆ, ಅಗ್ಗವಾಗಿ ಮತ್ತು ಯಥೇಚ್ಛವಾಗಿ ವಿದ್ಯುತ್ ಉತ್ಪಾದನೆ ಮಾಡುವ ಇತರ ವಿಧಾನಗಳು ಲಭ್ಯವಿರುವಾಗ, ಪರಮಾಣು ಶಕ್ತಿಯ ಮೂಲಕವೇ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲು ಯಾಕಿಷ್ಟು ಒತ್ತು ನೀಡಲಾಗುತ್ತಿದೆ? ಹಲವು ದೇಶಗಳು ಸುರಕ್ಷಿತವಲ್ಲದ ಹಾಗೂ ಅತ್ಯಂತ ದುಬಾರಿಯಾಗಿರುವ ಬ್ರೀಡರ್ ರಿಯಾಕ್ಟರ್‌ಗಳನ್ನು ಕೈ ಬಿಡುತ್ತಿರುವಾಗ, ವಿದ್ಯುತ್ ಉತ್ಪಾದಿಸಲು ಇದೇ ತಂತ್ರಜ್ಞಾನಕ್ಕೆ ಒತ್ತು ನೀಡಲು ಕೇಂದ್ರದ ಅಣು ಶಕ್ತಿ ಇಲಾಖೆಯು ಈ ಹಠಮಾರಿತನದ ಧೋರಣೆಯನ್ನು ಏಕೆ ತಳೆಯುತ್ತಿದೆ? ಇದಕ್ಕೆ ಉತ್ತರ ಕಂಡುಕೊಳ್ಳಲು, ಪರಮಾಣು ರಿಯಾಕ್ಟರ್ ಹಾಗೂ ಪರಮಾಣು ಶಸ್ತ್ರಾಸ್ತ್ರಗಳ ಉತ್ಪಾದನೆ – ಇವುಗಳ ನಡುವಿನ ಸಂಬಂಧ ಹಾಗೂ ಉತ್ಪಾದನೆಯನ್ನು ನಿಯಂತ್ರಿಸುತ್ತಿರುವ ಭಾರತದ ಬಂಡವಾಳಶಾಹಿ ರಾಜ್ಯದ ಗುಣಲಕ್ಷಣಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಆಲೋಚಿಸಬೇಕಾಗುತ್ತದೆ.

### ‘ಶಾಂತಿ’ ಕಾಯ್ದೆ 2025ರಲ್ಲಿ ಏನಿದೆ?

‘ಶಾಂತಿ’ ಕಾಯ್ದೆ 2025, ಹಿಂದಿನ ಅಣು ಶಕ್ತಿ ಕಾಯ್ದೆ 1962 ಹಾಗೂ ಪರಮಾಣು ಹಾನಿಗೆ ನಾಗರಿಕ ಹೊಣೆಗಾರಿಕೆ ಕಾಯ್ದೆ 2010 (Civil Liability for Nuclear Damage Act 2010 - CLNDA-2010) ಕಾಯ್ದೆಗಳನ್ನು ಅನೂರ್ಜಿತಗೊಳಿಸಿದೆ. ಶಾಂತಿ ಕಾಯ್ದೆಯ ಮೂಲಕ ನಾಗರಿಕ ಪರಮಾಣು ಚಟುವಟಿಕೆಯಲ್ಲಿ ಖಾಸಗಿ ಕಾರ್ಪೋರೇಟ್ ಸಂಸ್ಥೆಗಳಿಗೆ ಅನಿರ್ಬಂಧಿತ ಅವಕಾಶ ನೀಡಲಾಗಿದೆ. ಇಲ್ಲಿಯತನಕ ಇದು ಕೇಂದ್ರ ಸರ್ಕಾರದ ಅಡಿಯಲ್ಲಿ ಮೀಸಲಾಗಿದ್ದ ಕ್ಷೇತ್ರವಾಗಿತ್ತು. ಈಗ ಪರಮಾಣು ಶಕ್ತಿ ಮೂಲಕ ವಿದ್ಯುತ್ ಉತ್ಪಾದನೆಗೆ ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು ಒಗ್ಗೂಡಿಸುವ, ಅಗತ್ಯ ಸಾಮಗ್ರಿಗಳನ್ನು ಒದಗಿಸುವ, ಅಣು ತ್ಯಾಜ್ಯದ ವಿಲೇವಾರಿ ಮಾಡುವ ಹೊಣೆಗಾರಿಕೆ ಮಾತ್ರ ಕೇಂದ್ರ ಸರ್ಕಾರದ್ದಾಗಿರುತ್ತದೆ. ಪರಮಾಣು ರಿಯಾಕ್ಟರ್‌ಗಳನ್ನು ಕಟ್ಟಿ, ಕೆಲಸ ಆರಂಭಿಸಿ, ವಿದ್ಯುತ್ ಉತ್ಪಾದಿಸಿ, ಗ್ರಿಡ್‌ಗಳಿಗೆ ವಿದ್ಯುತ್ ಸರಬರಾಜು ಮಾಡಿ, ಲಾಭಗಳಿಸುವುದು ಕಾರ್ಪೋರೇಟ್ ಸಂಸ್ಥೆಗಳಿಗೆ ದೊರಕಿರುವ ಬಳುವಳಿ. ಅಂದರೆ ಎಲ್ಲಾ ಹೊಣೆ ಕೇಂದ್ರ ಸರ್ಕಾರದ್ದು, ಲಾಭ ಮಾತ್ರ ಖಾಸಗೀ ಬಂಡವಾಳಗಾರರದ್ದು!

‘ಶಾಂತಿ’ ಕಾಯ್ದೆ 2025ರಿಂದ ಆಗಿರುವ ಬದಲಾವಣೆಗಳು ಇಂತಿವೆ: ಈ ಹಿಂದೆ, ಪರಮಾಣು ಸಲಕರಣೆಗಳ ಸರಬರಾಜಿಗೆ ಸಂಬಂಧಿಸಿರುವ ಹೊಣೆಗಾರಿಕೆಯ ಕಲಂನ್ನು ಕೈಬಿಡಲಾಗಿದೆ. ಅಂದರೆ, ಆ ಮೂಲಕ ಅಪಘಾತದ ಸಂದರ್ಭದಲ್ಲಿ, ದೋಷಪೂರಿತ ಸಲಕರಣೆಗಳನ್ನು ಸರಬರಾಜು ಮಾಡುವ ಕಂಪನಿಗಳು, ಮುಖ್ಯವಾಗಿ ಅಮೇರಿಕದ ಕಂಪೆನಿಗಳು ತಮ್ಮ ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ. ಭೂಪಾಲ್ ಅನಿಲ ದುರಂತದ ಸಂದರ್ಭದಲ್ಲಿ ಯೂನಿಯನ್ ಕಾರ್ಬೈಡ್ ಕಂಪನಿಯ ಮಾಲೀಕತ್ವ, ಪರಿಹಾರ ನೀಡಲು ದಶಕಗಳ ಸಮಯ ತೆಗೆದುಕೊಂಡಿರುವ ಕರಾಳ ಅನುಭವ ಎದುರಿಗಿದ್ದರೂ ಸಹ ಈ ಖಾಸಗಿ ಬಂಡವಾಳಗಾರರಿಗೆ ಈ ‘ಕಾಣಿಕೆ’ ನೀಡಲಾಗಿದೆ. ಆ ಹಿನ್ನೆಲೆಯಲ್ಲೇ CLNDA 2010 ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. CLNDA 2010ರ ಕಾಯ್ದೆಯ ಪ್ರಕಾರ ಪರಮಾಣು ಅಪಘಾತ ನಡೆದಾಗ ದೋಷಪೂರಿತ ಸಲಕರಣೆಗಳನ್ನು ಸರಬರಾಜು ಮಾಡಿದ ಕಂಪನಿಗಳು ಹೊಣೆ ಹೊರಬೇಕು ಹಾಗೂ ಬಾಧಿತರಿಗೆ ಪರಿಹಾರ ನೀಡುವ ಜವಾಬ್ದಾರಿ ಆಯಾ ಕಂಪೆನಿಗಳಿಗೆ ಸೇರಿದ್ದೇ ಆಗಿತ್ತು. ಆದರೆ, ಈಗ ಎಲ್ಲಾ ಕಂಪನಿಗಳನ್ನು ಈ ಮೂಲಭೂತ ಜವಾಬ್ದಾರಿಯಿಂದ ಮುಕ್ತಗೊಳಿಸಲಾಗಿದೆ. ಭವಿಷ್ಯದಲ್ಲಿ, ಕೇಂದ್ರ ಸರ್ಕಾರವು ‘ಪರಮಾಣು ಹೊಣೆಗಾರಿಕೆ ನಿಧಿ’ಯನ್ನು ಸ್ಥಾಪಿಸುತ್ತದೆ. ಅನಾಹುತ ಸಂಭವಿಸಿದಾಗ ಖಾಸಗಿ ಪರಮಾಣು ಸಂಸ್ಥೆಗಳು ನೀಡಬೇಕಾದ ಪರಿಹಾರದ ಮೊತ್ತವನ್ನು ನಿಗದಿ ಮಾಡಲಾಗುತ್ತದೆ. ಒಂದು ವೇಳೆ ಪರಿಹಾರ ನೀಡಬೇಕಾದ ಮೊತ್ತವು ನಿಗದಿತ ಪರಿಹಾರ ಮೊತ್ತಕ್ಕಿಂತ ಹೆಚ್ಚಾದಲ್ಲಿ, ಆಗ ಕೇಂದ್ರ ಸರ್ಕಾರವು ಮೇಲಿನ ನಿಧಿಯಿಂದ ಆ ಅಂತರವನ್ನು ಭರಿಸುತ್ತದೆ. ಅಂದರೆ, ಖಾಸಗಿ ಕಂಪನಿಗಳು ತಮ್ಮ ಲಾಭದಾಹಕ್ಕಾಗಿ ಎಸಗುವ ಅನಾಹುತಗಳಿಗೆ ಜನರ ತೆರಿಗೆ ಹಣದಿಂದ ಪರಿಹಾರ ನೀಡಲಾಗುತ್ತದೆ. ಖಾಸಗಿ ಕಾರ್ಪೋರೇಟ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರವು ಎಲ್ಲಾ ಬದ್ಧತೆಗಳಿಂದಲೂ ಮುಕ್ತಗೊಳಿಸಿದೆ. ಭಾರತದಲ್ಲಿ ಪರಮಾಣು ಶಕ್ತಿಗೆ ಸಂಬಂಧಪಟ್ಟಂತೆ ಇರುವ ನಿಯಂತ್ರಣ ಸಂಸ್ಥೆಗೆ ಶಾಸನಬದ್ಧವಾದ ಸ್ವಾತಂತ್ರ್ಯವನ್ನು ಮತ್ತು ಅಧಿಕಾರವನ್ನೂ ಈ ಕಾಯ್ದೆಯು ನೀಡಿಲ್ಲ. ಸುರಕ್ಷತೆಯಂತೂ ಸಂಪೂರ್ಣವಾಗಿ ಮರೀಚಿಕೆಯಾಗಿದೆ. ತುರ್ತು ಅಥವಾ ಇನ್ನಾವುದೇ ಸಂದರ್ಭದಲ್ಲೂ ಸಾರ್ವಜನಿಕರನ್ನು ಸರ್ಕಾರಗಳು ತೊಡಗಿಸಿಕೊಳ್ಳುವುದಿಲ್ಲ ಅಥವಾ ಜನರನ್ನು ಅಂತಹ ಸಂದರ್ಭಗಳಿಗಾಗಿ ತಯಾರು ಮಾಡಿರುವುದಿಲ್ಲ. ಬಲಿಯಾಗುವವರಲ್ಲಿ ದೊಡ್ಡ ಸಂಖ್ಯೆಯ ಜನರಿಗೆ ಕೋರ್ಟ್‌ಗಳು ಕೂಡ ಬಲು ದೂರ. ಇಂತಹ ಸಂದರ್ಭದಲ್ಲಿ, ಹೊಣೆಗಾರಿಕೆಗೆ ಸಂಬಂಧಿಸಿದ ಕಾನೂನನ್ನು ದುರ್ಬಲಗೊಳಿಸಿರುವುದು ಘೋರತರ ಅನ್ಯಾಯವಾಗಿದೆ. ಕಾಯ್ದೆಯ ಮತ್ತೊಂದು ಅನುಚ್ಛೇದದ ಪ್ರಕಾರ 20 ವರ್ಷದ ನಂತರ ಪರಮಾಣು ಅಪಘಾತಗಳಿಂದ ಉಂಟಾಗುವ ಆರೋಗ್ಯದ ಸಮಸ್ಯೆಗಳಿಗೆ ಪರಿಹಾರ ಕೇಳುವಂತಿಲ್ಲ. ಅಧ್ಯಯನದ ಪ್ರಕಾರ ವಿಕಿರಣಗಳಿಂದ ಉಂಟಾಗುವ ಆನುವಂಶಿಕ ಕಾಯಿಲೆಗಳು, ಕ್ಯಾನ್ಸರ್, 20–30 ವರ್ಷಗಳ ನಂತರ ಪ್ರಕಟಗೊಳ್ಳಬಹುದು. ಆದರೆ, ಅವಕ್ಕೆ ಯಾವುದೇ ಪರಿಹಾರ ಸಿಗುವುದಿಲ್ಲ. ಅಂದರೆ, ‘ಶಾಂತಿ’ ಕಾಯ್ದೆಯು ವಿಕಿರಣ ಪ್ರಭಾವಗಳ ಕುರಿತು ನಡೆದಿರುವ ವೈಜ್ಞಾನಿಕ ಅಧ್ಯಯನಗಳ ತಿಳುವಳಿಕೆಯನ್ನು ಪರಿಗಣಿಸುವುದಿಲ್ಲ.

### ಪರಮಾಣು ಕ್ಷೇತ್ರದ ಉದಾರೀಕರಣವು ಶಸ್ತ್ರಾಸ್ತ್ರ ಉದ್ಯಮಕ್ಕೆ ವರದಾನ

ಪರಮಾಣು ಕ್ಷೇತ್ರದ ಉದಾರೀಕರಣ ಕೇವಲ ವಿದ್ಯುತ್ ಉತ್ಪಾದನೆಗೆ ಮಾತ್ರವೇ? ಅಥವಾ ಭಾರತದ ಕಾರ್ಪೋರೇಟ್ ದೈತ್ಯರ ಶಸ್ತ್ರಾಸ್ತ್ರ ಉದ್ಯಮಕ್ಕೆ ಮತ್ತಷ್ಟು ಆಕರ್ಷಕ ಕೊಡುಗೆ ನೀಡುವುದಕ್ಕಾಗಿಯೇ? ಟಾಟಾ, ಅದಾನಿ, ಮಹೀಂದ್ರಾ, ಎಲ್‌ಅಂಡ್‌ಟಿ ಇತ್ಯಾದಿಗಳು ಈಗಾಗಲೇ ಶಸ್ತ್ರಾಸ್ತ್ರ ಉದ್ದಿಮೆಗಳನ್ನು ನಡೆಸುತ್ತಿವೆ. ಟಾಟಾ ಈಗಾಗಲೆ ಅಮೇರಿಕದ ದೈತ್ಯ ಲಾಕ್‌ಹೀಡ್ ಮಾರ್ಟಿನ್ ಸಹಯೋಗದೊಂದಿಗೆ ಶಸ್ತ್ರಾಸ್ತ್ರ ಉದ್ದಿಮೆಯಲ್ಲಿ ತೊಡಗಿದೆ. ಅಮೇರಿಕದ ವಿಮಾನಯಾನ ಉದ್ದಿಮೆ ಬೋಯಿಂಗ್, ಇಂಗ್ಲೆಂಡ್‌ನ ಬಿಎಇ ಸಿಸ್ಟಮ್ಸ್ ಹಾಗೂ ಭಾರತದ ಮಹೀಂದ್ರಾಗಳು ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ ಜಂಟಿಯಾಗಿ ತೊಡಗಿವೆ. 2025ರ ಮಾರ್ಚ್‌ನಲ್ಲಿ, ಅಮೇರಿಕದ ಇಂಧನ ಇಲಾಖೆಯು ಎಸ್.ಎಂ.ಆರ್–300 ಎಂಬ ರಿಯಾಕ್ಟರ್ ತಂತ್ರಜ್ಞಾನವನ್ನು ಭಾರತದ ಕಂಪನಿಗಳಿಗೆ ಮಾರಾಟ ಮಾಡಲು, ‘ಹೊಲ್ಟೆಕ್ ಇಂಟರ್‌ನ್ಯಾಷನಲ್’ಗೆ ರಫ್ತು ಪರವಾನಗಿ ನೀಡಿತ್ತು. ಅಮೇರಿಕ ಹಾಗೂ ಭಾರತ ಸರ್ಕಾರಗಳು, ಇಂಡೊ–ಯುಎಸ್ ನಾಗರಿಕ ಪರಮಾಣು ಒಪ್ಪಂದವನ್ನು ಸಂಪೂರ್ಣವಾಗಿ ಜಾರಿಗೆ ತರಲು ಒಪ್ಪಿವೆ. ಇದರಿಂದ ಅಮೇರಿಕಕ್ಕೆ ಅಪಾರ ಲಾಭ ಮತ್ತು ಭಾರತದ ಜನರಿಗೆ ಪಂಗನಾಮವಾಗಲಿದೆ.

### ಮಾತು ಮತ್ತು ವಾಸ್ತವಗಳ ನಡುವಿನ ಅಂತರ

ಪರಮಾಣು ಶಕ್ತಿಯನ್ನು ‘ಶುದ್ಧವಾದ ಶಕ್ತಿ’ ಎಂದು ಪ್ರಧಾನಮಂತ್ರಿ ಬಣ್ಣಿಸಿದ್ದಾರೆ. ಆದರೆ, ಇಲ್ಲಿ ಬಳಸುವ ಧಾತುಗಳು ಹೊರಸೂಸುವ ವಿಕಿರಣಗಳು ಖಾಯಂ ಸ್ವರೂಪದ, ದೊಡ್ಡಮಟ್ಟದ, ಗಂಭೀರವಾದ ಅಪಾಯಗಳಿಗೆ ದಾರಿ ಮಾಡಿಕೊಡುತ್ತವೆ. ಈ ಪರಮಾಣು ತ್ಯಾಜ್ಯಗಳು ಬಹಳ ಕಾಲ ವಿಕಿರಣವನ್ನು ಸೂಸುತ್ತಾ ಹಾಗೆಯೇ ಇರುತ್ತವೆ. ಇದರ ಪರಿಣಾಮಗಳು ಕೆಲವು ಗಂಟೆಗಳಿಂದ, ದಿನಗಳಿಂದ ಹಿಡಿದು, ಶತಮಾನ–ಸಹಸ್ರಮಾನಗಳವರೆಗೆ ಉಂಟಾಗುತ್ತಲೇ ಇರುತ್ತವೆ. ಶತಶತಮಾನಗಳವರೆಗೆ ಆನುವಂಶಿಕ ಕಾಯಿಲೆಗಳಿಂದ ಬಾಧಿತರು ನರಳಬೇಕಾಗುತ್ತದೆ. ವಿಕಿರಣ ಸೋರಿಕೆ, ಅಪಘಾತ ಹಾಗೂ ತ್ಯಾಜ್ಯಗಳ ಅಪವಿಲೇವಾರಿ–ಇಂತಹ ಸಂದರ್ಭಗಳಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ. ಪ್ರಧಾನಿ ಮೋದಿ ಅವರು ಹೇಳಿದ ಹಾಗೆ, ಇದು ಸ್ವಚ್ಛವಾದ ಶಕ್ತಿ ಹೇಗಾಗುತ್ತದೆ?

### ಕೊನೆಯ ಮಾತು

‘ಶಾಂತಿ’ ಕಾಯ್ದೆಯು ಖಂಡಿತವಾಗಿಯೂ ಶಾಂತಿ ಸ್ಥಾಪನೆಗಾಗಿ ಅಲ್ಲ. ಬದಲಿಗೆ ಸಾಂದ್ರೀಕೃತ ಯುರೇನಿಯಂ(Enriched Uranium) ಧಾತುವನ್ನು ತಯಾರಿಸಿ, ಪರಮಾಣು ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವ ಉದ್ದೇಶವು ಈ ಕಾಯ್ದೆಯು ಹೊಂದಿದೆ. ಭಾರತವು ಸಾಮ್ರಾಜ್ಯಶಾಹಿ ಜಗತ್ತಿನಲ್ಲಿ ಪರಮಾಣು ಶಕ್ತಿಯುಳ್ಳ ದೇಶವಾಗಿ ಹೊರಹೊಮ್ಮುತ್ತಿದೆ. ಭಾರತದ ಕಾರ್ಪೋರೇಟ್ ದೊರೆಗಳಿಗೆ ವಿದೇಶಿ ದೈತ್ಯರ ಜೊತೆಗೆ ಒಪ್ಪಂದ ಮಾಡಿಕೊಂಡು, ಪರಮಾಣು ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಿ, ಅತಿಹೆಚ್ಚು ಲಾಭ ಮಾಡುವುದಕ್ಕಾಗಿಯೇ ಈ ‘ಶಾಂತಿ’ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ವಿದ್ಯುತ್ ಉತ್ಪಾದನೆ ಎನ್ನುವುದು ಒಂದು ನೆಪ ಮಾತ್ರ. ಇದು ವಿಶ್ವದಲ್ಲಿ ಇನ್ನಷ್ಟು ಅಶಾಂತಿ ಸೃಷ್ಟಿಸುವುದಕ್ಕಾಗಿಯೇ ಎಂದು ಹೇಳಿದರೆ ತಪ್ಪಾಗಲಾರದು. ■



**ಯಾರೋ ದೊಡ್ಡ ಬಂಡವಾಳಶಾಹಿಗಳ ನಡುವಣ ಮಾರುಕಟ್ಟೆಗಾಗಿ ನಡೆಯುವ ಯುದ್ಧಕ್ಕೆ ಏಕೆ ಮುಗ್ಧ ಜನರ ರಕ್ತಪಾತವಾಗಬೇಕು? ಕಾರ್ಮಿಕರಿಗೆ ವಿಶ್ವ ಭ್ರಾತೃತ್ವವೆಂಬುದು ಕೇವಲ ಒಂದು ಕನಸಲ್ಲ.ವಿಶ್ವ ಶಾಂತಿ ಎಂಬುದು ಕೇವಲ ಒಂದು ಸುಂದರ ಪದವಲ್ಲ. ಎಲ್ಲರೂ ಸೇರಿ ಒಂದಾದಲ್ಲಿ ಜೀವನದಲ್ಲಿ ಅವರು ಸಾಧಿಸಲಾಗದ್ದು ಯಾವುದೂ ಇಲ್ಲ. ಮಹಿಳೆಯರೇ ಸಿದ್ಧರಾಗಿ!**

ಕ್ಲಾರ ಜೆಟ್ಕಿನ್
( ಅಂತರರಾಷ್ಟ್ರೀಯ ಮಹಿಳಾ ದಿನದ ರೂವಾರಿ)

# ಸಾರ್ವತ್ರಿಕ ಮುಷ್ಕರ : ದೇಶಾದ್ಯಂತ ಲೇಬರ್ ಕೋಡ್ ವಿರುದ್ಧ ದುಡಿಯುವ ವರ್ಗದ ಸಮರ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕಾರ್ಪೋರೇಟ್ ಕಂಪೆನಿಗಳ ಹಿತದೃಷ್ಟಿಯಿಂದ ಕಾರ್ಮಿಕ ವರ್ಗದ ಚಳುವಳಿಯನ್ನು ದುರ್ಬಲಗೊಳಿಸಲು ಜಾರಿಗೊಳಿಸುತ್ತಿರುವ 4 ಕಾರ್ಮಿಕ ಸಂಹಿತೆಗಳನ್ನು (ಲೇಬರ್ ಕೋಡ್) ವಿರೋಧಿಸಿ ಫೆಬ್ರವರಿ 12, 2026 ರಂದು ದೇಶದಾದ್ಯಂತ ಸಾರ್ವತ್ರಿಕ ಮುಷ್ಕರವನ್ನು ನಡೆಸಲು ದೆಹಲಿಯ ರಾಷ್ಟ್ರೀಯ ಸಮಾವೇಶದಲ್ಲಿ 10 ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದವು. ರೈತ ಸಂಘಟನೆಗಳ ಒಕ್ಕೂಟ ವೇದಿಕೆಯಾದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಬೆಂಬಲ ನೀಡಿ, ಸಕ್ರಿಯವಾಗಿ ಭಾಗವಹಿಸಲು ಕರೆ ನೀಡಿತು. ತದನಂತರದಲ್ಲಿ



ಕಲಬುರಗಿ

ದೇಶದಾದ್ಯಂತ ರಾಜ್ಯ-ಜಿಲ್ಲಾ ಮಟ್ಟದ ಸಮಾವೇಶಗಳ ಮೂಲಕ ಕಾರ್ಮಿಕರು ಮತ್ತು ರೈತರು ಈ ಮುಷ್ಕರಕ್ಕೆ ಅಣಿಯಾದರು. ಕೈಗಾರಿಕೆಗಳ ಮುಂದೆ ಗೇಟ್ ಮೀಟಿಂಗ್, ಕೈಗಾರಿಕಾ ಪ್ರದೇಶಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಜಾಥಾ, ಪ್ರಚಾರ ಸಭೆಗಳು ನಡೆದವು. ಫೆಬ್ರವರಿ 12 ರಂದು ದೇಶದಾದ್ಯಂತ ಸುಮಾರು 30 ಕೋಟಿಗೂ ಹೆಚ್ಚು ಕಾರ್ಮಿಕರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ದೇಶದ 600 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಸರ್ವವ್ಯಾಪಕವಾಗಿ ಜರುಗಿದ ಮುಷ್ಕರ, ಹಿಂದಿನ ಎಲ್ಲಾ ಮುಷ್ಕರಗಳನ್ನು ಮೀರಿಸಿತ್ತು. ಕಲ್ಲಿದ್ದಲು, ಎನ್‌ಎಂಡಿಸಿ ಲಿಮಿಟೆಡ್, ಕಲ್ಲಿದ್ದಲು ಅಲ್ಲದ ಖನಿಜಗಳಾದ ಕಬ್ಬಿಣದ ಅದಿರು, ತಾಮ್ರ, ಬಾಕ್ಸೈಟ್, ಅಲ್ಯೂಮಿನಿಯಂ, ಚಿನ್ನದ ಗಣಿಗಳು ಇತ್ಯಾದಿ, ಉಕ್ಕು, ಬ್ಯಾಂಕುಗಳು, ಎಲ್‌ಐಸಿ, ಜಿಐಸಿ, ಪೆಟ್ರೋಲಿಯಂ, ವಿದ್ಯುತ್, ಅಂಚೆ, ಗ್ರಾಮೀಣ ಡಾಕ್ ಸೇವಕರು, ಟೆಲಿಕಾಂ, ಸಿಮೆಂಟ್, ಬಂದರು ಮತ್ತು ಡಾಕ್ ಟೀ ತೋಟಗಳು, ಸೆಣಬಿನ ಗಿರಣಿಗಳು, ಸಾರ್ವಜನಿಕ ಸಾರಿಗೆ, ಅನೇಕ ಬಹುರಾಷ್ಟ್ರೀಯ ಕಂಪೆನಿಗಳು ಸೇರಿದಂತೆ ದೇಶದ ಹೆಚ್ಚಿನ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು/ಉದ್ಯೋಗಿಗಳು ದೊಡ್ಡ ಪ್ರಮಾಣದಲ್ಲಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ರಕ್ಷಣಾ ವಲಯದ ನೌಕರರು ಮುಷ್ಕರವನ್ನು ಬೆಂಬಲಿಸಿ ಒಂದು ಗಂಟೆ ಕೆಲಸ ಕಡಿತಗೊಳಿಸಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದರು. ದೆಹಲಿಯಲ್ಲಿ, ಕಾರ್ಮಿಕ ಸಂಘಗಳು ಮುಷ್ಕರದ ಭಾಗವಾಗಿ ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ ಮೆರವಣಿಗೆಗಳನ್ನು ಆಯೋಜಿಸಿದ್ದವು; ಜಂತರ್ ಮಂತರ್‌ನಲ್ಲಿ ಬೃಹತ್ ಸಭೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕದಲ್ಲಿ ಸಹ ನಮ್ಮ ಕಾರ್ಮಿಕ ಮುಂದಳ ಎಐಯುಟಿಯುಸಿ ಮತ್ತು ರೈತ-ಕೃಷಿ ಕಾರ್ಮಿಕರ ಸಂಘಟನೆಯಾದ ಎಐಕೆಕೆಎಂಎಸ್ ಈ ಮುಷ್ಕರದಲ್ಲಿ ಮುಂಚೂಣಿ ಪಾತ್ರವಹಿಸುವ ಮೂಲಕ ಸಕ್ರಿಯವಾಗಿ ಪಾಲ್ಗೊಂಡವು.

**ಟೌನ್‌ಹಾಲ್ ಮುಂದೆ ಪ್ರತಿಭಟನೆ, ಮುಖಂಡರ ಬಂಧನ** :

ರಾಜಧಾನಿ ಬೆಂಗಳೂರಿನಲ್ಲಿ ಮುಷ್ಕರದ ಕಾವು ತೀವ್ರವಾಗಿತ್ತು. ನಗರದಲ್ಲಿ ಮೆರವಣಿಗೆ ಹಾಗೂ ಪ್ರತಿಭಟನೆಗಳನ್ನು ನಿರ್ಬಂಧಿಸಿದ್ದರಿಂದ ಲಕ್ಷಾಂತರ ಕಾರ್ಮಿಕರು ಕೈಗಾರಿಕಾ ಪ್ರದೇಶಗಳಲ್ಲಿ, ವಿವಿಧ ಪ್ರದೇಶಗಳಲ್ಲಿ ಪ್ರತಿಭಟನೆಗಳನ್ನು ಮಾಡಬೇಕಾಯಿತು. ಆದಾಗ್ಯೂ ನಗರದ ಟೌನ್‌ಹಾಲ್ ಮುಂದೆ ನೂರಾರು ಕಾರ್ಮಿಕರು ಸೇರುತ್ತಿದ್ದಂತೆ, ಪೋಲೀಸರು ವಿವಿಧ ಸಂಘಟನೆಗಳ ಮುಖಂಡರು ಮತ್ತು ಕಾರ್ಮಿಕರನ್ನು ಬಂಧಿಸಿ ನಗರದ ಹೊರವಲಯಕ್ಕೆ ಕರೆದೊಯ್ದು, ಸಂಜೆವರೆಗೂ ಬಂಧನದಲ್ಲಿರಿಸಿದ್ದರು. ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕೆ.ಸೋಮಶೇಖರ್, ಉಪಾಧ್ಯಕ್ಷರಾದ ಕೆ.ವಿ.ಭಟ್, ಡಿ. ನಾಗಲಕ್ಷ್ಮಿ, ಷಣ್ಮುಗಂ, ರಮಾ ಟಿ.ಸಿ. ಬಂಧನಕ್ಕೊಳಗಾದರು. 'ಲೇಬರ್ ಕೋಡ್ ರದ್ದಾಗಲಿ!', 'ರಾಜ್ಯ ಸರ್ಕಾರ ನಿಯಮಗಳನ್ನು ರೂಪಿಸುವುದು ನಿಲ್ಲಿಸಲಿ!', 'ವಿದ್ಯುತ್ ಮಸೂದೆ, ಜಿ ರಾಮ್ ಜಿ ಕಾಯ್ದೆ ವಾಪಸ್ಸಾಗಲಿ' ಇತ್ಯಾದಿ ಘೋಷಣೆಗಳನ್ನು ರಿಂಗಣಿಸುತ್ತಿದ್ದವು.

ಮೈಸೂರು, ಮಂಡ್ಯ, ಚಾಮರಾಜನಗರ, ಬಳ್ಳಾರಿ, ದಾವಣಗೆರೆ, ರಾಯಚೂರು, ಕಲ್ಬುರ್ಗಿ, ಯಾದಗಿರಿ, ಬೀದರ್, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಶಿವಮೊಗ್ಗ, ವಿಜಯನಗರ, ತುಮಕೂರು ಸೇರಿದಂತೆ 31 ಜಿಲ್ಲೆಗಳಲ್ಲಿ ಸಹಸ್ರಾರು ಕಾರ್ಮಿಕರ ಮತ್ತು ರೈತರು ಸಮರೋತ್ಸಾಹದಿಂದ ಸೇರಿದ ಬೃಹತ್ ಮೆರವಣಿಗೆಗಳು, ಸಭೆಗಳು ಜರುಗಿದವು. ಅಲ್ಲಲ್ಲಿ ಮಾನವ ಸರಪಳಿ ರಚಿಸಿ, ಪ್ರಮುಖ ರಸ್ತೆ, ವೃತ್ತಗಳಲ್ಲಿ ರಸ್ತೆತಡೆ ನಡೆಸಿದರು.

ಕೇಂದ್ರ ಸರ್ಕಾರ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ನವೆಂಬರ್ 21, 2025 ರಿಂದ ಅನುಷ್ಠಾನಗೊಳಿಸಲು ಅಧಿಸೂಚನೆ ಹೊರಡಿಸಿರುವುದರ ವಿರುದ್ಧ, ಬೀಜ ಕರಡು ಮಸೂದೆ, ಜಿ ರಾಮ್ ಜಿ ಕಾಯ್ದೆ ಮತ್ತು ವಿದ್ಯುತ್ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು, ವಿಮಾ ಕಂಪನಿಗಳಲ್ಲಿ ಶೇ.100 ರಷ್ಟು ವಿದೇಶಿ ನೇರ ಹೂಡಿಕೆಯ ನೀತಿಯನ್ನು ಹಿಂಪಡೆಯಬೇಕು, ಅಂಗನವಾಡಿ, ಆಶಾ, ಬಿಸಿಯೂಟ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರನ್ನಾಗಿ ಖಾಯಂಗೊಳಿಸಬೇಕು, ಭಾರತೀಯ ರೈತರ ಹಿತಾಸಕ್ತಿ ಬಲಿ ಕೊಡುವ ಯುಎಸ್‌ಎ-ಭಾರತ ವ್ಯಾಪಾರ ಒಪ್ಪಂದ ಬೇಡ, ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಸೇವೆಗಳ ಖಾಸಗೀಕರಣ ಹಿಂಪಡೆಯಬೇಕು ಮುಂತಾದ ಹಕ್ಕೊತ್ತಾಯಗಳನ್ನು ಮುಂದಿಟ್ಟುಕೊಂಡು ದುಡಿಯುವ ಜನರು ಈ ಮುಷ್ಕರಕ್ಕೆ ಮುಂದಾಗಿದ್ದರು.

ಅಧಿಸೂಚಿತ ಕಾರ್ಮಿಕ ಸಂಹಿತೆಗಳು ಮತ್ತು ಕರಡು ನಿಯಮಗಳು ಸಾಮೂಹಿಕ ಚೌಕಾಸಿಯನ್ನು ಹತ್ತಿಕ್ಕುವ, ಮುಷ್ಕರದ ಹಕ್ಕನ್ನು ಕಸಿದುಕೊಳ್ಳುವ, ಸುಮಾರು ಶೇ.70 ರಷ್ಟು ಕಾರ್ಖಾನೆಗಳನ್ನು ಕಾರ್ಮಿಕ ಕಾನೂನು ವ್ಯಾಪ್ತಿಯಿಂದ ಹೊರಗಿಟ್ಟು, ಬಹುಪಾಲು ಕಾರ್ಮಿಕರನ್ನು ಔದ್ಯೋಗಿಕ ಸುರಕ್ಷತೆಯ ರಕ್ಷಣೆಯಿಂದ ಮತ್ತು ಸಾಮಾಜಿಕ ಭದ್ರತೆಯಿಂದ ಹೊರಹಾಕುವ, ರಾಜಿ ಕಾರ್ಯವಿಧಾನಗಳ ಮೂಲಕ ಅಸ್ತಿತ್ವದಲ್ಲಿರುವ ಹಕ್ಕುಗಳು ಮತ್ತು ವೇತನ ರಕ್ಷಣೆಗಳನ್ನು ನಾಶಪಡಿಸುವ ಹುನ್ನಾರವು ಹೊಸ 4 ನೀತಿ ಸಂಹಿತೆಗಳಲ್ಲಿದೆ. ಜಿ ರಾಮ್ ಜಿ ಕಾಯ್ದೆ ಗ್ರಾಮೀಣ ಉದ್ಯೋಗ ಖಾತರಿಗೆ ಕತ್ತರಿ ಹಾಕಿದರೆ, ಬೀಜ ಮಸೂದೆಯು ರೈತರ ಬೀಜ ಹಕ್ಕುಗಳನ್ನು ಹರಣಗೊಳಿಸುತ್ತದೆ ಮತ್ತು ಒಟ್ಟಾರೆಯಾಗಿ ಕೃಷಿಯನ್ನು ಕಾರ್ಪೋರೇಟ್ ಕಪಿಮುಷ್ಟಿಗೆ ಸಿಲುಕಿಸುತ್ತದೆ. ನಿಯತ ಸ್ವರೂಪದ ಹಾಗೂ ಅಗತ್ಯ ಕೆಲಸಗಳನ್ನು ಖಾಯಂ ನೌಕರರ ಮೂಲಕ ಪಡೆಯಬೇಕೆಂಬುದಕ್ಕೆ ಶಾಶ್ವತವಾಗಿ ಎಳ್ಳು ನೀರು ಬಿಟ್ಟು, ಫಿಕ್ಸೆಡ್ ಟರ್ಮ್ ಎಂಪ್ಲಾಯ್‌ಮೆಂಟ್ ಹೆಸರಿನಲ್ಲಿ ಗುತ್ತಿಗೆ ಪದ್ಧತಿಯನ್ನು ಕಾನೂನುಬದ್ಧಗೊಳಿಸಲಾಗುತ್ತಿರುವುದರ ವಿರುದ್ಧ ಕಾರ್ಮಿಕವರ್ಗ ಸಿಡಿದೆದ್ದಿದೆ. ಆದ್ದರಿಂದಲೇ ದುಡಿಯುವ ಜನತೆ ಸಾರ್ವತ್ರಿಕ ಮುಷ್ಕರ ನಡೆಸಿದೆ.

ಸ್ಕೀಂ ನೌಕರರಾದ ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಮಿಕರನ್ನು ಸರ್ಕಾರಿ ನೌಕರರ ಸ್ಥಾನಮಾನ ನೀಡದೆ, ಕನಿಷ್ಠ ವೇತನ ಮತ್ತು ಪಿಎಫ್, ಇಎಸ್‌ಐ, ನಿವೃತ್ತಿ ಪರಿಹಾರಗಳನ್ನು ಒದಗಿಸದೆ ಬಿಡಿಗಾಸಿನಲ್ಲಿ ದುಡಿಸಿಕೊಂಡು ಶೋಷಿಸುತ್ತಿದೆ. ಗುತ್ತಿಗೆ ಕಾರ್ಮಿಕರು, ನಿರ್ಮಾಣ ಕಾರ್ಮಿಕರು, ಬೀಡಿ ಕಾರ್ಮಿಕರು, ಗೃಹ ಕಾರ್ಮಿಕರು, ವಲಸೆ ಕಾರ್ಮಿಕರು, ಗಿಗ್ ಪ್ಲಾಟ್‌ಫಾರ್ಮ್ ಕಾರ್ಮಿಕರು, ಅಪಾರ ಸಂಖ್ಯೆಯ ಅನೌಪಚಾರಿಕ, ಅಸಂಘಟಿತ ಕಾರ್ಮಿಕರಿಗೆ ಭದ್ರತೆ ಒದಗಿಸದೆ ನಿರ್ದಯ ಶೋಷಣೆಗೆ ಗುರಿ ಮಾಡಿರುವ ಸರ್ಕಾರದ ಧೋರಣೆ ವಿರುದ್ಧ ಈ ಮುಷ್ಕರವನ್ನು ಸಂಘಟಿಸಲಾಗಿತ್ತು.



ಬಂಧನಕ್ಕೊಳಗಾದವರು 1.ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕೆ.ಸೋಮಶೇಖರ್, 2. ಉಪಾಧ್ಯಕ್ಷರಾದ ಷಣ್ಮುಗಂ, 3. ಉಪಾಧ್ಯಕ್ಷರಾದ ರಮಾ ಟಿ.ಸಿ.

ಶೋಷಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಧಿಕಾರಕ್ಕೆ ಬರುವ ಯಾವುದೇ ಸರ್ಕಾರವಾಗಲೀ ಬಂಡವಾಳಶಾಹಿಗಳ ಹಿತ ಕಾಪಾಡಲು ದುಡಿಯುವ ಜನರನ್ನು ಬಲಿಕೊಟ್ಟು ಇಂತಹ ಕಾರ್ಮಿಕ ವಿರೋಧಿ-ಜನ ವಿರೋಧಿ ನೀತಿಗಳನ್ನು ಪಾಲಿಸುತ್ತದೆ. ಆದ್ದರಿಂದ ಈ ಅನ್ಯಾಯ, ಅಸಮಾನತೆ, ದೌರ್ಜನ್ಯ ಮತ್ತು ಕ್ರೂರ ಶೋಷಣೆ ಮೇಲೆ ನಿಂತಿರುವ ಈ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು, ಅದರ ಜಾಗದಲ್ಲಿ ಮಾನವನಿಂದ ಮಾನವನ ಮೇಲೆ ನಡೆಯುವ ಎಲ್ಲಾ ರೀತಿಯ ಶೋಷಣೆಯನ್ನು ಕೊನೆಗಾಣಿಸಿ, ಎಲ್ಲರಿಗೂ ಘನತೆಯ ಬದುಕನ್ನು ಖಾತ್ರಿಪಡಿಸುವ, ಉದಾತ್ತ ನೀತಿ-ಸಂಸ್ಕೃತಿಯ ಬುನಾದಿಯ ಮೇಲೆ ಅರಳುವ ಸಮಾಜವಾದಿ ವ್ಯವಸ್ಥೆಯೊಂದೇ ಏಕೈಕ ಪರಿಹಾರವೆಂಬುದನ್ನು ಕಾರ್ಮಿಕವರ್ಗ ಅರಿಯಬೇಕಿದೆ. ಈ ರೀತಿ ಸಮಾಜವನ್ನು ಆಮೂಲಾಗ್ರವಾಗಿ ಬದಲಾಯಿಸುವ ಕಡೆಗೆ, ಬಂಡವಾಳಶಾಹಿಗಳ ಸರ್ವಾಂಗೀಣ ದಾಳಿಯ ವಿರುದ್ಧ ಎಲ್ಲಾ ಬಲವನ್ನು ಒಗ್ಗೂಡಿಸಿಕೊಂಡು ಬಲಿಷ್ಠ ಪ್ರತಿರೋಧ ಒಡ್ಡಲು ಈ ಮುಷ್ಕರಗಳು ಸ್ಫೂರ್ತಿಯಾಗಲಿ. ■

## ರಾಜ್ಯ ಬಜೆಟ್‌ಗೂ ಮುನ್ನ ಸ್ಕೀಂ ನೌಕರರ ಪ್ರತಿಭಟನೆ

### ಅಂಗನವಾಡಿ ನೌಕರರ ಪ್ರತಿಭಟನೆ



ಬೆಂಗಳೂರು

1.ರಾಜ್ಯ ಬಜೆಟ್‌ನಲ್ಲಿ ಅಂಗನವಾಡಿ ನೌಕರರ ಗೌರವ ಧನವನ್ನು ರೂ. 15,000 ಹೆಚ್ಚಿಸಬೇಕು.

2.ನಿವೃತ್ತಿ ಪರಿಹಾರವಾಗಿ ರೂ. 2ಲಕ್ಷ ನೀಡಬೇಕು.

3.ಅಂಗನವಾಡಿ ನೌಕರರನ್ನು ಸರ್ಕಾರದ ಸಿ ಮತ್ತು ಡಿ ಗ್ರೂಪ್ ನೌಕರ-ರೆಂದು ಪರಿಗಣಿಸಬೇಕು.

ಮುಂತಾದ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಎಐಯುಟಿಯುಸಿ ಗೆ ಸಂಯೋಜಿತವಾದ ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘದ ರಾಜ್ಯ ಸಮಿತಿಯಿಂದ 26-02-2026 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

### ಬಿಸಿ ಊಟ ಕಾರ್ಮಿಕರ ಪ್ರತಿಭಟನೆ




ಧಾರವಾಡ

1.ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಡುಗೆಯವರಿಗೆ ಕನಿಷ್ಠ ವೇತನವಿದ್ದು ಅದರಲ್ಲಿ ಜಾರಿಯಾಗಿರುವಂತೆ ಬಿಸಿ ಊಟ ಕಾರ್ಮಿಕರಿಗೂ ಕನಿಷ್ಠ ವೇತನ ಜಾರಿ ಮಾಡಿ.

2.ಈ ಬಾರಿಯ ಬಜೆಟ್‌ನಲ್ಲಿ ಗೌರವ ಧನ ಹೆಚ್ಚಿಸಿ.

3.ಮಾಸಿಕ ವೇತನವನ್ನು ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ಕಾರ್ಮಿಕರ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು, ಪ್ರತಿ ತಿಂಗಳು ವೇತನ ಚೀಟಿ ನೀಡಬೇಕು.

ಮುಂತಾದ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಎಐಯುಟಿಯುಸಿಗೆ ಸಂಯೋಜನೆಗೊಂಡ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದಿಂದ ಪ್ರತಿಭಟನೆ.

## ಎಐಡಿಎಸ್‌ಓ -ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಸಂಘಟಿತ

# 'ನಮ್ಮೂರ ಶಾಲೆ ಉಳಿಸಲು' ರಾಜ್ಯಮಟ್ಟದ ಪೋಷಕರು-ವಿದ್ಯಾರ್ಥಿ ಸಮಾವೇಶ

**40,000** ಸರ್ಕಾರಿ ಶಾಲೆಗಳನ್ನು ಕೊಲ್ಲುವ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ರದ್ದುಗೊಳಿಸಿ, 'ನಮ್ಮೂರ ಶಾಲೆ' ಉಳಿಸಲು ಎಐಡಿಎಸ್‌ಓ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳ ನೇತೃತ್ವದಲ್ಲಿ ರಾಜ್ಯ ಮಟ್ಟದ ವಿದ್ಯಾರ್ಥಿ ಮತ್ತು ಪೋಷಕರ ಸಮಾವೇಶವನ್ನು ನಗರದ ಗಾಂಧಿ ಭವನದಲ್ಲಿ ಸಂಘಟಿಸಲಾಗಿತ್ತು. ಸಮಾವೇಶಕ್ಕೆ ಬಂದಂಥ ನಾಡಿನ ಅನೇಕ ಚಿಂತಕರು ಮಾತನಾಡಿ ಸರ್ಕಾರಿ ಶಾಲೆ ಇಲ್ಲದ ಊರನ್ನು ಸೃಷ್ಟಿಸುವುದು ಯುದ್ಧಕ್ಕಿಂತ ಕ್ರೂರವಾದದ್ದು ಎಂಬ ಅಭಿಮತ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶಿಕ್ಷಣ ತಜ್ಞರಾದ ಪ್ರೊ. ನಿರಂಜನಾರಾಧ್ಯ ಮಾತನಾಡಿ, ಕೇಂದ್ರ ಬಿಜೆಪಿ ಸರ್ಕಾರ ಜಾರಿಗೊಳಿಸಿದ



ಹಿರಿಯ ಸಾಹಿತಿಗಳಾದ ಪ್ರೊ ಎಸ್. ಜಿ. ಸಿದ್ದರಾಮಯ್ಯ

ಎನ್‌ಇಪಿ 2020 ಯನ್ನೇ ಕೆ.ಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಿನಲ್ಲಿ ಪ್ರಸ್ತುತ ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿದೆ. ಇದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಬಿಜೆಪಿ ಸರ್ಕಾರವು 13,800 ಶಾಲೆಗಳನ್ನು ಮುಚ್ಚಲು ಹೊರಟಾಗ ವಿರೋಧಿಸಿದ್ದ ಕಾಂಗ್ರೆಸ್ ಸರ್ಕಾರವೇ ಈಗ 23,000 ಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚಲು ಹೊರಟಿದೆ. ಸಚಿವರು ಸದನದಲ್ಲಿ ಕುಳಿತೇ ಸುಳ್ಳು ಹೇಳುತ್ತಿರುವುದನ್ನು ನಾವು ಹಿಂದೆ ಎಂದೂ ಕಂಡಿರಲಿಲ್ಲ. ಒಂದೇ ಒಂದು ಶಾಲೆ ಮುಚ್ಚುವುದಿಲ್ಲ ಎಂದು ಹೇಳಿ, ಅದೇ ದಿನ ಚನ್ನಪಟ್ಟಣದ 7 ಶಾಲೆಗಳನ್ನು ಮುಚ್ಚುವ ಆದೇಶ ಹೊರಡಿಸಿದರು. ಹಿಂಬಾಗಿಲಿನಿಂದ ಹೊಸ ಶಿಕ್ಷಣ ನೀತಿ 2020ನ್ನು ಚಾಚೂ ತಪ್ಪದೇ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸುತ್ತಿದೆ ಎಂದು ಹೇಳಿದರು.

ಅಕ್ಕ ಮಹಾದೇವಿ ಮಹಿಳಾ ವಿಶ್ವ ವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಸಬೀಹಾ ಭೂಮಿ ಗೌಡ ಮಾತನಾಡಿ, ಶಿಕ್ಷಣವು ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆ ನೀಡಿ ಮೌಢ್ಯ ಹಾಗೂ ದಾಸ್ಯದಿಂದ ಹೊರ ತರುತ್ತದೆ. ಅಂತಹ ಶಿಕ್ಷಣವನ್ನು ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಮೂಲಕ ತಳ ಸಮುದಾಯದಕ್ಕೆ ದಕ್ಕದ ಹಾಗೆ ಮಾಡುತ್ತಿರುವ ಹುನ್ನಾರದ ವಿರುದ್ಧ ನಾವು ಹೋರಾಡಬೇಕು ಎಂದರು.

ಕಲಬುರ್ಗಿಯ ಕೇಂದ್ರೀಯ ವಿಶ್ವ ವಿದ್ಯಾಲಯದ ಸಹಾಯಕ ಪಾಧ್ಯಾಪಕರಾದ ಪ್ರೊ. ಕಿರಣ್ ಗಾಜನೂರು ಮಾತನಾಡಿ, ಶಾಲೆಗಳೇ ಇಲ್ಲದ ಊರನ್ನು ಸೃಷ್ಟಿಸುವುದು ಯುದ್ಧಕ್ಕಿಂತ ಕ್ರೂರವಾದದ್ದು. ಸರ್ಕಾರಿ ಶಾಲೆಗಳೇ ಇಲ್ಲದೇ ಇರುವ ಊರನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಈ ಶಾಲೆಗಳು ಆಧುನಿಕ ಚಿಂತನೆಗಳ ದ್ವಾರಗಳು. ಅವು ಉಳಿದರೆ ಮಾತ್ರ ಪ್ರಜಾಪ್ರಭುತ್ವದ ಉಳಿವು. ಶಿಕ್ಷಣ, ಸಂಸ್ಕೃತಿ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸರ್ಕಾರಿ ಶಾಲೆ ಉಳಿಸುವ ಚಾರಿತ್ರಿಕ ಹೋರಾಟವು ಮುಂದುವರೆಯಬೇಕು ಎಂದು ಕರೆ ನೀಡಿದರು.

ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾದ ಶ್ರೀ. ಗುರುಪ್ರಸಾದ್ ಕೆರೆಗೋಡು ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಯೋಜನೆಯು, ಹಳ್ಳಿಗಳಲ್ಲಿ, ಹಟ್ಟಿಗಳಲ್ಲಿ, ಜೀವಿಸುತ್ತಿರುವ ಎಲ್ಲಾ ಸಮುದಾಯದ ಶಿಕ್ಷಣವನ್ನು ಕಿತ್ತುಕೊಳ್ಳುತ್ತಿದೆ. ಖಾಸಗಿ ಲಾಬಿಗಳಿಗೆ ಒಳಗಾಗಿ ಸರ್ಕಾರ ಶಾಲೆ ಮುಚ್ಚುತ್ತಿರುವುದರ ವಿರುದ್ಧ ಒಗ್ಗಟ್ಟಿನ ಹೋರಾಟ ಕಟ್ಟುವ ಅವಶ್ಯಕತೆ ಇದೆ ಎಂದು ತಿಳಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ರಾಜ್ಯ ಉಪಾಧ್ಯಕ್ಷರಾದ ಕಾ. ವಿ. ಎನ್. ರಾಜಶೇಖರ್ ಮಾತನಾಡಿ, "ಪ್ರತಿಯೊಂದು ಪಕ್ಷ, ಸರ್ಕಾರವು ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರಕ್ಕೆ ಕೈ ಜೋಡಿಸಿದೆ. ಸದನದಲ್ಲಿ ಕೂತು 'ಸರ್ಕಾರಿ ಶಾಲೆಗಳನ್ನು ಹೇಗೆ ಮುಚ್ಚೋದು?' ಎಂದು ಚರ್ಚಿಸುತ್ತಿರುವುದು ಅತ್ಯಂತ ದುರಂತ. ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಿಗೆ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಂತಹ ದೊಡ್ಡ ಬ್ಯಾಂಕಿನಿಂದ 2 ಸಾವಿರ ಕೋಟಿ ರೂ. ಸಾಲ ಪಡೆಯಲಾಗಿದೆ. ಊರಾಚೆ ಇರುವ ಮ್ಯಾಗ್ನೆಟ್ ಶಾಲೆಗಳಿಗೆ ಉಚಿತ ಬಸ್ ಎನ್ನುವುದು ಕೇವಲ ಕಾಗದದ ಮೇಲಿನ ಭರವಸೆ, ಅದರ ಸಂಪೂರ್ಣ ಜವಾಬ್ದಾರಿಯನ್ನು SDMC ಮತ್ತು ಪೋಷಕರ ತಲೆಗೆ ಕಟ್ಟಿ ಸರ್ಕಾರ ಕೈತೊಳೆದುಕೊಳ್ಳುತ್ತಿದೆ. ರಾಜ್ಯ ಸರ್ಕಾರವು ಈ ಯೋಜನೆಯನ್ನು ತಂದಿರುವುದೇ, ಸಾರ್ವಜನಿಕ ಶಿಕ್ಷಣವನ್ನು ಸಂಪೂರ್ಣ ಖಾಸಗೀಕರಿಸುವುದಕ್ಕಾಗಿ ಮತ್ತು ಬಡ ಮಕ್ಕಳಿಂದ ಶಾಶ್ವತವಾಗಿ ಶಿಕ್ಷಣವನ್ನು ಕಸಿಯುವುದಕ್ಕಾಗಿ!" ಎಂದು ಆಕ್ರೋಶ ವ್ಯಕ್ತಪಡಿಸಿದರು.

> **ಸರ್ಕಾರಿ ಶಾಲೆ ಇಲ್ಲದ ಊರನ್ನು ಸೃಷ್ಟಿಸುವುದು ಯುದ್ಧವನ್ನು ಮೀರಿದ ಕ್ರೌರ್ಯ!**
> **: ಚಿಂತಕರ ಅಭಿಮತ**

ಹಿರಿಯ ಸಾಹಿತಿಗಳಾದ ಪ್ರೊ ಎಸ್. ಜಿ. ಸಿದ್ದರಾಮಯ್ಯ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ದಾಖಲಾತಿ ಕುಸಿಯುವುದನ್ನು ನೋಡಿದರೆ, 100 ವರ್ಷಗಳ ಹಿಂದೆ ಹೋಗುವ ದುಸ್ಥಿತಿ ಎದುರಾಗುತ್ತಿದೆ. ಈಗಾಗಲೇ ವಾಸ್ತವದಲ್ಲಿ ಹಳ್ಳಿಗಳಲ್ಲಿನ ಹೆಣ್ಣು ಮಕ್ಕಳು 5 ಕಿ.ಮೀ. ಆಚೆ ಇರುವ ಶಾಲೆಗಳಿಗೆ ತೆರಳಲಾಗದೆ, ಶಿಕ್ಷಣದಿಂದ ದೂರ ಹೋಗುತ್ತಿದ್ದಾರೆ. ಶಾಲೆ ಮುಚ್ಚುವುದು ಅಮಾನವೀಯ ಮತ್ತು ಅನಾಗರೀಕವಾದ ನಡೆ. ಈ ನೀತಿಯ ವಿರುದ್ಧದ ಹೋರಾಟಕ್ಕೆ ಎಲ್ಲರೂ ಧ್ವನಿಯಾಗೋಣ ಎಂದು ಕರೆ ನೀಡಿದರು.



ಶಿಕ್ಷಣ ತಜ್ಞರಾದ ಪ್ರೊ. ನಿರಂಜನಾರಾಧ್ಯ

ರಾಜ್ಯದ ಮಾಜಿ ಅಡ್ವೊಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್, ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರೋಧಿಸಿ ಮಾತನಾಡಿದರು.

ಮುಖ್ಯ ಭಾಷಣಕಾರರಾಗಿ ಎಐಡಿಎಸ್‌ಓ ಕೇಂದ್ರ ಕೌನ್ಸಿಲ್ ಜಂಟಿ ಕಾರ್ಯದರ್ಶಿ ಕಾ. ಅಲೀನಾ ಮಾತನಾಡಿ, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ, ವರ್ಷದಿಂದ ವರ್ಷಕ್ಕೆ ಶಿಕ್ಷಣಕ್ಕೆ ನೀಡುತ್ತಿರುವ ಅನುದಾನ ಕಡಿತಗೊಳಿಸುತ್ತಿದೆ. ಶಿಕ್ಷಣದ ಬಜೆಟ್ ಕೇವಲ ಶೇ.2.8ರಷ್ಟಿದೆ. ತತ್ಪರಿಣಾಮ, ಸರ್ಕಾರಿ ಶಾಲೆ – ಕಾಲೇಜು ಹಾಗೂ ವಿಶ್ವ ವಿದ್ಯಾನಿಲಯಗಳು ಅನುದಾನ ಕೊರತೆಯಿಂದ ನರಳುತ್ತಿವೆ. ಸರ್ಕಾರಗಳು ಪ್ರಜಾತಾಂತ್ರಿಕ-ಧರ್ಮನಿರಪೇಕ್ಷ-ವೈಜ್ಞಾನಿಕ ಶಿಕ್ಷಣವನ್ನು ನೀಡುವ ಬದಲು, ವಿದ್ಯಾರ್ಥಿಗಳನ್ನು ಕಾರ್ಖಾನೆಗಳಲ್ಲಿ ಅಗ್ಗದ ಕಾರ್ಮಿಕರನ್ನಾಗಿಸಲು ಹೊರಟಿರುವುದು ದುರಂತ ಎಂದರು.

ಎಐಡಿಎಸ್‌ಓ ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್ ಮಾತನಾಡಿ, ನಮ್ಮ ದೇಶದಲ್ಲಿ ಕಳೆದ 5 ವರ್ಷಗಳಲ್ಲಿ 84,000 ಶಾಲೆಗಳು ಬಿಸಿಯೂಟದಿಂದ ಆಚೆ ಬಂದಿವೆ. ಈ ಅಂಕಿ ಅಂಶವು ದೇಶದಲ್ಲಿ ಶಾಲೆಗಳು ಮುಚ್ಚಿರುವುದನ್ನು ಬಯಲುಗೊಳಿಸುತ್ತದೆ. ದೇಶದ ಎಲ್ಲಾ ರಾಜ್ಯಗಳಲ್ಲಿ ಶಾಲೆ ಮುಚ್ಚುವ ಕೆಲಸವನ್ನು ಎಲ್ಲಾ ಪಕ್ಷಗಳೂ ವ್ಯವಸ್ಥಿತವಾಗಿ ಮಾಡುತ್ತಿವೆ. ಸರ್ಕಾರಗಳು ರಚಿಸುವ ಈ ನೀತಿಗಳ ಹಿಂದಿರುವುದು ಈ ದೇಶದ ಬಂಡವಾಳಶಾಹಿಗಳು. ಬಡ ಕಾರ್ಮಿಕರು, ರೈತರ ಮಕ್ಕಳಿಂದ ಶಿಕ್ಷಣ ಕಸಿಯುವ ಹುನ್ನಾರ ಇದಾಗಿದ್ದು, ಸಾರ್ವಜನಿಕ ಶಿಕ್ಷಣ ಉಳಿಸಿದರೆ ಮಾತ್ರ ಮಾನವ ನಾಗರಿಕತೆ ಉಳಿಯಲು ಸಾಧ್ಯ ಈ ನಿಟ್ಟಿನಲ್ಲಿ ಸರ್ಕಾರಿ ಶಾಲೆ ಉಳಿಸಲು ಬಲಿಷ್ಠ ಹೋರಾಟ ಬೆಳೆಸಬೇಕೆಂದು ಕರೆ ನೀಡಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಅಧ್ಯಕ್ಷರು, ಸದಸ್ಯರು ಸಮಾವೇಶದಲ್ಲಿ ಮಾತನಾಡಿದರು. ಸಮಾವೇಶದ ಅಧ್ಯಕ್ಷತೆಯನ್ನು ಎಐಡಿಎಸ್‌ಓ ರಾಜ್ಯಾಧ್ಯಕ್ಷರಾದ ಕಾ. ಅಶ್ವಿನಿ ಕೆ.ಎಸ್. ವಹಿಸಿದ್ದರು.

ಸಮಾವೇಶದಲ್ಲಿ ಭಾಗವಹಿಸಿದ ಎಐಡಿಎಸ್‌ಓ ರಾಜ್ಯ ಸಮಿತಿಯ ಪದಾಧಿಕಾರಿಗಳು ಸೇರಿದಂತೆ ರಾಜ್ಯದ ನೂರಾರು ವಿದ್ಯಾರ್ಥಿಗಳು ಮತ್ತು ಪೋಷಕರು ಸರ್ಕಾರಿ ಶಾಲೆಗಳನ್ನು ಉಳಿಸುವ ಹೋರಾಟವನ್ನು ಮುಂದಕ್ಕೆ ಕೊಂಡೊಯ್ಯುವ ಸಂಕಲ್ಪ ತೊಟ್ಟರು.

# ಪಶ್ಚಿಮ ಬಂಗಾಳ: ಎಸ್‌ಐಆರ್ ಪ್ರಕ್ರಿಯೆ ಸೃಷ್ಟಿಸಿರುವ ಕ್ರೌರ್ಯ ಮತ್ತು ಕಿರುಕುಳ

ನಮ್ಮ ಪಕ್ಷ ಎಸ್‌ಯುಸಿಐ (ಸಿ), ಎಸ್‌ಐಆರ್ (Special Intensive Revision) ಹೆಸರಿನ ಪ್ರಕ್ರಿಯೆಯ ವಿರುದ್ಧ ನಡೆಸಿದ ಪ್ರತಿಭಟನೆಗಳ ನಂತರ 27 ನವೆಂಬರ್ ಮತ್ತು 17 ಡಿಸೆಂಬರ್ 2025ರಂದು ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಿದ ಮನವಿಪತ್ರದಲ್ಲಿ ವ್ಯಕ್ತಪಡಿಸಿದ್ದ ಆತಂಕ ಇಂದು ನಿಜವಾಗಿರುವುದು ಸಾಬೀತಾಗುತ್ತಿದೆ. ಮತದಾರರ ನೈಜತೆಯ ಪರಿಶೀಲನೆ ಮತ್ತು ವಿಚಾರಣೆ ನಡೆಸುವ ಹೆಸರಿನಲ್ಲಿ, ಸಾಮಾನ್ಯ ಜನರ ಮೇಲೆ ನಡೆಯುತ್ತಿರುವ ಕಿರುಕುಳ ಅತಿಯಾದ ಕ್ರೌರ್ಯದ ಮಟ್ಟವನ್ನು ತಲುಪಿದೆ. ತೀವ್ರ ಚಳಿಯಲ್ಲಿ, ತೊಂಬತ್ತರ ವಯಸ್ಸನ್ನೂ ದಾಟಿದ ರೋಗಗ್ರಸ್ತರನ್ನೂ ಸಹ ವಿಚಾರಣಾ ಕೇಂದ್ರಗಳಿಗೆ ಬರುವಂತೆ ಬಲವಂತ ಮಾಡಲಾಗುತ್ತಿದೆ. ಅವರನ್ನು ಆಂಬ್ಯುಲೆನ್ಸ್‌ನಲ್ಲಿಯೂ ಕರೆತರುತ್ತಿದ್ದಾರೆ. ವಯಸ್ಸಾದವರು ಮತ್ತು ಅಂಗವಿಕಲರ ವಿಚಾರಣೆಯನ್ನು ಅವರ ಮನೆಗಳಲ್ಲಿಯೇ ನಡೆಸಬೇಕು ಎಂಬ ಅಧಿಸೂಚನೆ ಇದ್ದರೂ ಸಹ, ಪಾರ್ಶ್ವವಾಯು ರೋಗಪೀಡಿತರು ತಮ್ಮ ಮಕ್ಕಳ ಭುಜದ ಮೇಲೊರಗಿಕೊಂಡೇ ಮೆಟ್ಟಿಲುಗಳನ್ನು ಹತ್ತಿ ವಿಚಾರಣಾ ಕಚೇರಿಗೆ ಬರಬೇಕಾದ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ.

ಚುನಾವಣಾ ಆಯೋಗದಿಂದ ಯಾವುದೇ ಸ್ಪಷ್ಟ ನಿರ್ದೇಶನಗಳು ಬಂದಿಲ್ಲ ಎಂಬ ಕಾರಣವನ್ನು ಮುಂದಿಟ್ಟು, ಕೆಲವು ಜಿಲ್ಲಾಡಳಿತಗಳು ನಿರ್ದಿಷ್ಟ ವರ್ಗದ ಮತದಾರರಿಗೆ ಮನೆಯಲ್ಲಿಯೇ ನಡೆಸಬಹುದಾದ ವಿಚಾರಣೆಯನ್ನು ತಪ್ಪಿಸುತ್ತಿವೆ. ಗರ್ಭಿಣಿಯರನ್ನು ಸಹ ವಿಚಾರಣಾ ಕೇಂದ್ರಗಳಿಗೆ ಬರುವಂತೆ ಮಾಡಲಾಗುತ್ತಿದೆ. ಹಾಗೆಯೇ, ಇತರ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ ವಲಸೆ ಕಾರ್ಮಿಕರು ಮತ್ತು ದಿನಗೂಲಿ ಕಾರ್ಮಿಕರು, ವಿಚಾರಣೆಗೆ ಹಾಜರಾಗಬೇಕಾಗಿ ಬಂದಾಗ ತಮ್ಮ ಕೆಲಸ ಬಿಟ್ಟು ವೇತನ ಕಳೆದುಕೊಳ್ಳುವಂತಾಗಿದೆ. ತಮ್ಮ ಪೌರತ್ವ ಕಳೆದುಕೊಳ್ಳುವ ಭಯದಿಂದ ಕೆಲ ವಲಸೆ ಕಾರ್ಮಿಕರು ತಾವು ಕೆಲಸದಲ್ಲಿರುವ ರಾಜ್ಯದಿಂದ ಹಣ ಖರ್ಚು ಮಾಡಿ ವಿಮಾನದಲ್ಲಿ ಬಂದಿರುವ ವರದಿಗಳೂ ಇವೆ. ಕೆಲ ವಾರಗಳ ಕಾಲ ಆಳ ಸಮುದ್ರಕ್ಕೆ ಹೋಗಿರುವ ಮೀನುಗಾರರು, ನಿಗದಿತ ದಿನಾಂಕಗಳಲ್ಲಿ ವಿಚಾರಣೆಗೆ ಹೇಗೆ ಹಾಜರಾಗಬೇಕು ಎಂಬ ಆತಂಕದಲ್ಲಿದ್ದಾರೆ. ವಿಚಾರಣೆಯ ದಿನಾಂಕ ಮತ್ತು ಸಮಯವನ್ನು ಅವರಿಗೆ ಮುಂಚಿತವಾಗಿ ತಿಳಿಸಲಾಗಿಲ್ಲ. ತಾಂತ್ರಿಕ ದೋಷಗಳ ಕಾರಣದಿಂದ ಮತದಾರರ ಹೆಸರುಗಳು ಕೈ ತಪ್ಪಿದರೆ ಅದರ ಜವಾಬ್ದಾರಿ ಯಾರು ಹೊರುತ್ತಾರೆ? ಬಿಜೆಪಿ ನಾಯಕರು ಮತ್ತು ಮಂತ್ರಿಗಳು ಚುನಾವಣಾ ಆಯೋಗವನ್ನು ತಮ್ಮ ಪಕ್ಷದ ಭಾಗವಾಗಿ ಬಳಸಿಕೊಂಡು ಮತದಾರರ ಪಟ್ಟಿಯನ್ನು "ಶುದ್ಧೀಕರಿಸುತ್ತಿದ್ದೇವೆ" ಎಂದು ಕೊಚ್ಚಿಕೊಳ್ಳುತ್ತಿರುವುದು, ಮಟುವಾ ಸಮುದಾಯದಲ್ಲಿ (ಪ. ಬಂಗಾಳದ ಎರಡು ದೊಡ್ಡ ಜಿಲ್ಲೆಗಳಲ್ಲಿ ಪ್ರಮುಖ ಮತದಾರ ಸಮುದಾಯವಾಗಿರುವ 19ನೇ ಶತಮಾನದ ಸುಧಾರಕ ಹರಿಚಂದ್ ಠಾಕೂರರ ಅನುಯಾಯಿಗಳಾದ ಬಂಗಾಲಿ ಹಿಂದೂಗಳಾದ ನಾಮಶೂದ್ರರು) ಮಾತ್ರವಲ್ಲದೆ ಪ. ಬಂಗಾಳದ ಎಲ್ಲಾ ವರ್ಗದ ಜನರಲ್ಲಿ ಭೀತಿಯನ್ನು ಹೆಚ್ಚಿಸುತ್ತಿದೆ.

ಇನ್ನೊಂದು ಕಡೆ, ಮತದಾರರ ಪಟ್ಟಿಯ ಪ್ರಾಥಮಿಕ ಪರಿಶೀಲನೆಯ ಕೆಲಸದಲ್ಲಿ ತೊಡಗಿಸಿಕೊಂಡಿರುವ ಬೂತ್ ಮಟ್ಟದ ಅಧಿಕಾರಿಗಳು (BLO) ಅವರಲ್ಲಿ ಹೆಚ್ಚಿನವರು ಶಾಲಾ ಶಿಕ್ಷಕರು, ಅಪಾರ ಕೆಲಸದ ಒತ್ತಡ ಮತ್ತು ಕರ್ತವ್ಯಲೋಪಕ್ಕೆ ಶಿಕ್ಷೆಯಾಗುವ ಭಯದಿಂದ ಒಬ್ಬರ ನಂತರ ಒಬ್ಬರಂತೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ವರದಿಯಾಗಿದೆ. ಆದರೆ ಚುನಾವಣಾ ಆಯೋಗ ಈ ಸಾವುಗಳ ಹೊಣೆಗಾರಿಕೆ ಹೊತ್ತುಕೊಳ್ಳುವ ಜವಾಬ್ದಾರಿಯಿಂದ ಈವರೆಗೂ ತಪ್ಪಿಸಿಕೊಂಡು ಬರುತ್ತಿದೆ. ಬದಲಾಗಿ, ಸಣ್ಣ ತಪ್ಪುಗಳಿಗೂ BLO ಗಳಿಗೆ ಶಿಕ್ಷೆ ನೀಡಲಾಗುತ್ತದೆ ಎಂದು ಎಚ್ಚರಿಕೆ ನೀಡುತ್ತಿರುವುದು ಆಯೋಗದ ಅಮಾನವೀಯತೆಯನ್ನು ತೋರಿಸುತ್ತದೆ. ಈ ಘಟನೆಗಳು ಎಲ್ಲರಲ್ಲಿಯೂ ತೀವ್ರ ಆಕ್ರೋಶವನ್ನು ಉಂಟುಮಾಡಿವೆ.

ಇದಕ್ಕೆ ತದ್ವಿರುದ್ಧವಾಗಿ, ಮುಖ್ಯ ಚುನಾವಣಾಧಿಕಾರಿಗೆ ವೈ-ಶ್ರೇಣಿ ಭದ್ರತೆ ಒದಗಿಸಲಾಗಿದೆ. ಆದರೆ ಯಾರ ಮತದ ಮೇಲೆ ಶಾಸಕರು, ಸಂಸದರು ಮತ್ತು ಮಂತ್ರಿಗಳು ಅಧಿಕಾರಕ್ಕೆ ಬರುತ್ತಾರೋ ಆ ಜನರನ್ನು ರಕ್ಷಿಸುವ ವ್ಯವಸ್ಥೆ ಇಲ್ಲದಂತಾಗಿದೆ. ಸಾರ್ವಜನಿಕ ಹಣದಿಂದ ನಡೆಯುವ ಸಂವಿಧಾನಾತ್ಮಕ ಸಂಸ್ಥೆಯೊಂದು, ಆಡಳಿತಾರೂಢ ಪಕ್ಷದ ಆದೇಶದಂತೆ ಮತ್ತು ಅದರ ಹಿತಾಸಕ್ತಿಗಾಗಿ ಎಲ್ಲಾ ರೂಢಿ-ನಿಯಮಗಳನ್ನು ಗಾಳಿಗೆ ತೂರಿ ಕಾರ್ಯನಿರ್ವಹಿಸುತ್ತಿರುವಾಗ, ಬೂರ್ಜ್ವಾ ಸಂಸತ್ತಿನ ನಾಮಕಾವಾಸ್ತೆ ತಟಸ್ಥ ಮುಖವಾಡ ಕಳಚಿ ಬೀಳುತ್ತಿದೆ.

ಈ ಎಲ್ಲಾ ಅಂಶಗಳನ್ನು ಉಲ್ಲೇಖಿಸಿ, ನಮ್ಮ ಪಕ್ಷ ಎಸ್‌ಯುಸಿಐ (ಸಿ)ಯ ಪಾಲಿಟ್ ಬ್ಯೂರೋ ಸದಸ್ಯರೂ ಹಾಗೂ ಪ. ಬಂಗಾಳ ರಾಜ್ಯ ಕಾರ್ಯದರ್ಶಿಯಾಗಿರುವ ಕಾ. ಚಂಡಿದಾಸ್ ಭಟ್ಟಾಚಾರ್ಯ ಅವರು, ಜನ ಸಾಮಾನ್ಯರ ಮೇಲೆ ನಡೆಯುತ್ತಿರುವ ಈ ಕಿರುಕುಳವನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಚುನಾವಣಾ ಆಯೋಗದ ಈ ತುಘಲಕ್ ತರಹದ ಕ್ರಮಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

# ಶಾಲೆ ತೊರೆಯುತ್ತಿರುವ ಮಕ್ಕಳ ಹೃದಯ ವಿದ್ರಾವಕ ಚಿತ್ರಣ

2015ಕ್ಕೆ ಅರೆಕ್ಷಣ ಹಿಂದಿರುಗೋಣ. ಆಗ ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದು ಪ್ರಧಾನಿ ಮೋದಿ ಆಡಳಿತದ ಚುಕ್ಕಾಣಿ ಹಿಡಿದು ಒಂದು ವರ್ಷವಾಗಿತ್ತು. ಹೆಣ್ಣು ಶಿಶುಗಳನ್ನು ಪೋಷಿಸುವ ಪ್ರಧಾನಿ ಮೋದಿಯವರ ಕನಸಿನ ನಿರೂಪಣೆ – 'ಬೇಟಿ ಪಡಾವೋ, ಬೇಟಿ ಬಚಾವೋ' (ಹೆಣ್ಣುಮಕ್ಕಳನ್ನು ಓದಿಸಿ, ಹೆಣ್ಣುಮಕ್ಕಳನ್ನು ಉಳಿಸಿ) – ಇದು ಹೆಣ್ಣುಮಕ್ಕಳ ಬಗ್ಗೆ ತಮಗಿರುವ ಕಾಳಜಿಯನ್ನು ವಿವರಿಸಲು ಪ್ರಧಾನಿಯವರು ಆಯ್ಕೆ ಮಾಡಿದ ಮಧುರವಾದ ನಾಣ್ನುಡಿ. ಅಂದಿನಿಂದ ಇಂದಿನವರೆಗೆ ಈ ಮಾತನ್ನು ಅಸಂಖ್ಯಾತ ಬಾರಿ ಪುನರುಚ್ಚರಿಸಲಾಗುತ್ತಿದೆ. ಅಷ್ಟೇ ಅಲ್ಲದೆ, ಪ್ರಧಾನಿ ಮೋದಿ ಹೆಣ್ಣುಮಕ್ಕಳೊಂದಿಗೆ ಸೆಲ್ಫಿ ತೆಗೆದುಕೊಳ್ಳುವಂತೆಯೂ ಎಲ್ಲರಿಗೂ ಕರೆ ನೀಡಿದ್ದರು. ತಮ್ಮ 'ಮನ್ ಕಿ ಬಾತ್'ನಲ್ಲಿ, ಪ್ರಧಾನಿಯವರು ಹೆಣ್ಣುಮಕ್ಕಳ ಜನನ ಪ್ರಮಾಣ ಕುಸಿಯುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸುವುದು, ಮಹಿಳಾ ಸಬಲೀಕರಣದ ಭರವಸೆ ನೀಡುವುದು ಮತ್ತು ಕಿಶೋರಿಯರಲ್ಲಿ ಜಾಗೃತಿ ಮೂಡಿಸುವ ಬಗ್ಗೆ ಒತ್ತು ನೀಡುವುದನ್ನು ನಾವು ಆಗಾಗ್ಗೆ ಕಾಣುತ್ತೇವೆ.

ಆದರೆ ದುರದೃಷ್ಟವಶಾತ್, ಕಳೆದ 11 ವರ್ಷಗಳ ಪ್ರಗತಿಯ ವರದಿಯನ್ನು ಗಮನಿಸಿದರೆ, ಈ ಘೋಷಣೆಯು ಕೇವಲ ಅರ್ಥಹೀನ ಬಡಬಡಿಕೆಯಂತೆ ಕೇಳಿಸುತ್ತದೆ. ಪ್ರಧಾನಿ ಮೋದಿಯವರ 'ಬೇಟಿ ಬಚಾವೋ' ಘೋಷಣೆಗೆ ತದ್ವಿರುದ್ಧವಾಗಿ, ಭಾರತದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ ಎಂಬುದಕ್ಕೆ ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ಕಿರುಕುಳ, ವರದಕ್ಷಿಣೆ ಸಾವು, ಮರ್ಯಾದೆ ಹತ್ಯೆ, ಆಸಿಡ್ ದಾಳಿ, ಸ್ತ್ರೀ ಭ್ರೂಣಹತ್ಯೆ ಮತ್ತು ಶಿಶು ಹತ್ಯೆಗಳ ಭೀಕರ ಅಂಕಿಅಂಶಗಳೇ ಸ್ಪಷ್ಟ ಸಾಕ್ಷಿ ಹೇಳುತ್ತವೆ. ಸದ್ಯಕ್ಕೆ ಈ ಘೋರ ವಿಚಾರಗಳನ್ನು ಪಕ್ಕಕ್ಕಿಟ್ಟು, ನಾವು 'ಬೇಟಿ ಪಡಾವೋ' (ಹೆಣ್ಣುಮಕ್ಕಳನ್ನು ಓದಿಸಿ) ಅಭಿಯಾನದ ವಾಸ್ತವ ಚಿತ್ರಣದ ಕಡೆಗೆ ಗಮನ ಹರಿಸೋಣ.

ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಲಭ್ಯವಿರುವ ಕೆಲವು ಅಂಕಿಅಂಶಗಳ ಮೇಲೆ ಕಣ್ಣು ಹಾಯಿಸೋಣ. ಕಳೆದ ಡಿಸೆಂಬರ್‌ನಲ್ಲಿ ಸಂಸತ್ತಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಜ್ಯ ಸಚಿವರು ನೀಡಿದ ಮಾಹಿತಿಯ ಪ್ರಕಾರ, ಕಳೆದ 5 ವರ್ಷಗಳಲ್ಲಿ 65.7 ಲಕ್ಷ ಮಕ್ಕಳು ಶಾಲೆ ಬಿಟ್ಟಿದ್ದಾರೆ ಮತ್ತು ಅವರಲ್ಲಿ ಸುಮಾರು ಅರ್ಧದಷ್ಟು ಅಂದರೆ 29.8 ಲಕ್ಷ ಹೆಣ್ಣುಮಕ್ಕಳಿದ್ದಾರೆ. ಇದು ಅಧಿಕೃತ ಅಂಕಿಅಂಶ. ಆದರೆ ನಿಜವಾದ ಸಂಖ್ಯೆ ಇದಕ್ಕಿಂತ ಎಷ್ಟೋ ಪಟ್ಟು ಹೆಚ್ಚಿರಬಹುದು ಎಂದು ನಾವು ತಿಳಿಯಬೇಕು. ಎರಡನೆಯದಾಗಿ, ನಮ್ಮ ಗೌರವಾನ್ವಿತ ಪ್ರಧಾನಿಯವರು ಮತ್ತು ಅವರ ಸಂಪುಟ ಸಹೋದ್ಯೋಗಿಗಳು ಪದೇ ಪದೇ 'ಡಬಲ್ ಇಂಜಿನ್ ಸರ್ಕಾರ'ದ (ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಬಿಜೆಪಿ ಸರ್ಕಾರ) ಬಗ್ಗೆ ಪ್ರಚಾರ ಮಾಡುತ್ತಾರೆ. ಇಂತಹ ಡಬಲ್ ಇಂಜಿನ್‌ಗಳು ದೇಶದ ಪ್ರಗತಿ ಮತ್ತು ಸಮೃದ್ಧಿಯ ವೇಗವನ್ನು ಹೆಚ್ಚಿಸುತ್ತವೆ ಎಂಬುದು ಅವರ ವಾದ. ಆದರೆ 'ಬೇಟಿ ಪಡಾವೋ' ವಿಷಯಕ್ಕೆ ಬಂದರೆ, ಈ ಡಬಲ್ ಇಂಜಿನ್‌ಗಳ ದಾಖಲೆ ಅತ್ಯಂತ ನಿರಾಶಾದಾಯಕ.

2025–26ರಲ್ಲೇ ಗುಜರಾತ್‌ನಲ್ಲಿ 2.4 ಲಕ್ಷ ಮಕ್ಕಳು ಶಾಲೆ ಬಿಟ್ಟಿದ್ದಾರೆ. ಅದರಲ್ಲಿ 1.1 ಲಕ್ಷ ಹೆಣ್ಣುಮಕ್ಕಳು. ಆದರೆ, 2024ರ ದಾಖಲೆಯ ಪ್ರಕಾರ ಶಾಲೆ ಬಿಟ್ಟವರ ಸಂಖ್ಯೆ ಕೇವಲ 54,541 ಆಗಿತ್ತು. ಅಂದರೆ, ಗುಜರಾತ್‌ನಂತಹ ರಾಜ್ಯದಲ್ಲಿ ಕೇವಲ ಒಂದು ವರ್ಷದಲ್ಲಿ ಈ ಸಂಖ್ಯೆಯು 340% ರಷ್ಟು ಏರಿಕೆಯಾಗಿದೆ. ಇನ್ನು ಅಸ್ಸಾಂನಲ್ಲಿ 1,50,906 ಮಕ್ಕಳು ಶಾಲೆ ಬಿಟ್ಟಿದ್ದು, ಅದರಲ್ಲಿ 57,409 ಹೆಣ್ಣುಮಕ್ಕಳಿದ್ದಾರೆ. ಉತ್ತರ ಪ್ರದೇಶದಲ್ಲಿ ಒಟ್ಟು 99,218 ಮಂದಿಯಲ್ಲಿ 56,462 ಹೆಣ್ಣುಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಹೀಗೆ, ಶಾಲೆ ಬಿಟ್ಟವರ ಸಂಖ್ಯೆಯಲ್ಲಿ (ಅದರಲ್ಲೂ ಗಣನೀಯ ಸಂಖ್ಯೆಯ ಹೆಣ್ಣುಮಕ್ಕಳು) ಡಬಲ್ ಇಂಜಿನ್ ಚಾಲಿತ ರಾಜ್ಯಗಳೇ ಮೊದಲ ಮೂರು ಸ್ಥಾನಗಳಲ್ಲಿವೆ. ಸಾಧನೆ ಹೀಗಿರುವಾಗ, ಈ ರಾಜ್ಯಗಳನ್ನು ಎಳೆಯುತ್ತಿರುವುದು ಎಂತಹ ಇಂಜಿನ್‌ಗಳು?

ಆದರೆ ಇಷ್ಟೊಂದು ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಅರ್ಧದಲ್ಲೇ ಶಾಲೆ ಬಿಡುತ್ತಿರುವುದೇಕೆ? ಸರ್ಕಾರದ ವರದಿಗಳು ಮತ್ತು ಸಂಬಂಧಪಟ್ಟ ಅಧ್ಯಯನಗಳ ಪ್ರಕಾರ, ಶಾಲೆಯನ್ನು ತೊರೆಯಲು ಪ್ರಮುಖ ಕಾರಣಗಳೆಂದರೆ: ಬಡತನ (ಇದು ಮಕ್ಕಳನ್ನು ಬಾಲಕಾರ್ಮಿಕ ಪದ್ಧತಿ ಅಥವಾ ಬಾಲ್ಯ ವಿವಾಹಕ್ಕೆ ತಳ್ಳುತ್ತದೆ), ಆಸಕ್ತಿ ಅಥವಾ ಪ್ರೇರಣೆಯ ಕೊರತೆ, ಶಾಲಾ ಶಿಕ್ಷಣದ ಕಳಪೆ ಗುಣಮಟ್ಟ ಮತ್ತು ಮೂಲಸೌಕರ್ಯಗಳ ಕೊರತೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು (ಉದಾಹರಣೆಗೆ ಲಿಂಗ ತಾರತಮ್ಯ, ಬಾಲ್ಯ ವಿವಾಹ), ವಲಸೆ, ಹಾಗೂ ಪೋಷಕರ ಅಸಮರ್ಪಕ ಪಾಲ್ಗೊಳ್ಳುವಿಕೆ ಅಥವಾ ಬೆಂಬಲ. ಇದರೊಂದಿಗೆ ಆಪ್ತ ಸಮಾಲೋಚಕರ (counselors) ಕೊರತೆ ಮತ್ತು ವಿಕಲಚೇತನರಿಗೆ ಸೂಕ್ತ ಬೆಂಬಲ ಇಲ್ಲದಿರುವುದು ಕೂಡ ಇದಕ್ಕೆ ಪ್ರಮುಖ ಕಾರಣಗಳಾಗಿವೆ. ನಮಗೆಲ್ಲರಿಗೂ ಈಗಾಗಲೇ ತಿಳಿದಿರುವ ವಿಷಯಗಳನ್ನೇ ಸರ್ಕಾರವು ತಿಳಿಸಿರುವುದು ಸಮಾಧಾನಕರ ಅಂಶ. ಆದರೆ, ಸರ್ಕಾರವು ಕೇವಲ ಕಾರಣಗಳನ್ನು ನೀಡದೆ, ಈ ಪರಿಸ್ಥಿತಿಯನ್ನು ಸುಧಾರಿಸಲು ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ.

ಆದರೆ, ಸರ್ಕಾರವು ಇದನ್ನು ಮರೆತಿಲ್ಲ; ಬದಲಿಗೆ ಹಲವಾರು ಪರಿಹಾರ ಕ್ರಮಗಳನ್ನು ರೂಪಿಸಿದೆ! ಉದಾಹರಣೆಗೆ, ವಿದ್ಯಾರ್ಥಿಗಳ ಸಂಖ್ಯೆ ಶೇ.50 ಕ್ಕಿಂತ ಕಡಿಮೆ ಇರುವ ಶಾಲೆಗಳನ್ನು ಮತ್ತೊಂದು ಶಾಲೆಯೊಂದಿಗೆ ವಿಲೀನಗೊಳಿಸಲಾಗುತ್ತಿದೆ. ಆದರೆ ಇಂತಹ 'ವಿಲೀನ ಮತ್ತು ಮುಚ್ಚುವಿಕೆ'ಯ ಪರಿಣಾಮವೇನು? ಇದರಿಂದ ಶಾಲಾ ಸಾಂದ್ರತೆಯು (ಪ್ರತಿ ಚದರ ಮೈಲಿ ಅಥವಾ ಕಿಲೋಮೀಟರ್‌ಗೆ ಇರುವ ಶಾಲೆಗಳ ಸಂಖ್ಯೆ) ಕಡಿಮೆಯಾಗುತ್ತಿದೆ ಮತ್ತು ಎರಡು ಶಾಲೆಗಳ ನಡುವಿನ ಅಂತರವು ಹೆಚ್ಚಾಗುತ್ತಿದೆ.

ಈ ಹೆಚ್ಚುತ್ತಿರುವ ಅಂತರದ ವಿದ್ಯಮಾನದ ಬಗ್ಗೆ ಚರ್ಚಿಸುವ ಮೊದಲು, ಅತ್ಯಂತ ವಿನಾಶಕಾರಿ ಎನ್ನಲಾದ ರಾಷ್ಟ್ರೀಯ ಶಿಕ್ಷಣ ನೀತಿ 2020 (NEP-20) ರಲ್ಲಿ ಸೂಚಿಸಲಾದ, ಅಬ್ಬರದಿಂದ ಪ್ರಚಾರ ಮಾಡಲಾದ ಈ 'ವಿಲೀನ ಮತ್ತು ಮುಚ್ಚುವಿಕೆ' ನೀತಿಯ ಫಲಿತಾಂಶದ ಮೇಲೆ ಒಂದು ಕ್ಷಣ ಕಣ್ಣು ಹಾಯಿಸೋಣ. ಈ 'ವಿಲೀನ ಮತ್ತು ಮುಚ್ಚುವಿಕೆ'ಯ (merger and closure) ವಾಸ್ತವ ಚಿತ್ರಣ ಹೇಗಿದೆ? ಕೆಲವು ದಿನಗಳ ಹಿಂದಷ್ಟೇ, ಉತ್ತರ ಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಮ್ಮ ರಾಜ್ಯದ 27,000 ಶಾಲೆಗಳನ್ನು ಮುಚ್ಚಿ ಇತರ ಶಾಲೆಗಳೊಂದಿಗೆ ವಿಲೀನಗೊಳಿಸಲಾಗುವುದು ಎಂದು ಘೋಷಿಸಿದರು. ಈ ಸಂಖ್ಯೆ ರಾಜಸ್ಥಾನದಲ್ಲಿ 19,500, ಮಹಾರಾಷ್ಟ್ರದಲ್ಲಿ 15,000, ಪಶ್ಚಿಮ ಬಂಗಾಳದಲ್ಲಿ 8,207, ಗುಜರಾತ್‌ನಲ್ಲಿ 7,000, ಛತ್ತೀಸ್‌ಗಢದಲ್ಲಿ 6,040, ಅಸ್ಸಾಂನಲ್ಲಿ 5,953 ಮತ್ತು ಕರ್ನಾಟಕದಲ್ಲಿ 3,400 ಆಗಿದೆ. ರಾಜಕೀಯ ಸಿದ್ಧಾಂತಗಳು ಯಾವುದೇ ಇರಲಿ, ಎಲ್ಲಾ ರಾಜ್ಯ ಸರ್ಕಾರಗಳು ಶಾಲೆಗಳನ್ನು ಮುಚ್ಚುವ ವಿಷಯದಲ್ಲಿ ಪರಸ್ಪರ ಪೈಪೋಟಿ ನಡೆಸಿವೆ. ಇದೆಲ್ಲದರ ನಡುವೆಯೂ, ರಾಷ್ಟ್ರೀಯ ಶಿಕ್ಷಣ ನೀತಿ–2020 (NEP-20) ರಲ್ಲಿ ಹೇಳಿಕೊಂಡಂತೆ ದೇಶವು 'ವಿಶ್ವಗುರು' ಆಗಲಿದೆಯಂತೆ!

ಕರ್ನಾಟಕ ಸರ್ಕಾರವು ಅಸ್ತಿತ್ವದಲ್ಲಿರುವ ಹಲವಾರು ಹಳ್ಳಿಯ ಶಾಲೆಗಳನ್ನು ವಿಲೀನಗೊಳಿಸಿ, ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ ಸುಮಾರು 6,000 ಕೆಪಿಎಸ್ ಮ್ಯಾಗ್ನೆಟ್ (KPS Magnet) ಶಾಲೆಗಳನ್ನು ಸ್ಥಾಪಿಸಲು ಯೋಜಿಸಿದೆ. ಮೊದಲ ಹಂತದಲ್ಲಿ ಈಗಾಗಲೇ 900 ಮ್ಯಾಗ್ನೆಟ್ ಶಾಲೆಗಳ ಸ್ಥಾಪನೆಗೆ ಆದೇಶ ಹೊರಡಿಸಲಾಗಿದೆ. ಒಂದು ಕಿಲೋಮೀಟರ್‌ನಿಂದ ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಶಾಲೆಗಳನ್ನು ಈ ಕೇಂದ್ರಗಳಲ್ಲಿ ವಿಲೀನಗೊಳಿಸಲಾಗುವುದು ಎಂದು ಸುತ್ತೋಲೆ ತಿಳಿಸಿದೆ. ಇದು ಶಿಕ್ಷಣ ಹಕ್ಕು ಕಾಯ್ದೆಯ (RTE) ಸ್ಪಷ್ಟ ಉಲ್ಲಂಘನೆಯಾಗಿದೆ. ಏಕೆಂದರೆ, ಸಾರ್ವತ್ರಿಕ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಪ್ರತಿಯೊಬ್ಬ ಮಗುವಿನ ವಾಸಸ್ಥಳದಿಂದ ನಡಿಗೆಯ ದೂರದಲ್ಲಿ (ಸಾಮಾನ್ಯವಾಗಿ ಪ್ರಾಥಮಿಕ ಶಾಲೆಗೆ 1 ಕಿ.ಮೀ ಮತ್ತು ಹಿರಿಯ ಪ್ರಾಥಮಿಕಕ್ಕೆ 3 ಕಿ.ಮೀ) ಶಾಲೆಯನ್ನು ಸ್ಥಾಪಿಸಬೇಕು ಎಂದು ಈ ಕಾಯ್ದೆ ಹೇಳುತ್ತದೆ.

ಕರ್ನಾಟಕದಲ್ಲಿ ಈ ಮ್ಯಾಗ್ನೆಟ್ ಯೋಜನೆಯ ವಿರುದ್ಧ ಪ್ರತಿಭಟನೆಯ ಅಲೆ ಎದ್ದಿದೆ. ಪೋಷಕರು, ಗ್ರಾಮಸ್ಥರು, ಶಿಕ್ಷಣ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳು ಕೂಡ ಸಾರ್ವಜನಿಕ ಶಿಕ್ಷಣದ ಭವಿಷ್ಯದ ಬಗ್ಗೆ, ಅದರಲ್ಲೂ ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಮತ್ತು ಅರೆ–ನಗರ ಪ್ರದೇಶಗಳಲ್ಲಿ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಈ ಯೋಜನೆಯು ಸಣ್ಣ ಮತ್ತು ಮೂಲಸೌಕರ್ಯ ಕೊರತೆಯಿರುವ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳನ್ನು ದೊಡ್ಡದಾದ, ಕೇಂದ್ರೀಕೃತ 'ಮ್ಯಾಗ್ನೆಟ್' ಶಾಲೆಗಳಿಗೆ ಸೇರಿಸುವ ಗುರಿಯನ್ನು ಹೊಂದಿದೆ. ಈ ಶಾಲೆಗಳು ಸುಧಾರಿತ ಸೌಲಭ್ಯಗಳನ್ನು ನೀಡುತ್ತವೆ ಎಂದು ಹೇಳಲಾಗುತ್ತದೆಯಾದರೂ, ಇವು ವಿದ್ಯಾರ್ಥಿಗಳ ಮನೆಯಿಂದ ಹೆಚ್ಚಿನ ದೂರದಲ್ಲಿರುತ್ತವೆ. ವಿದ್ಯಾರ್ಥಿಗಳು ಮ್ಯಾಗ್ನೆಟ್ ಶಾಲೆಗೆ ಹೋಗಲು 10 ರಿಂದ 25 ಕಿ.ಮೀ ಪ್ರಯಾಣಿಸಬೇಕಾದ ಅನಿವಾರ್ಯತೆ ಎದುರಾಗಬಹುದು. ಇದು ವಿಶೇಷವಾಗಿ ಪಶ್ಚಿಮ ಕರ್ನಾಟಕದ ಮಲೆನಾಡು ಪ್ರದೇಶದ ಮಕ್ಕಳಿಗೆ ದೊಡ್ಡ ಸಂಕಷ್ಟ ತರಲಿದೆ. ಇದರಿಂದಾಗಿ ಅನೇಕ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನೇ ನಿಲ್ಲಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು.

ಅಲ್ಲದೆ, ಅನೇಕ ಕುಟುಂಬಗಳಲ್ಲಿ 6 ಅಥವಾ 7 ನೇ ತರಗತಿಯಲ್ಲಿ ಓದುತ್ತಿರುವ 10–12 ವರ್ಷದ ಹೆಣ್ಣುಮಕ್ಕಳು ಮನೆಗೆಲಸ ಹಾಗೂ ತಮ್ಮ ತಂಗಿ–ತಮ್ಮಂದಿರ ಆರೈಕೆಯನ್ನೂ ಮಾಡುತ್ತಾರೆ. ಮ್ಯಾಗ್ನೆಟ್ ಯೋಜನೆಯು ಇಂತಹ ಹೆಣ್ಣುಮಕ್ಕಳ ಶಾಲಾ ಶಿಕ್ಷಣದ ಮೇಲೆ ಕೊಡಲಿ ಪೆಟ್ಟು ನೀಡಲಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಸರ್ಕಾರದ ಈ 'ವಿಲೀನ ಮತ್ತು ಮುಚ್ಚುವಿಕೆ' ಎಂಬ ಆದೇಶದಿಂದಾಗಿ ಶಾಲೆ ತೊರೆಯುವವರ ಸಂಖ್ಯೆಯು ಇನ್ನಷ್ಟು ಉಲ್ಬಣಗೊಳ್ಳಲಿದೆ. ಇದು ಹೆಣ್ಣುಮಕ್ಕಳ ವಿಷಯದಲ್ಲಿ ಅತ್ಯಂತ ತೀವ್ರವಾಗಿರಲಿದೆ. ಇದರಿಂದಾಗಿ ಹೆಣ್ಣುಮಕ್ಕಳು ಬಾಲ್ಯ ವಿವಾಹಕ್ಕೆ ಬಲಿಯಾಗಬಹುದು ಅಥವಾ ಬಾಲಕಾರ್ಮಿಕರಾಗಿ ಕೆಲಸ ಮಾಡಬೇಕಾಗಬಹುದು, ಇಲ್ಲವೇ ಮಾನವ ಕಳ್ಳಸಾಗಣಿಕೆಯಂತಹ ಜಾಲಕ್ಕೆ ಸಿಲುಕಬಹುದು. ಹೀಗೆ ಹೆಣ್ಣುಮಕ್ಕಳು ಕೇವಲ ಶಿಕ್ಷಣದಿಂದ ಮಾತ್ರವಲ್ಲದೆ, ಗೌರವಯುತ ಜೀವನದಿಂದಲೂ ವಂಚಿತರಾಗುತ್ತಾರೆ. 'ಬೇಟಿ ಪಡಾವೋ, ಬೇಟಿ ಬಚಾವೋ' ಎಂಬ ಘೋಷಣೆ ಬಾಯುಪಚಾರವಷ್ಟೆ! ■


Statement about ownership and other particulars
about newspaper KARMIKA DRUSHTIKONA
to be printed in the first issue after
last day of February

FORM IV (See Rule 8)

Place of Publication : No. 31, 3rd Cross, Malleswaram, Bengaluru-03
Periodicity of its Publication : Monthly
Printer's Name :K.Uma
Nationality : Indian
Address : No. 31, 3rd Cross, Malleswaram, Bengaluru-03
Publisher's Name : K.Uma
Nationality : Indian
Address : No. 31, 3rd Cross, Malleswaram, Bengaluru-03
Editor's Name : K.Uma
Nationality : Indian
Address : No. 31, 3rd Cross, Malleswaram, Bengaluru-03
Name and address of the individuals :Karanataka State Committee, SOCIALIST UNITY CENTRE OF INDIA (COMMUNIST)
Who own the newspapers and Printers or Shareholders holding More than one percent of the total capital

I, K.Uma hereby declare that the particulars given above are true to the best of my knowledge and belief.

Date: 01-03-2026 Sd/-
K.Uma
Signature of Publisher


## ಸ್ಮಾರ್ಟ್ ಕಾರ್ಡ್ ಹೆಸರಿನಲ್ಲಿ ಶಕ್ತಿ ಯೋಜನೆ ದುರ್ಬಲಗೊಳಿಸುವ ಹುನ್ನಾರವನ್ನು ಕೈಬಿಡಿ – ಎಐಎಂಎಸ್‌ಎಸ್ ಆಗ್ರಹ.

ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಕಲ್ಪಿಸುವ ಶಕ್ತಿ ಯೋಜನೆಯಿಂದಾಗಿ ಮಹಿಳೆಯರ ಆದಾಯ ಮತ್ತು ಉಳಿತಾಯ ಹೆಚ್ಚಾಗಿದೆ. ಆಧಾರ್ ಕಾರ್ಡ್ ತೋರಿಸಿ ಈ ರಾಜ್ಯದ ಪ್ರಜೆ ಎಂದು ಖಾತ್ರಿಪಡಿಸಿದರೆ ಸಾಕು ರಾಜ್ಯದ ಎಲ್ಲಾ ಮಹಿಳೆಯರು ಶಕ್ತಿ ಯೋಜನೆಯ ಪ್ರಯೋಜನ ಪಡೆಯಬಹುದು ಎಂಬುದು ನಿಯಮವಾಗಿದೆ. ಆದರೆ ರಾಜ್ಯ ಸರ್ಕಾರ ಈಗ ವಿತರಿಸಲು ಹೊರಟಿರುವ ಸ್ಮಾರ್ಟ್ ಕಾರ್ಡ್ ಮಹಿಳೆಯರಿಗೆ ಅದರಲ್ಲೂ ಗ್ರಾಮಾಂತರ ಹಾಗೂ ನಗರ ಪ್ರದೇಶದ ಬಡ ಮತ್ತು ಅಶಿಕ್ಷಿತ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶವನ್ನು ಕೈತಪ್ಪಿಸುವ ಸಾಧ್ಯತೆಯನ್ನು ಹೊಂದಿದೆ. ಹಾಗೆಯೇ ಭ್ರಷ್ಟರಿಗೆ ದುಡ್ಡು ಮಾಡಲು ಅವಕಾಶ ಕಲ್ಪಿಸಿದಂತಾಗುತ್ತದೆ. ಈ ಕಾರ್ಡಿನಲ್ಲಿ ಪ್ರಯಾಣಿಕರ ಮಾಹಿತಿ ಇರುವ ಚಿಪ್ಪು ಇರುತ್ತದೆ, ಇದರಿಂದ ಶಕ್ತಿ ಯೋಜನೆಯಡಿ ಪ್ರಯಾಣಿಸಿದವರಲ್ಲಿ ಮಕ್ಕಳೆಷ್ಟು, ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ, ಹಿಂದುಳಿದ ವರ್ಗ, ಸಾಮಾನ್ಯ ವರ್ಗದ ಮಹಿಳೆಯರು ಎಷ್ಟು ಎಂಬ ನಿಖರ ಮಾಹಿತಿ ದೊರೆಯುತ್ತದೆ ಎಂದು ಸಮರ್ಥಿಸಿಕೊಳ್ಳಲಾಗುತ್ತಿದೆ. ಹೀಗಾದರೆ ರಾಜ್ಯದ ಮಹಿಳೆಯರಿಗೆ ಯಾವುದೇ ರೀತಿಯ ವರ್ಗ, ಶ್ರೇಣಿಯನ್ನು ನೋಡದೆ ಘೋಷಿಸಿರುವ ಈ ಯೋಜನೆಯನ್ನು ಸ್ಮಾರ್ಟ್ ಕಾರ್ಡ್ ಹೆಸರಿನಲ್ಲಿ ಕುಚೇಷ್ಟೆ ಮಾಡಿದಂತಾಗುತ್ತದೆ. ಹೀಗಾಗಿ ರಾಜ್ಯ ಸರ್ಕಾರ ಈ ಕೂಡಲೇ ಸ್ಮಾರ್ಟ್ ಕಾರ್ಡ್ ವಿತರಿಸುವ ಕೆಲಸವನ್ನು ಕೈಬಿಡಬೇಕು, ರಾಜ್ಯದ ಎಲ್ಲಾ ಮಹಿಳೆಯರಿಗೂ ಈ ಮೊದಲಿನಂತೆಯೇ ಪ್ರಯೋಜನ ಪಡೆಯಲು ಅವಕಾಶ ಮಾಡಿಕೊಡಬೇಕು ಎಂದು ಎಐಎಂಎಸ್‌ಎಸ್ ರಾಜ್ಯ ಸಮಿತಿಯು ಮನವಿ ಮಾಡುತ್ತದೆ. ■

Registered Newspaper
Karmika Drushtikona PGRI/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

## ಸಾರ್ವಜನಿಕ ಶಿಕ್ಷಣಕ್ಕೆ ತಿಲಾಂಜಲಿ ನೀಡುವ ರಾಜ್ಯ ಸರ್ಕಾರದ ಕೆಪಿಎಸ್-ಮ್ಯಾಗ್ನೆಟ್ ಶಾಲಾ ಯೋಜನೆ ವಿರೋಧಿಸಿ

# ಎಐಡಿಎಸ್‌ಓ ಸಂಘಟಿತ 'ಸಾರ್ವಜನಿಕ ಶಿಕ್ಷಣ ಉಳಿಸಿ' ಜಿಲ್ಲಾ ಸಮಾವೇಶಗಳು






ಮಾತನಾಡುತ್ತಿರುವವರು: ಶ್ರೀಮತಿ ರೂಪಾ ಹಾಸನ, ಖ್ಯಾತ ಬರಹಗಾರ್ತಿ.



ಮಾತನಾಡುತ್ತಿರುವವರು: ನಾಡಿನ ಹಿರಿಯ ಸಾಹಿತಿ ಪ್ರೊ. ಅಲ್ಲಮಪ್ರಭು ಬೆಟ್ಟದೂರು






ಮಾತನಾಡುತ್ತಿರುವವರು: ಅಶ್ವಿನಿ ಕೆ.ಎಸ್, ರಾಜ್ಯಾಧ್ಯಕ್ಷರು, ಎಐಡಿಎಸ್‌ಓ ಕರ್ನಾಟಕ




ಮಾತನಾಡುತ್ತಿರುವವರು: ಅಜಯ್ ಕಾಮತ್, ರಾಜ್ಯ ಕಾರ್ಯದರ್ಶಿ, ಎಐಡಿಎಸ್‌ಓ ಕರ್ನಾಟಕ




ರಾಜ್ಯದೆಲ್ಲಡೆ ವಿದ್ಯಾರ್ಥಿ–ಪೋಷಕರು–ಸುಚಿಂತಕರನ್ನು ಒಳಗೊಂಡಂತೆ, ಅನೇಕ ಜಿಲ್ಲಾ ಮಟ್ಟದ ಸಮಾವೇಶಗಳು ಜರುಗಿವೆ. ಹಳ್ಳಿಹಳ್ಳಿಗಳಲ್ಲಿ ಜನ ಸಾಮಾನ್ಯರು ತಮ್ಮ ಊರಿನ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ ಪಣ ತೊಟ್ಟು ಈ ಅಭೂತಪೂರ್ವ ಹೋರಾಟದಲ್ಲಿ ಧುಮುಕಿದ್ದಾರೆ. ಎಲ್ಲೆಡೆಯ ಒಕ್ಕೊರಲ ಕೂಗೆಂದರೆ, 'ಸರ್ಕಾರಿ ಶಾಲೆ ಮುಚ್ಚಲು ನಾವು ಬಿಡೆವು!' 'ನಮ್ಮ ಮಕ್ಕಳಿಗೆ ಶಿಕ್ಷಣ ಬೇಕು, ಅದಕ್ಕೆ ಅವಶ್ಯಕ ಸೌಲಭ್ಯ ಒದಗಿಸಿ', 'ಮ್ಯಾಗ್ನೆಟ್ ಶಾಲೆಗಳಂತಹ ಬಿಳಿಯಾನೆ ನಮಗೆ ಬೇಡವೇ ಬೇಡ!' ಸಮಾವೇಶಗಳಲ್ಲಿ ವಿದ್ಯಾರ್ಥಿ–ಯುವಜನ–ಮಹಿಳಾ–ರೈತ–ಕಾರ್ಮಿಕ ಸಂಘಟನೆಗಳು, ಪೋಷಕರು, ಇತರೇ ಜನಪರ ಸಂಘಟನೆಗಳು, ಅನೇಕಾನೇಕ ಸುಚಿಂತಕರು ಒಗ್ಗೂಡಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಡೆಯನ್ನು ಖಂಡಿಸಿದರು. ಇವರೆಲ್ಲರ ಪ್ರತಿನಿಧಿಗಳನ್ನು ಒಳಗೊಂಡಂತಹ 'ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ'ಗಳು ಅಲ್ಲಿ ಆಯ್ಕೆಯಾಗಿವೆ, ಈ ಹೋರಾಟವನ್ನು ಇನ್ನೂ ಉನ್ನತ ಹಂತಕ್ಕೆ ಕೊಂಡೊಯ್ಯಲು ಮುಂದಾಗಿವೆ.

## ಖಾಲಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲು ಆಗ್ರಹಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ಹಾಗೂ ಸಮಾವೇಶ: ಎಐಡಿವೈಓ – ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ-ಕರ್ನಾಟಕ










ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಆಗ್ರಹಿಸಿ ಎಐಡಿವೈಓ ವತಿಯಿಂದ ಕಳೆದ ಅಕ್ಟೋಬರ್‌ನಿಂದ ದೇಶದಾದ್ಯಂತ ಸಹಿ ಸಂಗ್ರಹ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಯಶಸ್ವಿಯಾದ ಸಹಿ ಸಂಗ್ರಹ ಅಭಿಯಾನದ ನಂತರ ಫೆಬ್ರವರಿ ಕಡೇ ವಾರದಲ್ಲಿ ಪ್ರತಿಭಟನಾ ಸಪ್ತಾಹ ಹಮ್ಮಿಕೊಳ್ಳಲಾಗಿತ್ತು. ಅದರ ಭಾಗವಾಗಿ ಲಿಂಗಸುಗೂರು, ಚಾಮರಾಜ ನಗರ, ಚಿತ್ರದುರ್ಗ, ಬೆಂಗಳೂರು, ಕೊಪ್ಪಳ, ದಾವಣಗೆರೆ, ವಿಜಯನಗರ, ಮೈಸೂರು, ರಾಯಚೂರು ವಿಜಯಪುರಗಳಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖೇನ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಕಲಬುರಗಿಯಲ್ಲಿ ಖಾಲಿ ಹುದ್ದೆಗಳ ಭರ್ತಿಗಾಗಿ ಆಗ್ರಹಿಸಿ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಸಮಾವೇಶದಲ್ಲಿ ಎಐಡಿವೈಓ ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ ಮಾತನಾಡಿದರು.



## ಆಶಾ ಕಾರ್ಯಕರ್ತೆಯರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆ

ಈ ಬಾರಿಯ ಬಜೆಟ್‌ನಲ್ಲಿ ಗೌರವ ಧನ ಹೆಚ್ಚಳ ಹಾಗೂ ತರ್ಕಬದ್ಧಗೊಳಿಸುವ ಹೆಸರಿನಲ್ಲಿ 7,000 ಆಶಾ ಕಾರ್ಯಕರ್ತೆಯರನ್ನು ವಜಾ ಗೊಳಿಸುವ ಪ್ರಕ್ರಿಯೆ ಕೈ ಬಿಡಲು ಹಾಗೂ ಇನ್ನಿತರ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಎಐಯುಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ಬಜೆಟ್ ಪೂರ್ವಭಾವಿಯಾಗಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆಯನ್ನು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಂಘಟಿಸಲಾಗಿತ್ತು.

Published by: K.Uma on behalf of **SOCIALIST UNITY CENTRE OF INDIA-COMMUNIST,** Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed at: MNS Printers Private Limited, 345/4, Bhattarahalli, Old Madras Road, Bengaluru, Karnataka-560049. **Website: www.sucic.org & www.sucic-karnataka.org EDITOR: K.Uma**